# ಪ್ರಸಾದ

ಮಾಸಿಕ

ಜೂನ್ 2025

ಸಂಪುಟ 40 ಸಂಚಿಕೆ 6



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಕವಿರಾಜಮಾರ್ಗ ಕುರಿತು ಆಯೋಜಿಸಿದ್ದ ರಾಷ್ಟ್ರೀಯ ವಿಚಾರಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಚಂದ್ರಶೇಖರ ಕಂಬಾರರವರು ಉದ್ಘಾಟಿಸಿದರು. ಡಾ. ಬಿ.ಎಸ್. ಸುದೀಪ್, ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಪ್ರಧಾನ್ ಗುರುದತ್ತ, ಡಾ. ಪಿ. ಶಿವರಾಜು, ಡಾ. ಎಂ. ಪ್ರಭುರವರುಗಳಿದ್ದಾರೆ (26 ಜೂನ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 6** **ಜೂನ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಬೆಂಗಳೂರು ಕೋಣನಕುಂಟೆಯ ಪಿಸಿಪಿಎ ರಂಗಮಂದಿರದಲ್ಲಿ ಭಾರತೀಯ ಸಂತ ಮಹಾಪರಿಷತ್ತು ಲೋಕಾರ್ಪಣೆಯ ಕಾರ್ಯಕ್ರಮದಲ್ಲಿ ದೇಶ ಹಾಗೂ ವಿದೇಶಗಳಿಂದ ಆಗಮಿಸಿದ್ದ ಪೂಜ್ಯರುಗಳ ಸಮಾಗಮ, ಕನ್ಹೇರಿ, ಆದಿಚುಂಚನಗಿರಿ, ಹರಿಹಪುರ, ಕೈಲಾಸಾಶ್ರಮದ ಪೂಜ್ಯರುಗಳು ಸೇರಿದಂತೆ ಸಂತರು, ಮಠಾಧೀಶರುಗಳನ್ನು ಕಾಣಬಹುದು (16 ಜೂನ್ 2025)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಸಂತ ಮಹಾಪರಿಷತ್ತು : ಭಾರತೀಯರ ಪಾಲಿನ ಆಶಾಕಿರಣ 10
ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಘನಕ್ಕೆ ಘನ 13
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ನೆನಪಿನಂಗಳ 16
ಶ್ರೀಮತಿ ಶಾಂತಾದೇವಿ ಮಾಳವಾಡ

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 19
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ವೀರಶೈವ ಆಕರ ಶೋಧಗಳು (ಆಧುನಿಕ ಕಾಲ) 23
ಡಾ. ಬಿ. ನಂಜುಂಡ ಸ್ವಾಮಿ

ಶರಣ ಸಂಸ್ಕೃತಿ – ಒಂದು ಅವಲೋಕನ 37
ಎಚ್.ಎಸ್. ಸಿದ್ಧಗಂಗಪ್ಪ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು 44
ರಂಗನಾಥ್ ಮೈಸೂರು

ವಾರ್ತಾವಿಹಾರ 48
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ನಿನ್ನ ನಂಬಿ ನೆಚ್ಚಿದೆನೆಂಬುದಕ್ಕೆ ಪ್ರತ್ಯಕ್ಷ

ಅರ್ಥದ ಮೇಲಣ ಆಶೆಯುಳ್ಳನ್ನಕ
ಮರ್ತ್ಯಲೋಕದ ಮಹಾಜಂಜರ ಬಿಡದಯ್ಯ!
ನಾನು ಮರ್ತ್ಯಲೋಕದ ಹಂಬಲ ಹರಿದು
ನಿಮ್ಮ ನಂಬಿ ನಚ್ಚಿದೆನೆಂಬುದಕ್ಕೆ
ಪ್ರತ್ಯಕ್ಷಮಂ ತೋರುತಿರ್ಪೆ
ನೋಡಯ್ಯ ಲಿಂಗವೆ!

ಅನರ್ಘ್ಯವಾದ
ಮುತ್ತುರತ್ನಂಗಳು ಹೊಂಗೊಡದಲ್ಲಿ ತುಂಬಿ
ನಾನಿರ್ದ ಏಕಾಂತವಾಸಕ್ಕೆ ಉರುಳಿ ಬರಲು
ಹಾವ ಕಂಡ ಮರ್ಕಟನಂತೆ
ನಾನು ಅಡ್ಡಮುಖವನಿಕ್ಕಿದೆನಾದರೆ –
ನಿನಗೊಲಿದ ಶರಣನೆಂದು ಭಾವಿಸಿ
ಎನ್ನ ಮರ್ತ್ಯಲೋಕದ ಸಂಕಲೆಯಂ ತರಿದು
ನಿನ್ನ ಗಣಂಗಳ ಒಳಗುಮಾಡು.

ಅದಲ್ಲದೆ –
ಅದರ ಮೇಲೆ
ನಾನು ಕಿಂಚಿತ್ತು ಆಶೆಯಂ ಮಾಡಲೊಡನೆ –
ಚಂದ್ರ-ಸೂರ್ಯಾದಿಗಳುಳ್ಳನ್ನಕ
ಎನ್ನಂ ಹಂದಿ-ನಾಯ ಬಸುರಲ್ಲಿ ಹಾಕದಿದ್ದೆಯಾದಡೆ
ನಿನಗೆ ಅಲ್ಲಮಪ್ರಭುವಿನಾಣೆ !
ಆಳಿನಪಮಾನ ಆಳ್ದಂಗೆ ತಪ್ಪದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ !

– ಘನಲಿಂಗಿದೇವರು

# ಗುರುವಾಣಿ

> ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
> ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥ (ಭಗವದ್ಗೀತೆ, 15.7)

"ಈ ಜಗತ್ತಿನಲ್ಲಿರುವ ಪ್ರತಿಯೊಬ್ಬ ಜೀವಿಯೂ ನನ್ನ ನಿತ್ಯವಾದ ಚಿದಂಶವೆ. ಈ ಜೀವಾತ್ಮನು ತ್ರಿಗುಣಮಯವಾದ ಮಾಯೆಯಲ್ಲಿ ಸ್ಥಿತನಾಗಿದ್ದು ಮನಸ್ಸು ಮತ್ತು ಇಂದ್ರಿಯಗಳಿಂದ ಆಕರ್ಷಿತನಾಗುವನು" ಎನ್ನುವುದು ಭಗವದ್ಗೀತೆಯಲ್ಲಿನ ಕೃಷ್ಣನ ಮಾತು. ಇದರ ಅರ್ಥ ಮಾನವ ಎಂದರೆ ಕೇವಲ ನಶ್ವರವಾದ ಶರೀರವಷ್ಟೇ ಅಲ್ಲ; ಆತನದು ದೇಹದ ಆವರಣದೊಳಗೆ ಅಡಗಿರುವ ದೈವೀಚೇತನದ ಪ್ರತಿಬಿಂಬ.

ಮಾನವನ ಸ್ಥಿತಿಗತಿಯ ಬಗ್ಗೆ ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ತತ್ತ್ವಶಾಸ್ತ್ರಗಳು ಆಳವಾಗಿ ವಿಶ್ಲೇಷಿಸಿವೆ. ಈ ಎಲ್ಲ ಶಾಸ್ತ್ರಗ್ರಂಥಗಳು ಗಂಭೀರವಾಗಿ ಚಿಂತಿಸಿದ ಒಂದು ಮೂಲಭೂತವಾದ ಅಂಶವೆಂದರೆ ಅದು ಮಾನವನಲ್ಲಡಗಿರುವ ದೈವೀಶಕ್ತಿಯಾದ ಚಿದಂಶ. ಚಿದಂಶವೆಂಬ ಪದದಲ್ಲಿ 'ಚಿತ್' ಎನ್ನುವುದು ಮೂಲಪ್ರಕೃತಿಯನ್ನು ಕುರಿತು ಹೇಳುತ್ತದೆ. ಅದರ ಅರ್ಥ ಚೇತನ; ಅದು ಜ್ಞಾನದ, ಸ್ಮರಣೆಯ ತತ್ತ್ವವನ್ನು ಸೂಚಿಸುತ್ತದೆ. 'ಅಂಶ' ಎಂದರೆ ಮೂಲವಸ್ತುವಿನ ಒಂದು ಭಾಗ ಅಥವಾ ತುಣುಕು. ಒಟ್ಟರ್ಥದಲ್ಲಿ ಪರಮಾತ್ಮನ ಚೈತನ್ಯದ ಒಂದು ಕಿರಣವೇ ಮಾನವನ ಚೇತನವಾಗಿದೆ.

ಮನುಷ್ಯನನ್ನು ಸ್ಥೂಲವಾಗಿ ನೋಡಿದರೆ ಮೊದಲಿಗೆ ಗೋಚರವಾಗುವುದು ಆತನ ದೇಹ ಮಾತ್ರ. ಆನಂತರ ಬುದ್ಧಿ ಮತ್ತು ಮನಸ್ಸು. ಆತನ ಕ್ರಿಯೆಗಳಿಂದ ಅವನನ್ನು ಅಳೆಯಬಹುದು. ಕಣ್ಣಿಗೆ ಗೋಚರಿಸುವ ಮತ್ತು ಜ್ಞಾನದಿಂದ ಅರಿಯುವ ಕ್ರಿಯೆಗಳ ನಡುವೆ ಅಜಗಜಾಂತರವಿದೆ. ಬರಿಯ ಕಣ್ಣಿಗೆ ಕಾಣುವುದು ಸ್ಥೂಲ ಶರೀರ ಮಾತ್ರ. ಅದಕ್ಕೆ ಅರಿವಿನ ಗೋಜಿಲ್ಲ. ಹೊರಗೆ ಕಾಣುವ ರೂಪವನ್ನು ಮಾತ್ರ ಅದು ಒಪ್ಪುತ್ತದೆ. ಅದೇ ನಿಜವೆಂದು ಭಾವಿಸುತ್ತದೆ. ಆದರೆ ಸಾಧಾರಣವಾಗಿ ಕಾಣುವ ತೋರಿಕೆಯ ಜಗತ್ತನ್ನು ಅರಿವು ಒಪ್ಪುವುದಿಲ್ಲ. ಆದುದರಿಂದಲೇ ಗೋಪಾಲಕೃಷ್ಣ ಅಡಿಗರು 'ಯಾವ ಮೋಹನ ಮುರಳಿ ಕರೆಯಿತು ದೂರತೀರಕೆ ನಿನ್ನನು, ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು' ಎನ್ನುತ್ತಾ ಈ ಮಣ್ಣಿನ ಕಣ್ಣಿಗೆ,

ತೋರುವ ದೇಹಕ್ಕೆ "ಹೂವು, ಹಾಸಿಗೆ, ಚಂದ್ರ, ಚಂದನ, ಬಾಹುಬಂಧನ"ಗಳ ಕ್ರಿಯೆಯಲ್ಲಿ ಮಾತ್ರ ಆಸಕ್ತಿ ಎನ್ನುವುದನ್ನು ಕಾವ್ಯಮಯವಾಗಿ ನಿರೂಪಿಸುತ್ತಾರೆ. ಈ ಆಸಕ್ತಿಯಲ್ಲಿಯೇ ಇಡೀ ಜೀವನ ಕಳೆದುಹೋಗುತ್ತದೆ. ಕೊನೆಗೊಂದು ದಿನ ಮುಪ್ಪು ಆವರಿಸಿದಾಗ ಒಳಗಿನ ಕಣ್ಣು ತೆರೆಯಬಹುದೇನೋ. ಅಂತರಂಗದ ಕಣ್ಣು ತೆರೆದಾಗ ಅಲ್ಲಿ ಅಂತರತಮಗುರು ಗೋಚರಿಸುತ್ತಾನೆ. ಆದರೆ ಅಂಥ ಅರಿವು ಕೊನೆಗೆ ದಕ್ಕುವುದರಿಂದ ಕೇವಲ ಪರಿತಾಪ ಪಡುವುದಷ್ಟೇ ಉಳಿಯುತ್ತದೆ.

ಈ ಕಾರಣದಿಂದಲೇ ಬಸವಣ್ಣನವರು "ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯುವ ಮುನ್ನ ಮುಪ್ಪಿಂದೊಪ್ಪವಳಿಯುವ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ನಮ್ಮ ಕೂಡಲಸಂಗಮದೇವನ" ಎನ್ನುತ್ತಾರೆ. ಶರೀರ ಗಟ್ಟಿಯಾಗಿದ್ದಾಗ ಲೌಕಿಕ ಆಸಕ್ತಿಯಲ್ಲಿ ಮುಳುಗಿದ್ದು ಮುಪ್ಪು ಬಂದ ಮೇಲೆ ಅರಿವು ದೊರೆತರೆ ಪ್ರಯೋಜನವಿಲ್ಲ. ಇಂದ್ರಿಯಗಳಲ್ಲಿ ಶಕ್ತಿ ಇರುವಾಗಲೇ ಪರಮಾತ್ಮನನ್ನು ಅರಿಯಬೇಕು.

ಈ ಪರತತ್ವವನ್ನು ಅರಿತರೆ ಚಿದಾನಂದ ಪ್ರಾಪ್ತವಾಗುತ್ತದೆ. ಚಿದಾನಂದ ಎಂದರೆ ಶುದ್ಧ ಜ್ಞಾನ ಸ್ವರೂಪ ಅಥವಾ ಜಾಗೃತ ಜೀವನ. ಇದು ಆತ್ಮ ಮತ್ತು ಪರಮಾತ್ಮನ ಮೂಲ ಸ್ವರೂಪ. ಆನಂದ ಅಂದರೆ ಶಾಶ್ವತ ಸಂತೋಷ ಅಥವಾ ತತ್ಸಮಾನವಾದ ಅನುಭವ. ಈ ಎರಡರ ಸಮನ್ವಯವೇ ಚಿದಾನಂದ. ಈ ಸ್ಥಿತಿಯನ್ನು ಪಡೆಯುವುದೇ ಎಲ್ಲ ಜೀವಿಗಳ ಪರಮ ಗುರಿ. ಆತ್ಮ ತನ್ನ ತಾನರಿತ ಬಳಿಕ ಜಗತ್ತಿನ ಎಲ್ಲ ಬಂಧನಗಳಿಂದ ಮುಕ್ತವಾಗುತ್ತದೆ. ಅರಿವಿನ ಚಿದಾನಂದ ಅಲ್ಲಿ ಅರಳುತ್ತದೆ. ಸಂತೋಷ ಮತ್ತು ಅನಂದಕ್ಕೆ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಸಂತೋಷ ಎಂಬುದು ವಸ್ತುವಿನ ಪ್ರಾಪ್ತಿಯಿಂದ ಲಭ್ಯವಾದರೆ, ಆನಂದವು ಅಂಥ ಎಲ್ಲ ಭಾವಗಳಿಗೂ ಅತೀತವಾಗಿರುತ್ತದೆ.

ಈ ಚಿದಂಶದ ತತ್ತ್ವವನ್ನು ಅರಿಯುವಲ್ಲಿ ಆತ್ಮೋದ್ಧಾರದ ಜೊತೆಗೆ ಲೋಕೋದ್ಧಾರವೂ ಅಡಗಿದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುವುದು ದೇವರ ಚಿದಂಶ ಎಂಬ ಅರಿವು ಮೂಡಿದಾಗ, ಶರೀರಗಳು ಮಾತ್ರ ಭಿನ್ನ. ಅವುಗಳೊಳಗಿರುವ ಪರಮಾತ್ಮ ಅಭಿನ್ನನೆಂದು ತಿಳಿದಾಗ 'ತನ್ನಂತೆ ಇತರರು' ಎಂಬ ಭಾವ ಬೆಳೆಯುತ್ತದೆ. ಆಗ ಭಿನ್ನಭಾವ ಅಳಿಯುತ್ತದೆ. "ಲೋಕಾಃ ಸಮಸ್ತಾ ಸುಖಿನೋ ಭವಂತು" ರೂಪು ತಳೆಯುತ್ತದೆ. ಅದೇ ಮಾನವಕಲ್ಯಾಣಕ್ಕೆ ದಾರಿ, ರಹದಾರಿ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಯಶಸ್ಸೇ ಅಂತಿಮ ಗುರಿಯಲ್ಲ, ಸೋಲು ಮಾರಣಾಂತಿಕ ಘಟನೆಯಲ್ಲ. ಸೋಲನ್ನು ಎದುರಿಸುವ ಧೈರ್ಯವೇ ಮುಖ್ಯ. ಇದು ಕ್ರೀಡಾಕ್ಷೇತ್ರದಲ್ಲಿ ಬಹಳ ಪ್ರಚಲಿತವಿರುವ ಸುಪ್ರಸಿದ್ಧ ಉಕ್ತಿ. ಕ್ರೀಡೆಯಿಂದ ಜೀವನವಿಧಾನಕ್ಕೂ ಸ್ಫೂರ್ತಿ ಪಡೆಯಬೇಕು ಎನ್ನುವುದು ನಮ್ಮ ಪೂರ್ವಿಕರ ಭಾವನೆ. ಆದರೆ ಅನೇಕ ಬಾರಿ ಕ್ರೀಡೆಗಳಲ್ಲಿ ಇದನ್ನು ಮರೆತು ವಿನಾಕಾರಣ ದ್ವೇಷಕ್ಕೆ ಮತ್ತು ಮತ್ಸರಕ್ಕೆ ಕಾರಣವಾದ ಅನೇಕ ಸಂಗತಿಗಳು ಇತಿಹಾಸದಲ್ಲಿ ಕಂಡುಬರುತ್ತವೆ. ಈ 'ಕ್ರೀಡೆ' ಪದದ ಮುಂದೆ ಪಂದ್ಯ ಅಥವಾ ಸ್ಪರ್ಧೆ ಎಂಬ ಮತ್ತೊಂದು ಪದವನ್ನು ಸೇರಿಸಿದರೆ ಸಮಾಸಪದ ಆಗುತ್ತದೆ, ಉದಾಹರಣೆಗೆ, ಕ್ರೀಡಾಪಂದ್ಯ ಅಥವಾ ಕ್ರೀಡಾಸ್ಪರ್ಧೆ. ಪಂದ್ಯ ಎಂಬ ಪದಕ್ಕೆ ಪಂಥ, ಜೂಜು, ಬಾಜಿ, ಪಣ, ಒತ್ತೆ, ಸ್ಪರ್ಧೆ, ಪೈಪೋಟಿ ಮುಂತಾದ ಅರ್ಥಗಳಿವೆ. ಕ್ರೀಡೆ ಎಂಬ ಉತ್ತರಪದದ್ದೇ ಇಲ್ಲಿ ಬರುವ ನಿಜವಾದ ಸಮಸ್ಯೆ. ಇದು ಪೂರ್ವಪದದ ಆಶಯಕ್ಕೆ ವಿರುದ್ಧವಾದ ಚಿಂತನೆಯನ್ನು ನಮ್ಮಲ್ಲಿ ಬಿತ್ತುತ್ತದೆ. ಉತ್ತರಪದದ ಅರ್ಥವೇ ಪ್ರಧಾನವಾಗಿಬಿಟ್ಟು ಊರ್ಧ್ವಗಾಮಿಯಾಗಿ ಸಾಗಬೇಕಾದ ಬದುಕನ್ನು ದುರಂತಕ್ಕೆ ತಳ್ಳುತ್ತದೆ.

ಮಹಾಭಾರತದಲ್ಲಿ ಬರುವ ಪಗಡೆಯಾಟ ಇಡೀ ಕುರುವಂಶದ ವಿನಾಶಕ್ಕೆ ಕಾರಣವಾಯಿತು. ಈ ಪಗಡೆಯಾಟ ದುರ್ಯೋಧನ–ಶಕುನಿಯರ ಧೂರ್ತ ಆಲೋಚನೆಗೆ ಒಂದು ಸಾಧನವಾಗಿತ್ತು. ಅದು ಉಂಟುಮಾಡಿದ ಪರಿಣಾಮ ಇಡೀ ಕುರುವಂಶವನ್ನು ಮಾತ್ರವಲ್ಲ, ಸಂಪೂರ್ಣ ಭರತಖಂಡವನ್ನೇ ಆವರಿಸಿತು. ಯುದ್ಧ ಮಾಡಲು ಬಂದವರು ತಮಗರಿವಿಲ್ಲದೆ ಯಾವುದೋ ಒಂದು ಪಕ್ಷವನ್ನು ವಹಿಸಿ ಕಾದಾಡಿ ಹತರಾಗಿ ಹೋಗಿದ್ದನ್ನು ನೋಡಬಹುದು. ಇದರ ಮೂಲ ದ್ರೌಪದಿಯ ಸ್ವಯಂವರವು ಒಂದು ಶೌರ್ಯದ ಸ್ಪರ್ಧೆಯಾಗಿತ್ತೆನ್ನುವುದು ಗಮನಾರ್ಹ. ಹಾಗೆ ನೋಡಿದರೆ ರಾಮಾಯಣದ ಸೀತಾಸ್ವಯಂವರ, ಗ್ರೀಕ್ ಕಾವ್ಯದಲ್ಲಿ ಬರುವ ಹೆಲೆನ್ನಳ ವಿವಾಹಗಳು ಕೂಡ ಒಂದು ಸ್ಪರ್ಧೆಯಾಗಿದ್ದರಿಂದಲೇ ಅನಂತರದ ಮಹಾಯುದ್ಧಗಳಿಗೆ ಕಾರಣವಾಯಿತು ಎಂಬುದು ಇತಿಹಾಸ. ಕ್ರೀಡಾಮನೋಭಾವದಿಂದ ಇರುವ ಬದಲು ಕ್ರೀಡಾಸ್ಪರ್ಧೆಯ ಜಿದ್ದು ಬೆಳೆದಿದ್ದರಿಂದ ಉಂಟಾದ ಪರಿಣಾಮ ಇದು.

ಕ್ರೀಡೆಯ ಮೂಲತತ್ವವನ್ನು ಮರೆತಿರುವುದೇ ಕ್ರೀಡಾಪಂದ್ಯಗಳ ದುರಂತಗಳಿಗೆ ಕಾರಣವಾಗಿದೆ. ಹಾಗೆ ನೋಡಿದರೆ, ಒಲಂಪಿಕ್ ಕ್ರೀಡೆಗಳು ಆರಂಭವಾಗಿದ್ದು ರಾಷ್ಟ್ರರಾಷ್ಟ್ರಗಳ ನಡುವೆ ಸಹಬಾಳ್ವೆಯ ಮನೋಭಾವ ವೃದ್ಧಿಯಾಗಲಿ ಎಂಬ ಕಾರಣಕ್ಕೆ. ಆದರೆ ಜರ್ಮನಿ ಮತ್ತು ಜಪಾನ್ ದೇಶಗಳ ನಡುವಣ ಫುಟ್‌ಬಾಲ್ ಪಂದ್ಯ, ಭಾರತ, ಪಾಕಿಸ್ತಾನ, ಸೌತ್ ಆಫ್ರಿಕಾ, ವೆಸ್ಟ್ ಇಂಡೀಸ್, ಆಸ್ಟ್ರೇಲಿಯಾ, ಇಂಗ್ಲೆಂಡ್‌ಗಳ ನಡುವಣ ಕ್ರಿಕೆಟ್ ಕೇವಲ ಕ್ರೀಡೆಯಾಗಿ ಉಳಿಯುವುದಿಲ್ಲ. ಅದೊಂದು ಅಕ್ಷರಶಃ ಯುದ್ಧವಾಗಿ ಬಿಡುತ್ತದೆ. ಜೂಜು, ಪಣಗಳ ಹಿನ್ನೆಲೆಯಲ್ಲಿ ಅದು ವೀಕ್ಷಕರಿಗೆ ಮಾತ್ರವಲ್ಲ, ಆಟಗಾರರಿಗೂ ಕೂಡ ಒತ್ತಡವನ್ನು ಉಂಟುಮಾಡುವುದನ್ನು ಕಾಣಬಹುದು. ಜೊತೆಗೆ ಆಧುನಿಕ ಕಾಲದ ಪಂದ್ಯಗಳು ಶುದ್ಧ ಕ್ರೀಡೆಗಳಾಗಿ ಉಳಿದಿಲ್ಲ. ಅದು ಸಹಬಾಳ್ವೆ, ಸಾಮರಸ್ಯ ಸೌಹಾರ್ದತೆಗಳ ಸಂಕೇತವಾಗಿಲ್ಲ. ಅದು ಕೇವಲ ವಾಣಿಜ್ಯ ವ್ಯವಹಾರವಾಗಿದೆ. ಮಾತ್ರವಲ್ಲದೆ, ಅಳತೆ ಮೀರಿದ ಭೀಭತ್ಸ ಮನೋರಂಜನೆಯ ಆಗರವೂ ಆಗಿದೆ.

ಈ ವಾಣಿಜ್ಯ ಮತ್ತು ಮನೋರಂಜನೆಯ ಸಂಕರ ಅಪಾಯಕಾರಿ. ಲಾಭ ಮತ್ತು ಹಣಗಳಿಕೆಯೇ ಉದ್ದೇಶವಾಗಿರುವ ವಾಣಿಜ್ಯೋದ್ಯಮಿಗಳು ಇಂದಿನ ಕ್ರೀಡೆಗಳನ್ನು ಏಕಕಾಲಕ್ಕೆ ಪಂದ್ಯವನ್ನಾಗಿಯೂ, ಮನೋರಂಜನೆಯನ್ನಾಗಿಯೂ ಮಾಡಿರುವುದು ದುರದೃಷ್ಟ. ಈ ಸೂಕ್ಷ್ಮ ಸಂಗತಿಗಳ ಅರಿವಿಲ್ಲದೆ ಸಾಮಾನ್ಯ ಜನರು ಈ ವಿಷವರ್ತುಲದಲ್ಲಿ ಸಿಲುಕಿಕೊಂಡು ನರಳುತ್ತಿರುವುದು ಮತ್ತೂ ಆಘಾತಕಾರಿ. ಈ ದುರಂತದ ತಾಜಾ ಉದಾಹರಣೆ ಎಂದರೆ ಇತ್ತೀಚಿನ ಐಪಿಎಲ್ 20–20 ಕ್ರಿಕೆಟ್ ಪಂದ್ಯದಲ್ಲಿ ಆರ್‌ಸಿಬಿ ಸಂಭ್ರಮಾಚರಣೆಯಲ್ಲಿ ಸಂಭವಿಸಿದ ದುರಂತ. ಇದು ಎಲ್ಲರಿಗೂ ಒಂದು ಪಾಠವಾಗಬೇಕಾಗಿದೆ. ಮೊದಲನೆಯದಾಗಿ 20–20 ಕ್ರಿಕೆಟ್ ಪಂದ್ಯವು ಕ್ರಿಕೆಟ್ ಪಂದ್ಯದ ಕ್ರೀಡಾಮನೋಭಾವವನ್ನು ಮಾತ್ರವಲ್ಲ, ಅದರ ಕುಶಲತೆಯನ್ನೂ ನಾಶ ಮಾಡಿದೆ. ಶೀಘ್ರ ಹಣಗಳಿಕೆಗೆ ಅದು ಒಂದು ಸಾಧನವಾಗಿ ಮಾತ್ರ ಉಳಿದಿದೆ. ಯಾವ ಸೂಕ್ಷ್ಮತೆಯೂ ಕೌಶಲವೂ ಇಲ್ಲದೆ, ಬರಿ ಹೊಡಿ–ಬಡಿ ರೀತಿಯ ಆಟವಾಗಿದೆ. ಅದಕ್ಕಿಂತಲೂ ನಾಚಿಕೆಗೇಡಿನ ಸಂಗತಿ ಎಂದರೆ ಈ ಪಂದ್ಯಗಳಲ್ಲಿ ಆಟಗಾರರನ್ನು ಬಹಿರಂಗ ಹರಾಜಿನಲ್ಲಿ ಕೊಂಡುಕೊಳ್ಳುವುದು. ಹೀಗೆ ತಮ್ಮನ್ನು ತಾವು ಮಾರಿಕೊಂಡು ಹಣಕ್ಕಾಗಿಯೇ ಆಡುವ ಇಂಥ ಆಟಗಾರರಿಗೆ ದೇಶಾಭಿಮಾನ, ಭಾಷಾಭಿಮಾನವಿರಲಿ, ಯಾವ ಮಾನವೂ ಇರುವುದಿಲ್ಲ. ಅಲ್ಲಿ ನಡೆಯುವ ಮಾನದಂಡ ಒಂದೇ, ಅದು ಹಣ. ಈ ಹಣ ಮಾಡುವ ಪ್ರವೃತ್ತಿ ಎಷ್ಟಿದೆ ಎಂದರೆ ಪಹಲ್‌ಗಾಮ್ ಹತ್ಯಾಕಾಂಡದ ನಂತರ ಭಾರತ–ಪಾಕಿಸ್ತಾನಗಳ ನಡುವೆ ಯುದ್ಧಸದೃಶ ವಾತಾವರಣ ಉಂಟಾಗಿದ್ದರೂ ಸಹ ಕ್ರೀಡಾಂಗಣದಲ್ಲಿ ಪಂದ್ಯ ಮುಂದುವರೆಸುವ ಮನಃಸ್ಥಿತಿಗೆ ತಲುಪಿತು. ಗಡಿಯಲ್ಲಿ

ಸೈನಿಕರು ತಮ್ಮ ಅಮೂಲ್ಯ ಪ್ರಾಣವನ್ನು ಒತ್ತೆಯಿಟ್ಟು ದೇಶಕ್ಕಾಗಿ ಹೋರಾಡುತ್ತಿರುವಾಗ ನಾವು ಕೇವಲ ಹಣಕ್ಕಾಗಿ ನಡೆಯುವ ಇಂಥ ಪಂದ್ಯವನ್ನು ಜೊಲ್ಲು ಸುರಿಸಿಕೊಂಡು ನೋಡುವ ವಿಕೃತ ಸಂತೋಷದಲ್ಲಿ ಮುಳುಗಿದ್ದೆವು!

ಮತ್ತೊಂದು ವಿಚಿತ್ರ ಸಂಗತಿಯೆಂದರೆ ಇತ್ತೀಚೆಗೆ ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಕ್ರಿಕೆಟ್‌ನ ಅಂತಿಮ ಪಂದ್ಯದಲ್ಲಿ ಆರ್‌ಸಿಬಿ ತಂಡ ಮೊದಲ ಬಾರಿಗೆ ಕಪ್ ಗೆದ್ದಾಗ ನಡೆದ ಅವಘಡ. ಕಪ್ ಗೆದ್ದುದನ್ನು ಟಿವಿ ಮತ್ತು ಮೊಬೈಲ್ ಪರದೆಯಲ್ಲಿ ನೋಡಿ ಲಕ್ಷಾಂತರ ಜನರು ಅದಾಗಲೇ ಸಂಭ್ರಮಿಸಿದ್ದರು. ಹಾಗೆ ಅನಂದಪಟ್ಟ ಮನೋಭಾವ ಒಂದೆಡೆ ಇರಲಿ. ಆ ಸಂಭ್ರಮವನ್ನು ಕರ್ನಾಟಕ ರಾಜ್ಯ ಸರ್ಕಾರ ಸಂಭ್ರಮಿಸಿದ್ದು ನಿಜಕ್ಕೂ ಅಕ್ಷಮ್ಯ ನಡವಳಿಕೆ. ಮುಖ್ಯವಾಗಿ ವಾಣಿಜ್ಯ ಚಟುವಟಿಕೆಯ ಭಾಗವಾದ ಐಪಿಎಲ್ ಪಂದ್ಯಾವಳಿಗಳು ನೈಜ ಕ್ರೀಡಾಭಾವನೆಗೆ ಹೊರತಾದದ್ದು ಎಂದು ಸರ್ಕಾರಕ್ಕೆ ಗೊತ್ತಿದ್ದರೂ ಅಂಥದೊಂದು ಸಂಭ್ರಮದಲ್ಲಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಸೇರಿದಂತೆ ಎಲ್ಲರೂ ಭಾಗವಹಿಸಿದ ವಿವೇಚನಾರಹಿತ ನಡೆಯು ಅಚ್ಚರಿ ಮತ್ತು ದುಃಖ ಉಂಟುಮಾಡುವಂಥದು. ಆರ್‌ಸಿಬಿ ಎನ್ನುವ ಹೆಸರಿನಲ್ಲಿ 'ಬೆಂಗಳೂರು' ಎಂಬ ಪದವಿದ್ದ ಮಾತ್ರಕ್ಕೆ ಇಷ್ಟೊಂದು ಸಂಭ್ರಮಿಸಬೇಕಾಗಿರಲಿಲ್ಲ. ಹನ್ನೊಂದು ಜನರ ಬಲಿಗೆ ಕಾರಣವಾಗಬೇಕಾಗಿರಲಿಲ್ಲ!

ವಾಣಿಜ್ಯೋದ್ಯಮಿಗಳು ಜನರ ಆಲೋಚನೆಗಳನ್ನು ತುಳಿದುಹಾಕಲು ಇಂತಹ ಮನೋರಂಜನೆಯ ಆಟ ಹೂಡುತ್ತಿರುತ್ತಾರೆ. ಅದರ ಸಂಭ್ರಮದಲ್ಲಿ ಶಾಲೆಯಿಂದ ಮಗುವನ್ನು ಕರೆದುಕೊಂಡು ಮನೆಗೆ ತೆರಳಬೇಕಾದ ತಾಯಿಯು ಮನೆ, ಮಗು ಎರಡನ್ನೂ ಮರೆತು ಐಪಿಎಲ್ ಸಂಭ್ರಮದಲ್ಲಿ ಪಾಲ್ಗೊಳ್ಳುವುದು ಆಕೆಯ ವಿವೇಕಶೂನ್ಯತೆಯನ್ನು ತೋರಿಸುತ್ತದೆ. ಆ ನಡೆ, ಆ ನಿಲುವು ಇಂದು ಅದು ಸಾಮೂಹಿಕವಾಗಿರುವುದು ನಿಜಕ್ಕೂ ಖೇದದ ವಿಷಯ.

**ಡಾ. ಎಂ.ಎಸ್. ನಂದೀಶ್ ಹಂಚೆ**

# ಸಂತ ಮಹಾಪರಿಷತ್ತು : ಭಾರತೀಯರ ಪಾಲಿನ ಆಶಾಕಿರಣ*

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

**ಚೈತನ್ಯಂ ಶಾಶ್ವತಂ ಶಾಂತಂ ವ್ಯೋಮಾತೀತಂ ನಿರಂಜನಂ ।**
**ನಾದಬಿಂದು ಕಲಾತೀತಂ ತಸ್ಮೈ ಶ್ರೀಗುರವೇ ನಮಃ ॥**

ಪೂಜ್ಯ ಮಠಾಧೀಶ್ವರರೆ, ಯತಿವರೇಣ್ಯರೆ, ಸಾಧುಸಂತರೆ, ಧರ್ಮಗುರುಗಳೆ, ತಮಗೆಲ್ಲರಿಗೂ ಗೌರವಪೂರ್ವಕ ಪ್ರಣಾಮಗಳು. ಉಪಸ್ಥಿತರಿರುವ ಎಲ್ಲ ಮಾನ್ಯರೆ ಹಾಗೂ ಎಲ್ಲ ಆತ್ಮೀಯರೆ,

ಭಾರತೀಯ ಸಂತ ಮಹಾಪರಿಷತ್ತಿನ ಉದ್ಘಾಟನೆಯ ಅಪೂರ್ವ ಸಂದರ್ಭದಲ್ಲಿ ನಾವೆಲ್ಲಾ ಸಮಾವೇಶಗೊಂಡಿದ್ದೇವೆ. ಇದೊಂದು ಐತಿಹಾಸಿಕ ಹಾಗೂ ಅವಿಸ್ಮರಣೀಯ ಸಂದರ್ಭ.

ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನವಾದುದು ಹಾಗೂ ಸನಾತನವಾದುದು. ಜಗತ್ತು ಇಂದು ನೋಡುತ್ತಿರುವ ಅನೇಕ ವೈಜ್ಞಾನಿಕ ಸಂಶೋಧನೆಗಳು ಹಾಗೂ ಆವಿಷ್ಕಾರಗಳನ್ನು ಪ್ರಾಚೀನ ಋಷಿಮುನಿಗಳು, ತಪಸ್ವಿಗಳು ಹಾಗೂ ಸಂತಮಹಂತರು ಸಾವಿರಾರು ವರ್ಷಗಳ ಹಿಂದೆಯೇ ಜಗತ್ತಿಗೆ ಪರಿಚಯಿಸಿಕೊಟ್ಟರು ಎಂಬುದು ಭಾರತೀಯರಿಗೆ ಹೆಮ್ಮೆಯ ಸಂಗತಿ.

ಇಡೀ ಜಗತ್ತಿನ ಸಮಸ್ತರಿಗೂ ಸುಖ, ಶಾಂತಿ, ನೆಮ್ಮದಿಗಳು ದೊರಕಲೆಂದು ಸದಾಕಾಲವೂ ಬಯಸುವುದು ಭಾರತೀಯ ಸಂಸ್ಕೃತಿಯ ಧ್ಯೇಯ. "ಧರ್ಮೋ ರಕ್ಷತಿ ರಕ್ಷಿತಃ" ಎಂಬುದು ಈ ಸಂಸ್ಕೃತಿಯ ಮೂಲಮಂತ್ರ. ತ್ಯಾಗ, ಕರುಣೆ, ಅಹಿಂಸೆ, ನಡೆ–ನುಡಿಗಳಲ್ಲಿ ಸಾಮರಸ್ಯ, ಸಮಾನತೆ ಇವು ಧರ್ಮವು ಪ್ರತಿಪಾದಿಸುವ ಜೀವನಮೌಲ್ಯಗಳಾಗಿದ್ದು, ನಮ್ಮ ಸನಾತನ ಸಂಸ್ಕೃತಿ ಇದರ ಬುನಾದಿಯ ಮೇಲೆಯೇ ನಿಂತಿದೆ. A country as diverse as India is symbolised by the plurality

---

* ಬೆಂಗಳೂರು ಕೋಣನಕುಂಟೆಯ ಪಿಸಿಪಿಎ ರಂಗಮಂದಿರದಲ್ಲಿ ಭಾರತೀಯ ಸಂತ ಮಹಾಪರಿಷತ್ತು ಲೋಕಾರ್ಪಣೆಯ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ನೀಡಿದ ಭಾಷಣ (16.6.2025)

of its culture. ವಿಶ್ವಭ್ರಾತೃತ್ವವೇ ನಮ್ಮ ಸಂಸ್ಕೃತಿಯ ಸಾರ. ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ಎಂಬಂತೆ ಆತ್ಮಸಾಕ್ಷಾತ್ಕಾರ ಮತ್ತು ಲೋಕಹಿತ ಇವು ದೇಶದ ಎರಡು ಪ್ರಮುಖ ಆದರ್ಶಗಳು. Unity in Diversity ವೈವಿಧ್ಯತೆಯಲ್ಲಿ ಏಕತೆ ಎಂಬ ಮೌಲ್ಯ ನಮ್ಮ ಉಸಿರಾಗಿದೆ. "ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು" ಈ ನೆಲದ ಗುಣ. ಇಂತಹ ಅಪೂರ್ವ ಸಂಸ್ಕೃತಿ ಹಾಗೂ ಪರಂಪರೆಯನ್ನು ಸಂರಕ್ಷಿಸಿ, ಬೆಳೆಸಿ ಜನಮಾನಸಕ್ಕೆ ತಲುಪಿಸಿ ತನ್ಮೂಲಕ ಜಗತ್ತಿನ ಕಲ್ಯಾಣಕ್ಕೆ ಶ್ರಮಿಸಬೇಕಾದ ಅಗತ್ಯವಿದೆ.

ಆಧುನಿಕ ಜಗತ್ತಿನ ನಾಗರಿಕತೆಯ ತಲ್ಲಣಗಳು, ಯುದ್ಧೋನ್ಮಾದಗಳು ಇವುಗಳಿಗೆ ಪರಿಹಾರಗಳನ್ನು ಕಂಡುಕೊಂಡು, ಜಗತ್ತು ಶಾಂತಿ, ನೆಮ್ಮದಿ, ಸಮಾಧಾನ, ಸೌಹಾರ್ದತೆಗಳಿಂದ ಬದುಕಬೇಕಾದುದು ಇಂದಿನ ಅಗತ್ಯವಾಗಿದೆ. ಇದಕ್ಕೆ ಪೂರಕವಾಗಿ ಭಾರತೀಯ ಸಂತ ಮಹಾ ಪರಿಷತ್ತು ಪ್ರಾರಂಭವಾಗುತ್ತಿದೆ. ಇದರ ಧ್ಯೇಯೋದ್ದೇಶಗಳು ಅದಕ್ಕೆ ಪೂರಕವಾಗಿವೆ.

ಈ ಸುಸಂದರ್ಭಕ್ಕೆ ದೇಶದ ಎಲ್ಲ ಭಾಗಗಳಿಂದ ಮತ್ತು ಜಗತ್ತಿನ ಬೇರೆ ಬೇರೆ ದೇಶಗಳಿಂದ ಆಗಮಿಸಿರುವ ಧರ್ಮಗುರುಗಳನ್ನು ನೋಡಿ ಸರ್ವರಿಗೂ ಅತೀವ ಸಂತೋಷವಾಗಿದೆ. ಇಷ್ಟೊಂದು ಜನ ಪೂಜ್ಯರು ಒಟ್ಟಿಗೆ ಸೇರಿರುವುದೇ ಒಂದು ಅಭೂತಪೂರ್ವ ಸಂಗತಿ. ತಮ್ಮ ಎಲ್ಲ ಕಾರ್ಯ ಗೌರವಗಳನ್ನೂ ಬದಿಗೊತ್ತಿ ತಾವು ಸನಾತನ ಸಂಸ್ಕೃತಿಯ ಸಂರಕ್ಷಣೆಗೆ ಮುಂದಾಗಿ ಬಂದಿರುವುದು ತಮ್ಮ ಕಳಕಳಿಗೆ, ಹೃದಯವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ಸಭೆಗೆ ಆಗಮಿಸಿರುವ ಪ್ರತಿಯೊಬ್ಬ ಪೂಜ್ಯರ ಪರಂಪರೆ, ಸಾಧನೆ, ಕೊಡುಗೆಗಳು ವಿಶಿಷ್ಟವಾದುವು. ಒಬ್ಬೊಬ್ಬರ ಪರಿಚಯವನ್ನು ಮಾಡುತ್ತಾ ಹೋಗುವುದು ಅಸಾಧ್ಯ. ಹಾಗೆ ಮಾಡುತ್ತಾ ಹೋದರೆ ಇಂದಿನ ಎರಡು ಅಧಿವೇಶನಗಳ ಸಮಯವೂ ಸಾಲದೆ ಹೋಗಬಹುದು. ಹಾಗಾಗಿ ಆ ಸಾಹಸಕ್ಕೆ ಕೈಹಾಕದೆ ಎಲ್ಲ ಪೂಜ್ಯರುಗಳು, ಯತಿಗಳು, ಸಂತರುಗಳನ್ನು ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಇದು ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಮಾಡಿದ ಸ್ವಾಗತ ಎಂದು ತಾವೆಲ್ಲರೂ ಉದಾರ ಮನಸ್ಸಿನಿಂದ ತಿಳಿಯಬೇಕು. ಅನಿವಾರ್ಯ ಕಾರಣಗಳಿಂದಾಗಿ ಭಾಗವಹಿಸಲು ಸಾಧ್ಯವಾಗದೆ ಇರುವ ಹಲವು ಪೂಜ್ಯರುಗಳು, ಶುಭ ಸಂದೇಶಗಳನ್ನು ಕಳುಹಿಸಿ ಶುಭ ಕೋರಿರುವುದು ಸ್ವಾಗತಾರ್ಹ. ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಸರ್ವರಿಗೂ ಹಾರ್ದಿಕ ಸ್ವಾಗತ.

ಈ ಸಮಾರಂಭವು ಪರಿಷತ್ತಿನ ಮೂಲೋದ್ದೇಶಗಳನ್ನು ಸಾಧಿಸುವ ದಿಕ್ಕಿನಲ್ಲಿ ಬೆಳಕು ಚೆಲ್ಲಲಿದೆ. ಆಶಯ ಭಾಷಣ, ಪ್ರಾಸ್ತಾವಿಕ ನುಡಿ, ಪರಿಷತ್ತಿನ ಧ್ಯೇಯೋದ್ದೇಶಗಳ ವೀಡಿಯೋ ಪ್ರದರ್ಶನಗಳ ನಂತರ ಸಾಧ್ಯವಾದಷ್ಟೂ ಪೂಜ್ಯರುಗಳು ತಮ್ಮಗಳ

ಅಭಿಪ್ರಾಯ, ಸಲಹೆ-ಸೂಚನೆ, ಮಾರ್ಗದರ್ಶನಗಳನ್ನು ಮುಕ್ತವಾಗಿ ಮತ್ತು ವಸ್ತುನಿಷ್ಠವಾಗಿ ನೀಡಬಹುದಾಗಿದೆ. ತಮ್ಮ ಅಭಿಪ್ರಾಯಗಳನ್ನು ಸಾಧ್ಯವಾದಷ್ಟು ಸಂಕ್ಷೇಪವಾಗಿ ವ್ಯಕ್ತಪಡಿಸಿದರೆ ಹೆಚ್ಚು ಪೂಜ್ಯರಿಗೆ ಮಾತನಾಡಲು ಅವಕಾಶ ದೊರೆಯುತ್ತದೆ. ಈಗ ರಚನೆಯಾಗಿರುವ ಪರಿಷತ್ತಿನ ಧ್ಯೇಯೋದ್ದೇಶಗಳು, ಕಾರ್ಯವ್ಯಾಪ್ತಿ, ಅದರ ಆಚರಣೆ ಇವುಗಳಲ್ಲಿ ಸಂಸ್ಕೃತಿಯ ಸಂರಕ್ಷಣೆಯ ದೃಷ್ಟಿಯಿಂದ ಅದರಲ್ಲಿ ಯಾವುದೇ ಸೇರ್ಪಡೆ, ಬದಲಾವಣೆಗಳಿದ್ದರೂ ತಾವೆಲ್ಲ ಮಾರ್ಗದರ್ಶನ ಮಾಡಬಹುದಾಗಿದೆ. ಹಾಗೆ ಸೂಚಿಸಿದ ಸಲಹೆಗಳಲ್ಲಿ ಸೂಕ್ತವಾದವುಗಳನ್ನು ಮುಂದೆ ಅಳವಡಿಸಿಕೊಳ್ಳಲು ಸಹಾಯವಾಗುತ್ತದೆ.

ಉದ್ಘಾಟನೆಯ ಸಮಾರಂಭವು ಅರ್ಥಪೂರ್ಣವಾಗಿ ವ್ಯವಸ್ಥಿತವಾಗಿ, ಯಶಸ್ವಿಯಾಗಿ ನೆರವೇರಲು ವಾಸ್ತವ್ಯ, ಊಟೋಪಚಾರ, ಸಭಾ ಕಾರ್ಯಕ್ರಮಗಳು ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿ ವ್ಯವಸ್ಥೆ ಮಾಡಲಾಗಿದೆ. ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೂಜ್ಯರುಗಳು ಆಗಮಿಸಿದುದರಿಂದ ಒಂದೇ ಸಭಾಂಗಣದಲ್ಲಿ ಎಲ್ಲರಿಗೂ ವ್ಯವಸ್ಥೆ ಮಾಡಲು ಸಾಧ್ಯವಾಗದೆ, ಸಭಾಂಗಣದ ಮತ್ತೊಂದು ಭಾಗದಲ್ಲಿ ಅನುಕೂಲ ಮಾಡಲಾಗಿದೆ. ವ್ಯವಸ್ಥೆಯಲ್ಲಿ ಯಾವುದೇ ಸಣ್ಣಪುಟ್ಟ ಲೋಪದೋಷಗಳಾಗಿದ್ದರು ಉದಾರ ಮನಸ್ಸಿನಿಂದ ಮನ್ನಿಸಿ ತಮ್ಮದೇ ಕಾರ್ಯಕ್ರಮವೆಂದು ತಿಳಿದು ಸಹಕರಿಸುತ್ತಿರಾಗಿ ಭಾವಿಸಿದೆ.

ಈ ಭಾರತೀಯ ಸಂತ ಮಹಾ ಪರಿಷತ್ತು ಎಲ್ಲರಿಗೂ ಸೇರಿದುದು. ಇದರಲ್ಲಿ ಯಾವ ರೀತಿಯ ಪದಾಧಿಕಾರಿಗಳ ಸಾಂಸ್ಥಿಕ ವ್ಯವಸ್ಥೆ ಇರುವುದಿಲ್ಲ. ಇದನ್ನು ತಮ್ಮೆಲ್ಲರ ಮಡಿಲಿಗೆ ಇಡಲಾಗಿದೆ. ಇದನ್ನು ಪೋಷಿಸಿ, ಬೆಳೆಸಿ, ಮುನ್ನಡೆಸಬೇಕಾದುದು ತಮ್ಮೆಲ್ಲರಿಗೂ ಸೇರಿದೆ. ಈ ಪರಿಷತ್ತಿನ ಸ್ಥಾಪನೆಗೆ ಕಾರಣರಾದ ಪೂಜ್ಯರುಗಳಿಗೆ ಹಾಗೂ ಉದ್ಘಾಟನೆಯ ಯಶಸ್ಸಿಗಾಗಿ ಶ್ರಮಿಸಿದವರಿಗೆಲ್ಲ ಹೃತ್ಪೂರ್ವಕವಾದ ಅಭಿನಂದನೆಗಳು. ಈ ಪರಿಷತ್ತು ಭಗವದನುಗ್ರಹದಿಂದ ಮತ್ತು ತಮ್ಮೆಲ್ಲರ ಸಲಹೆ, ಸಹಕಾರ, ಮಾರ್ಗದರ್ಶನ ಹಾಗೂ ಸಕ್ರಿಯ ಸಹಭಾಗಿತ್ವದಿಂದ ನಿರಂತರವಾಗಿ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲೆಂದು ಪ್ರಾರ್ಥಿಸುತ್ತೇವೆ. ತಮ್ಮೆಲ್ಲರಿಗೂ ಮತ್ತೊಮ್ಮೆ ಹೃತ್ಪೂರ್ವಕ ಸ್ವಾಗತ.

**ಸರ್ವೇ ಜನಾಃ ಸುಖಿನೋ ಭವಂತು ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್ ॥**

□

ಪ್ರವಚನಸಾರ

# ಘನಕ್ಕೆ ಘನ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ವಿಶ್ವದ ಮೂಲವಸ್ತು ಪ್ರಕೃತಿ. ಅದು ಗುಣ ಕ್ರಿಯಾಯುಕ್ತ. ಸ್ಥೂಲ, ಸೂಕ್ಷ್ಮ ಜಗತ್ತೆಲ್ಲವೂ ಅದರ ವಿಸ್ತಾರ, ವಿಕಾಸ! ಅದು ಅವ್ಯಕ್ತ. ಅದರಿಂದಾದ ಇದು ಮಾತ್ರ ವ್ಯಕ್ತ. ಅದು ಬುದ್ಧಿ-ಭಾವಗಮ್ಯ. ಈ ಜಗತ್ತು ಬುದ್ಧಿ-ಭಾವ-ಬಾಹ್ಯಕರಣ ಗಮ್ಯ. ಗಮ್ಯವಾದುದು 'ನಿರ್ದೇಶ್ಯ'! ಬೆರಳಿನಿಂದಲೋ ಶಬ್ದಗಳಿಂದಲೋ, ಗಣಿತ ಸೂತ್ರಗಳಿಂದಲೋ ತೋರಿಸಲು ಸಾಧ್ಯ. ಉದಾ: ಹೂವು; ಬೆರಳಿನಿಂದ ನಿರ್ದೇಶ್ಯ. ಭಾವನೆಗಳು, ಶಬ್ದಗಳಿಂದ ನಿರ್ದೇಶ್ಯ. ಅಣುವಿನಲ್ಲಡಗಿದ ಶಕ್ತಿ ಗಣಿತ ಸೂತ್ರದಿಂದ ನಿರ್ದೇಶ್ಯ.

ದೇವನು ಅಪ್ರಾಕೃತ ಸತ್ಯ. ಪ್ರಕೃತಿಯ ಗುಣ, ಕ್ರಿಯೆ ಅವನಲ್ಲಿಲ್ಲ. ಕಾಲ-ದೇಶ-ಮಿತಿಗಳು ಅವನಲ್ಲಿಲ್ಲ. ಆದ್ದರಿಂದ ಅವನು ಸಾಮಾನ್ಯವಾಗಿ ಅನಿರ್ದೇಶ್ಯನು! ನೇರವಾಗಿ ನಿರ್ದೇಶಿಸಲು ಆಗದಿದ್ದರೂ ಸಾಂಕೇತಿಕ, ಸೂಚ್ಯ, ಧ್ವನ್ಯಾತ್ಮಕ ಶಬ್ದ ಬಳಸಿ ಅವನನ್ನು ಭಾವ-ಅನುಭಾವಕ್ಕೆ ತರಲು ಜ್ಞಾನಿಗಳು ಯತ್ನಿಸಿದ್ದಾರೆ. ಉದಾ: ದೇವನು ಅವರ್ಣನೀಯ! ವರ್ಣನೆಗೆ ನಿಲುಕಲಾರ ಎನ್ನುವುದು ವರ್ಣನೆಯೇ! ಆದರೆ ಅದು ಗುಣ ಕ್ರಿಯಾ ಸಂಬಂಧಿತ ವರ್ಣನೆಯಲ್ಲ! ಅದು ವರ್ಣನೆಯಲ್ಲದ ವರ್ಣನೆ! ವರ್ಣನಾ ಶಬ್ದಗಳು ಮೌನವಾದಲ್ಲಿಯೇ ದೇವ! ಮೌನ, ಮಹಾ ಮೌನವದು ದೇವ!

ವ್ಯಾಸ ಮಹರ್ಷಿ ಅವನನ್ನು ಬಹು ಮಾರ್ಮಿಕವಾಗಿ ಯುಕ್ತಿಯಿಂದ 'ಶಾಸ್ತ್ರಯೋನಿ' ಎಂದು ಸೂತ್ರಿಸಿದ. ಶಬ್ದರೂಪ ಶಾಸ್ತ್ರಗಳು ಎಲ್ಲಿಂದ ಹೊಮ್ಮಿದವೋ ಅದು ದೇವ. 'ನಿಶ್ಶಬ್ದಂ ಬ್ರಹ್ಮ'! ಶಾಸ್ತ್ರಗಳಿಂದಾದ ಜ್ಞಾನವು ಎಲ್ಲಿ ಮರೆ-ಮೌನವಾಗುವುದೊ ಅದು !

ಓದಿದರೆ, ಕೇಳಿದರೆ ಅರ್ಥವಾಗುತ್ತದೆ ಅದು ಶಾಬ್ದಬೋಧ. ಆ ಶಬ್ದಗಳು ನಿರ್ದೇಶಿಸುವತ್ತ ಮನಸ್ಸು ಹರಿದು ಅಮನವಾಗಬೇಕು. ಆಗ ತತ್ತ್ವಬೋಧ. ಅದು ಆಗದೆ ಬರೀ ಶಾಬ್ದಬೋಧ ಹೊಂದಿ 'ತಿಳಿದೆವು' ಎಂದು ಭಾವಿಸಿದರದು ಭ್ರಮೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಈ ಭ್ರಮೆ ಅಡಗ ಬೇಕು. ಶಬ್ದ ಮರೆಯಾಗಬೇಕು. ಆ ಶಬ್ದಗಳ ಒಳ ಹಾಗೂ ಸೂಕ್ಷ್ಮ ನಿರ್ದೇಶನದ ಪಥವಿಡಿದು ಮನಸ್ಸು ಸುಳಿಯಬೇಕು, ಅಡಗಬೇಕು! ಆಗ ಅನಿರ್ದೇಶ ವಪುವಿನ ಜ್ಞಾನ. ಅಲ್ಲಿ ಮೌನ ಅನುಭವ.

ನಾನು ಜಗತ್ತನ್ನು ನೋಡುತ್ತೇನೆ, ತೋರಿಸುತ್ತೇನೆ ಎನ್ನುವುದಕ್ಕೆ ಅರ್ಥವಿದೆ. ಆದರೆ

'ನಾನು ದೇವನನ್ನು ತೋರಿಸುತ್ತೇನೆ; ನಾನು ದೇವರನ್ನು ನೋಡುತ್ತೇನೆ' ಎನ್ನುವ ಮಾತಿಗೆ ಅರ್ಥವಿಲ್ಲ. ನೋಡುವ ಹಾಗೂ ತೋರಿಸುವ ಕಾರ್ಯಗಳಿಗೆ ಅನೇಕ ಕರಣಗಳು, ಸಲಕರಣೆಗಳು ಬೇಕು. ಭಗವತ್‌ಕ್ಷೇತ್ರ ಪ್ರವೇಶಿಸಿದೊಡನೆಯೇ ಶಬ್ದಗಳೂ, ಕರಣಗಳೂ ಅಡಗುವುವು! ಅಂದರೆ ಬಾಹ್ಯಾಂತರ ಸ್ಪಂದನೆ ನಿರುದ್ಧವಾಗುವುದು! ಮನಸ್ಸು ಅಮನವಾಗುವುದು! ಭೌತ ಹಾಗೂ ಭಾವನಾತ್ಮಕ ಭೇದ ಮರೆಯಾಗುವುದು! ಪೂರ್ವ ಪಶ್ಚಿಮವೆಂಬ ಭೇದ ಅಡಗಿದಾಗ ನಿಜವಾದ 'ಆಕಾಶ' ಭಾವ. ಹಾಗೆ ಒಳ-ಹೊರ, ಸ್ಥೂಲ-ಸೂಕ್ಷ್ಮ, ಕಾರ್ಯ-ಕಾರಣ ಮುಂತಾದ ಭೇದ ಕರಗಿಹೋದಾಗ ದೇವ-ಭಾವ! ನಿರಪೇಕ್ಷ ಸತ್ಯದರಿವು.

ಎಂತಲೇ ದೇವಜ್ಞಾನವನೀವ ಗುರುವೂ ಕೂಡ ಕೊನೆಯಲ್ಲಿ "ಮೌನ!" 'ಗುರೋಽಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಃ ತು ಛಿನ್ನ ಸಂಶಯಾಃ' ಮೌನವೇ ಅಂತಿಮ ವ್ಯಾಖ್ಯಾನ! ಅದರಿಂದಲೇ ಶಿಷ್ಯರ ಸಂಶಯಗಳೆಲ್ಲ ಶಾಂತ !

ನಿರ್ದೇಶ್ಯವಾದುದೆಲ್ಲ 'ಇದು !' ನಿರ್ದೇಶ್ಯವಲ್ಲದ ಆ ದೇವನು 'ಅದು!' ತತ್!

> ಘನ ಗಂಭೀರ ಮಹಾಘನದೊಳಗಿನ ಘನಕ್ಕೆ ಘನವಾಗಿದ್ದನಯ್ಯಾ|
> ಕೂಡಲ ಸಂಗಮದೇವಯ್ಯನೆಂಬ
> ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ
> ಶಬ್ದ ಮುಗ್ಧವಾದುದೇನೆಂಬೆನಯ್ಯಾ?

ಇದು ಬಸವ ನುಡಿ! ನುಡಿಗೆ ನಿಲುಕದ ನಿಜದ ಅನುಭಾವದುಲಿ!

ಜಗತ್ತು ಗಂಭೀರ ಘನ! ಭವ್ಯ; ವಿಶಾಲ; ಅಂತವಿಲ್ಲದಷ್ಟು ವಿಸ್ತಾರ! ಅದರ ಮೂಲ ಕಾರಣವು ದೇವಾತ್ಮ ಶಕ್ತಿ; ಅದು ಆ ಘನಕ್ಕೆ ಘನ! ಅದರ ಪರಮಾಧಾರ ಚೈತನ್ಯವೇ 'ದೇವ'. ಅವನು ಆ ಗಂಭೀರ ಘನಕ್ಕೆ ಘನವಾದ ಪರಮ ಶಕ್ತಿಗೂ ಮೀರಿದ 'ಘನ!' ಅದನ್ನು 'ನಿಶ್ಶಬ್ದ'-ಸತ್ಯ ಎಂದರು ಶರಣರು. ಈ 'ನಿಶ್ಶಬ್ದಂ ಬ್ರಹ್ಮ' ಘನದ ಘನದ ಘನ; 'ಅನಿರ್ದೇಶ್ಯವಪು' ಎಂಬ ಶಬ್ದ ಬಳಸಿ ಅದನ್ನು ಧ್ಯಾನಿಸುವುದೇ 'ಭಗವಚ್ಚಿಂತನ!

ಇಷ್ಟಲಿಂಗವು ದೃಷ್ಟಿಗೋಚರ. ಪ್ರಾಣಲಿಂಗವು ಮನೋಗೋಚರ. ಭಾವಲಿಂಗವು ಜ್ಞಾನಗೋಚರ. ಮಹಾಲಿಂಗವು ಭಾವಗೋಚರ. ಮನವು ಇಷ್ಟಲಿಂಗವಿಡಿದು ಆ ಮಹಾಲಿಂಗಕ್ಕೇರಿ ಅದರಾಚೆ ಸರಿದರೆ 'ನಿರ್ವಾಣ' ಹೊಂದುತ್ತದೆ. ಆಗ ಅನುಭವಿಸಿದುದು 'ಭಗವಂತ'!

ಯಾವುದೇ ದೃಶ್ಯವಸ್ತು, ದೇವ ಸಂಕೇತ ಅಥವಾ ಮೂರ್ತಿ ತೆಗೆದುಕೊಳ್ಳಿ ಸಾಧನೆಗೆ. ಅದರಲ್ಲಿರುವ ನಿರ್ದೇಶ್ಯಾಂಶ ಬದಿಗೆ ಇರಿಸಿ ಅನುಭವಿಸಿದರೆ ಅದುವೇ ನಿಜ ದೇವರು. ಹಾಗೆ ನೋಡಲು ಕಲಿತರೆ ಎಲ್ಲವೂ ದೇವರು; ಭೇದ ದೃಷ್ಟಿ ಇರಿಸಿ ಹುಡುಕಿದರೆ ಯಾವುದೂ ದೇವರಲ್ಲ !

ನಿಜ ದೇವರಿಗೆ ಯಾವುದಾದರೂ ರೂಪ ಕೊಡಿ, ನಾಮವಿಡಿ. ಬಸವಣ್ಣ 'ಕೂಡಲಸಂಗಮ' ಎಂದು ಹೆಸರಿಸಿದ. ಅಲ್ಲಮ 'ಗುಹೇಶ್ವರ' ನೆಂದ. ನಿಜಗುಣ ಶಿವಯೋಗಿಗಳು 'ಶಂಭುಲಿಂಗ' ಎಂದು ಕರೆದರು. ಕೇವಲ ಶಬ್ದಭೇದ! ರೂಪಭೇದ! ಇದನ್ನು ಅರಿತರೆ ಎಲ್ಲ ಶಾಂತಿ! ಅರಿಯದಿರೆ ಧರ್ಮ-ಧರ್ಮಗಳಲ್ಲಿ ಹೋರಾಟ! ವ್ಯಕ್ತಿ-ವ್ಯಕ್ತಿ, ಸಾಧನೆ-ಸಾಧನೆಗಳಲ್ಲಿ ಘರ್ಷಣೆ!

ಅರಿತವರೆಲ್ಲ ಒಂದೇ! ಸಾಗರದತ್ತ ಹರಿದ ನದಿಗಳೆಲ್ಲ ಒಂದೇ! ಮಡುಗಟ್ಟಿದರೆ ಮಾತ್ರ ಎಲ್ಲ ಬೇರೆ! ಅರಿತ ಸಂತರಿಗೆ ಅದ್ವಯಾನಂದ. ಅರಿಯದವರಿಗೆ ಧರ್ಮ, ದೇವ, ಸಾಧನೆ ಎಲ್ಲ ವಿಷಯದಲ್ಲೂ ಅಸಮಾಧಾನ!

ಇಂಥ ಭಗವಚ್ಚಿಂತನದಿಂದ ಬದುಕು ದಿವ್ಯವಾಗುತ್ತದೆ. ಬದುಕಿನಲ್ಲಿ ಬಹು ದೊಡ್ಡ ಬದಲಾವಣೆಯಾಗುತ್ತದೆ. ಅದರರ್ಥ ದೇಹ ಬದಲಾಗುತ್ತ ದೆಂದಲ್ಲ. ವಿಶ್ವದತ್ತ, ಬಾಳಿನತ್ತ ನೋಡುವ ದೃಷ್ಟಿ ಬದಲಾಗುತ್ತದೆ, ಅಷ್ಟೇ. ಇಲ್ಲಿ ನೀವು ಕುಳಿತಿರುವ ಕ್ಷಣ ಲಾಟರಿ ಸಿಕ್ಕು ನೀವು ಕೋಟ್ಯಾಧೀಶರಾದರೆ ದೇಹ ಬದಲಾಗಿಲ್ಲ, ಭಾವ ಬದಲಿಸಿದೆ.

ಹಾಗೆ ಸಂತರು, ದಾರ್ಶನಿಕರು. ಅವರ ಬದುಕು ಯಥಾಪೂರ್ವ. ಭಾವ ಮಾತ್ರ ಪೂರ್ಣ! ಬೇರೆ ಅವರು ನೂರಾರು ಕಾರ್ಯ ಮಾಡುತ್ತಾರೆ. ಮಾಡುವ ಮಾಟದಲ್ಲಿ ಅವರಿರುವುದಿಲ್ಲ.

ಇದೊಂದು ಭಾರತೀಯ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅದ್ಭುತ ಅನುಭವ! ಪಾಲ್ ಬ್ರಂಟನ್ ಭಾರತ ದೇಶಕ್ಕೆ ಬಂದ. ಬಹಳ ದೊಡ್ಡ ಮನುಷ್ಯ. ಸಂತರನ್ನು ಕಾಣಬೇಕು ಎಂದು ಹುಡುಕಾಡುತ್ತ ಹುಡುಕಾಡುತ್ತ ರಮಣ ಮಹರ್ಷಿಗಳ ಹತ್ತಿರ ಬಂದ. ರಮಣ ಮಹರ್ಷಿಗಳನ್ನು ಕಂಡು ಅಲ್ಲಿ ಅನುಭೂತಿಯನ್ನು ಪಡೆದ. ತಿರುಗಿ ತನ್ನ ದೇಶಕ್ಕೆ ಹೋಗುವಾಗ ಹೇಳಿದ ಗೆಳೆಯನಿಗೆ–"ನಾನು ಬರುವಾಗ ಏನೋ ಕುತೂಹಲ! ಹೊಯ್ದಾಟ! ಇಂದು ಅದು ಇಲ್ಲ. ಬರುವಾಗ ನಾನು ಪಾಲ್ ಬ್ರಂಟನ್; ಈಗ ಪಾಲನಿಲ್ಲ; ನಾನು ಮಾತ್ರ ಇದ್ದೇನೆ." ಇದು ಆಧ್ಯಾತ್ಮಿಕ ಪವಾಡ!

□

# ನೆನಪಿನಂಗಳ

**ಶ್ರೀಮತಿ ಶಾಂತಾದೇವಿ ಮಾಳವಾಡ**

ಶ್ರೀ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 'ಇನ್ನಿಲ್ಲ' ಎಂಬ ವಾರ್ತೆ ಕೇಳಿ ನಮ್ಮಿಬ್ಬರ ಮನಸ್ಸಿಗೆ ಆಘಾತವಾಯಿತು. ಆ ಮಾತನ್ನು ನಂಬಲಿಕ್ಕೇ ಆಗಲಿಲ್ಲ. ಕಳೆದ ಮೂವತ್ತು ವರ್ಷಗಳಿಂದ ಅವರ ದರ್ಶನಾಶೀರ್ವಾದ ಪಡೆಯುತ್ತ ಬಂದ ನಮ್ಮ ಪಾಲಿಗೆ ಅವರು ಗುರು, ತಂದೆ ಹಾಗೂ ಅಂತಃಕರುಣೆಯ ತಾಯಿ ಆಗಿದ್ದರು. ಹೋದ ವರುಷ ಡಿಸೆಂಬರ್‌ನಲ್ಲಿ ವಿಶ್ವಕನ್ನಡ ಸಮ್ಮೇಳನಕ್ಕೆ ಮೈಸೂರಿಗೆ ಹೋದಾಗ ಪೂಜ್ಯರ ದರ್ಶನ ಪಡೆದೆವು. ಪ್ರಸಾದರೂಪ ಮೃಷ್ಟಾನ್ನ ಭೋಜನ ಮಾಡಿದೆವು, ಶ್ರೀಗಳವರ ಆಶೀರ್ವಾದ ಪಡೆದೆವು. ನಾಲ್ಕು ದಿನ ಇದ್ದು ವಿಶ್ರಾಂತಿಪಡೆದು ಹೋಗಿರಿ ಎಂದು ತಾಯವಾತ್ಸಲ್ಯದಿಂದ ಹೇಳಿದ ಶ್ರೀಗಳವರು ಇನ್ನಿಲ್ಲ ಎಂಬ ನೋವು ಮರೆಯಲಾರದಂತಹದು. ಆದರೆ ಅಂತಹ ತಪೋನಿಷ್ಠ ಮಹಾಚೇತನ ನಮ್ಮೆಲ್ಲರಿಗೆ ಮಾರ್ಗದರ್ಶಿಯಾಗಿರಬಲ್ಲದೆಂಬ ಆತ್ಮವಿಶ್ವಾಸ ನನ್ನದು.

ದುಂಡುಮುಖ; ಭಕ್ತಿ, ಜ್ಞಾನ, ವೈರಾಗ್ಯಗಳ ಸಂಕೇತದಂತೆ ಅವರ ಹಣೆಯಲ್ಲಿ ಸದಾ ಶೋಭಿಸುವ ಭಸ್ಮ; ಆಧ್ಯಾತ್ಮ ತೇಜಸ್ಸಿನಿಂದ ಕಂಗೊಳಿಸುವ ಕಣ್ಣುಗಳು, 'ಶಿಶು ಕಂಡ ಕನಸಿನಂತಹ ಮಂದಸ್ಮಿತ ವದನ 'ಯಾರೇ ಅವರ ದರ್ಶನಕ್ಕೆ ಹೋದರೂ ಇವನಾರು?' ಎಂದು ಎಂದೂ ಕೇಳಲಿಲ್ಲ. 'ಇವನಮ್ಮವ' ಎಂಬ ಶ್ರೀಗಳವರ ವಿಶಾಲ ಮನೋಭಾವನೆ ಅವರನ್ನು ನಿಜವಾದ ಜಗದ್ಗುರುವನ್ನಾಗಿಸಿತ್ತು. ಸದಾ ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ಮಹಾನುಭಾವರವರು.

ಶ್ರೀ ಮಾಳವಾಡರು ಬಸವೇಶ್ವರ ಅಷ್ಟಶತಮಾನೋತ್ಸವ ಕಾಲಕ್ಕೆ 'ಬಸವೇಶ್ವರ' ಗ್ರಂಥದ ಸಂಪಾದನಾಕಾರ್ಯಕ್ಕಾಗಿ ಸುತ್ತೂರು ಮಠದಲ್ಲಿ 15 ದಿನವಿದ್ದರು. ಆಗ ಶ್ರೀಗಳವರೊಂದಿಗೆ ಆತ್ಮೀಯತೆ ಬೆಳೆದು ಬಂದಿತು. ಆಗ ಶ್ರೀಗಳವರು ಬಹುಶಃ ಪ್ರತಿನಿತ್ಯವೂ ಅರಮನೆಗೆ ಹೋಗಿ ರಾಜಕುಟುಂಬದವರಿಗೆ ಆಧ್ಯಾತ್ಮಿಕ ಸಾಂತ್ವನ ಒದಗಿಸುತ್ತಿದ್ದರಂತೆ. ಕೆಲವರ್ಷಗಳ ನಂತರ ನಾವಿಬ್ಬರೂ ಪುಟ್ಟ ವಿಜಯಾ, ಚೆನ್ನಬಸವರೊಂದಿಗೆ ನಾಲ್ಕುದಿನ ಮಠದಲ್ಲಿ ವಾಸವಾಗಿದ್ದೆವು. ಆಗ ಶ್ರೀಗಳವರು ಒಂದು ದಿನ ತಮ್ಮ ಕಾರು ಕೊಟ್ಟು ಶಂಭುಲಿಂಗನ ಬೆಟ್ಟ, ಮಾದೇಶ್ವರ ಬೆಟ್ಟ, ಸುತ್ತೂರು ನೋಡಿ ಬರುವ ಏರ್ಪಾಡನ್ನು ಮಾಡಿದರು. ಊಟದ

ತೊಂದರೆಯಾಗಬಾರದೆಂದು ಅಡಿಗೆಗೆ ಮಾರ್ಗದರ್ಶನಕ್ಕೆ ಶಿವಣ್ಣನನ್ನು ಕಳಿಸಿದರು. ಆ ಪವಿತ್ರ ಸ್ಥಾನಗಳನ್ನು ನೋಡಿ ಧನ್ಯತೆಯ ಭಾವ ನಮ್ಮಲ್ಲಿ ಮೂಡಿತು. ಆ ಪ್ರವಾಸ, ಶ್ರೀಗಳವರ ಪ್ರೀತಿ ವಾತ್ಸಲ್ಯ ಇನ್ನೂ ನಮ್ಮಿಬ್ಬರ ಮನದಲ್ಲಿ ಬರುವ ಹಲವಾರು ಹಳ್ಳಿಗಳಲ್ಲಿ ಪೂಜ್ಯರು ನಡೆಸುತ್ತಿದ್ದ ಶಾಲೆಗಳು ಪ್ರಸಾದನಿಲಯಗಳು ಪೂಜ್ಯರ ಶಿಕ್ಷಣಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿವೆ.

ಗೋಲಿಗುಂಡು, ಬೆಣೆಫಣಿ ಆಡುವ ಬಾಲ್ಯದ 12ನೆಯ ವರುಷಕ್ಕೆ ಸುತ್ತೂರು ಪೀಠದ ಅಧಿಕಾರಸ್ಥರಾದ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ತಮ್ಮ ಗುರುಗಳಾದ ಜಗದ್ಗುರು ಶಿವರಾತ್ರೀಶ್ವರರ ನೆರಳಿನಂತೆ ಬಾಳಿದರು. ತಪೋನಿಷ್ಠರೂ, ಸದಾ ಕಾರ್ಯನಿರತರೂ, ಜನಸುಖ ಬಯಸುತ್ತಿದ್ದವರೂ ಆದ ಆ ಶ್ರೀಗಳವರು ಕೋಟಿ ಕೋಟಿ ಪಂಚಾಕ್ಷರಿ ಮಂತ್ರ ಬರೆದು, ಮಂತ್ರ ಮಹರ್ಷಿ ಎಂದು ಖ್ಯಾತರಾದರು. ಅಂಥವರ ಪ್ರೀತಿ ವಿಶ್ವಾಸ ಗಳಿಸಿದರು. ಆ ಹಿರಿಯ ಜಗದ್ಗುರುಗಳವರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ತಮ್ಮ ತಪೋಶಕ್ತಿಯನ್ನೇ ಧಾರೆ ಎರೆದರು. ಸ್ವಾಮಿ ವಿವೇಕಾನಂದರಿಂದ ರಾಮಕೃಷ್ಣ ಪರಮಹಂಸರ ಹೆಸರು ವಿಶ್ವವ್ಯಾಪಿಯಾದಂತೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅನ್ನದಾಸೋಹ, ಜ್ಞಾನದಾಸೋಹದ ಮೂಲಕ ಸುತ್ತೂರು ಶ್ರೀಮಠದ ಕೀರ್ತಿ ಎಲ್ಲೆಡೆ ಹರಡುವಂತೆ ಮಾಡಿದರು. ಅವರ ಪ್ರಸಾದನಿಲಯದಲ್ಲಿದ್ದು ಶಿಕ್ಷಣ ಪಡೆದ ನೂರಾರು ಜನ ಪ್ರತಿಭಾವಂತರು ಕನ್ನಡನಾಡಿನ ಗಣ್ಯ ವ್ಯಕ್ತಿಗಳಾಗಿದ್ದಾರೆ. ಗುರುಶಿಷ್ಯರಿದ್ದರೆ ಧಾರವಾಡದ ಮೃತ್ಯುಂಜಯಪ್ಪಗಳಂತೆ, ಮಹಾಂತ ಸ್ವಾಮಿಗಳಂತಿರಬೇಕು. ಜಗದ್ಗುರು ಶಿವರಾತ್ರೀಶ್ವರರು ಹಾಗೂ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಂತಿರಬೇಕು ಎಂಬ ನಾಣ್ಣುಡಿಯಂತೆ ಈ ಇಬ್ಬರೂ ಮಹಾಸ್ವಾಮಿಗಳು ಬಾಳಿಬೆಳಗಿದರು. ಹಿರಿಯ ಸ್ವಾಮಿಗಳು ತೋರಿದ ಭಕ್ತಿ, ಜ್ಞಾನ, ವೈರಾಗ್ಯ ಮಾರ್ಗದಲ್ಲಿ ಸಾಗುತ್ತಾ, ಅನ್ನದಾಸೋಹ, ಜ್ಞಾನದಾಸೋಹವನ್ನು ಬೆಳೆಸುತ್ತ ನಾಡಿಗೇ ಬೆಳಕಾದರು. 'ಅರ್ಚನ' ಅವರ 70ನೇ ವರ್ಧಂತಿ ಸಂದರ್ಭದಲ್ಲಿ ಅರ್ಪಿಸಿದ ಸಂಭಾವನಾ ಗ್ರಂಥ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ನಾವಿಬ್ಬರೂ, ಕರ್ನಲ್ ತಣಬರಗಿಮಠ ದಂಪತಿಗಳು ಮತ್ತೊಂದು ಸಲ ಮೈಸೂರಿಗೆ ಹೋದಾಗ ಶ್ರೀಮಠದಲ್ಲಿ ಎರಡು ದಿನ ಇದ್ದೆವು. ಆಗ ಶ್ರೀಗಳವರಿಗಿದ್ದ ಆಧ್ಯಾತ್ಮ ಚಿಂತನೆ, ಲೋಕಚಿಂತನೆಗಳ ಆಳದ ಅನುಭವವಾಯಿತು. ಈ ಪೂಜ್ಯರ ಮೂಲಕ ನಮಗೆ ಮೈಸೂರು ಪಂಚಗವಿಮಠದ ಮಹಾಮೇಧಾವಿ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ದರ್ಶನ ಒದಗಿಬಂದಿತ್ತು. ಪ್ರೊ. ಮಲ್ಲೇದೇವರು ಧಾರವಾಡದಲ್ಲಿ ಕಟ್ಟಿಸಿದ ಕಟ್ಟಡದ ಗೃಹಪ್ರವೇಶಕ್ಕೆ ಜಗದ್ಗುರುಗಳವರು ಆಗಮಿಸಿದ್ದರು. ಆಗ ನಮ್ಮ 'ಪ್ರಶಾಂತ'ಕ್ಕೂ ಆಗಮಿಸಿದ್ದರು. ಆ ಸಂದರ್ಭದಲ್ಲಿ ಕಲ್ಯಾಣನಗರದ ಸೋದರಿಯರು ಹೇಳಿದ ಭಕ್ತಿಗೀತೆಗಳನ್ನು ಕೇಳಿ ಆನಂದಿಸಿದರು; ತುಂಬು ಹೃದಯದಿಂದ ಆಶೀರ್ವದಿಸಿದರು. ಹೀಗೆ ನೆನಪಿನ ಕಣಜದಿಂದ ಒಂದೊಂದೇ ನೆನಪು ಹೊರ ಬರುತ್ತಿವೆ.

ಪೂಜ್ಯ ಜಗದ್ಗುರುಗಳವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ ಪ್ರಥಮ ಸಮ್ಮೇಳನದ ಏರ್ಪಾಡು ಕೈಕೊಂಡಿದ್ದರು. ಆ ಸಮ್ಮೇಳನಕ್ಕೆ ಮಾಳವಾಡರು ಬರಲೇಬೇಕೆಂದು ಆಮಂತ್ರಣ ಕಳಿಸಿದರು. ಇತ್ತೀಚೆಗೆ ಯಾವ ಕಾರ್ಯಕ್ರಮಕ್ಕೂ ಒಪ್ಪದ ಮಾಳವಾಡರು ಶ್ರೀಗಳವರ ಪ್ರೀತಿ, ವಾತ್ಸಲ್ಯಕ್ಕೆ ಮಣಿದು ಒಪ್ಪಿ ಕೊಂಡರು. ಅವರು ಭಾಷಣದ ಸಿದ್ಧತೆ ನಡೆಸಿದಾಗಲೇ ಶ್ರೀಗಳವರು ಭೌತಿಕವಾಗಿ ನಮ್ಮೊಂದಿಗಿಲ್ಲ ಎಂಬ ಸಮಾಚಾರ ನಮ್ಮನ್ನು ದಿಗ್ಭ್ರಾಂತ ಗೊಳಿಸಿತು. ತಮ್ಮ ಭಾಷಣ ಸಿದ್ಧಗೊಳಿಸಿದ ಮಾಳವಾಡರು ಅದು ಶ್ರೀಗಳವರ ಸ್ಮೃತಿಗೆ ಅರ್ಪಿತವೆಂದು ಭಾವಿಸಿದರು. ನಮ್ಮೆಲ್ಲರ ಮನದಲ್ಲಿ ಜಗದ್ಗುರುಗಳವರ ನೆನಪು ಸದಾ ಹಚ್ಚಹಸಿರಾಗಿದೆ. ನಾವೆಲ್ಲ ಅವರ ಕೃಪಾಶೀರ್ವಾದದ ಹೊನಲಲ್ಲಿ ಬಾಳೋಣ. □

ಕಾಯ ಲಿಂಗಕ್ಕರ್ಪಿತವಾದಡೆ ಕರ್ಮವಿಲ್ಲ
ಜೀವ ಲಿಂಗಕ್ಕರ್ಪಿತವಾದಡೆ ಜನಿತವಿಲ್ಲ
ಭಾವಲಿಂಗಕ್ಕರ್ಪಿತವಾದಡೆ ಭ್ರಮೆಯಿಲ್ಲ
ಅರಿವು ಲಿಂಗಕ್ಕರ್ಪಿತವಾದ ಬಳಿಕ ಪ್ರಸಾದವ
ಗ್ರಹಿಸಿದನಾಗಿ, ಕುರುಹಿಲ್ಲ
ಮಾಯಾಪ್ರಪಂಚನತಿಗಳೆದು ನಿಮಗರ್ಪಿಸಬಲ್ಲನಾಗಿ
ಆತನು ಶರಣನು–
ಬೆಚ್ಚಂತೆ, ಬೆರಸಿ ಅಚ್ಚೊತ್ತಿದಂತೆ
ಅಪ್ಪು ಒಳಕೊಂಡ ವಾರಿಕಲ್ಲಂತೆ
ಜ್ಯೋತಿಯುಂಡ ತೈಲದಂತೆ, ಜಲವುಂಡ ಮುತ್ತಿನಂತೆ
ಬಯಲುಂಡ ಬೆಳಗಿನಂತೆ ಇರ್ದನಾಗಿ
ಮಹಾಘನ ಸದ್ಗುರು ಸಿದ್ಧಸೋಮನಾಥಾ
ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂದೆ

**ಅಮುಗಿ ದೇವಯ್ಯ**

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಚಂ॥ ಅಳಿಕುಲಮಿಂದ್ರನೀಲಮಣಿಪಚ್ಚೆ ಪಸುರ್ಕ್ಮಿಡಿ ತಳ್ತ ಮಲ್ಲಿಕಾ ।
ಸುಲಲಿತ ಕುಟ್ಮಲಾಳ ಪೊಸಮುತ್ತು ಕೊನರ್ಪವಳಂ ಪೊದಳ್ದು ಸಂ ॥
ಗಳಿಸಿರೆ ತನ್ನೊಳೊಪ್ಪಿದುದು ಮಾಮರಮಲ್ಲ ಮನೋಜ್ಞ ರತ್ನ ಸಂ ।
ಕುಳಮನೆ ಕಾತ ಕಲ್ಪಕುಜದಂತೆ ಮರುದ್ಗತನಂದನಸ್ಥಿತಂ ॥ ಮತ್ತಂ ॥

**ಟೀಕ** ॥ ಅಳಿಕುಲಂ – ತುಂಬಿವಿಂಡು, ಇಂದ್ರನೀಲಮಣಿ – ಹರಿನೀಲರತ್ನಗಳು, ಪಸುರ್ಕ್ಮಿಡಿ – ಪಸುರುಗಾಯಿ, ಪಚ್ಚೆ ಮರಕತ ರತ್ನವು, ಮಲ್ಲಿಕಾ – ಮಲ್ಲಿಗೆಯ, ಸುಲಲಿತ – ಕೋಮಲವಾದ, ಕುಟ್ಮಲ – ಮೊಗ್ಗೆಗಳ, ಅಳಿ – ಸಾಲು, ಪೊಸ ಮುತ್ತು – ನೂತನ ಮೌಕ್ತಿಕ ರತ್ನವು, ಕೊನರ್ – ಚಿಗುರು, ಪವಳಂ – ಪ್ರವಾಳ ರತ್ನವು, ಇವು ಪೊದಳ್ದು – ವ್ಯಾಪಿಸಿ, ಸಂಗಳಿಸಿರೆ – ಸೇರಿಯಿರಲು, ತನ್ನೊಳು – ತನ್ನೊಳಗೆ, ಮಾಮರಂ – ಮಾವಿನ ಮರವು, ಮರುದ್ಗತನಂದನ ಸ್ಥಿತಂ – ಮರುತ್ ದೇವತೆಗಳಿಂದ, ಗತ – ಸೇರಿದ, ನಂದನ–ಇಂದ್ರಾರಾಮದಲ್ಲಿ, ಸ್ಥಿತಂ – ಇರುವ, ಮನೋಜ್ಞರತ್ನ ಸಂಕುಳಮನೆ, ಮನೋಜ್ಞ – ಚೆಲುವಾದ, ರತ್ನ – ಮಣಿಗಳ, ಸಂಕುಳಮನೆ – ಸಮೂಹವನ್ನೆ, ಕಾತ – ಫಲಿಸಿದ, ಕಲ್ಪಕುಜದಂತೆ – ಕಲ್ಪವೃಕ್ಷದ ಹಾಗೆ, ಮರುದ್ಗತ – ಗಾಳಿಯಿಂದ ಕೂಡಿದ, ನಂದನ – ತೋಟದಲ್ಲಿ, ಸ್ಥಿತಂ – ಇರುವುದಾಗಿ, ಒಪ್ಪಿದುದು – ಶೋಭಿಸಿತು.

**ತಾ॥** ದೇವರ್ಕಳು ಸಂಚರಿಸುವ ನಂದನವನದಲ್ಲಿರುವ ಕಲ್ಪವೃಕ್ಷದೊಳು ರತ್ನಗಳು ಫಲಿಸಿರುವವು, ಗಾಳಿಯು ಸಂಚರಿಸುವ ತೋಟದೊಳಗಿನ ಮಾವಿನಮರದಲ್ಲಿ ತುಂಬಿ ಪಸುರ್ಗಾಯಿ ಮಲ್ಲಿಗೆ ಮೊಗ್ಗು ಕೊನರೂ ಕ್ರಮವಾಗಿ ನೀಲ ಪಚ್ಚೆ ಮುತ್ತು ಹವಳಗಳ ಹಾಗೆ ಇದ್ದವು. ಆದ್ದರಿಂದ ಮಾಮರವು ಕಲ್ಪವೃಕ್ಷದ ಹಾಗಿತ್ತು. ಉಪಮಾಲಂಕಾರವು ಮರುದ್ಗತನಂದನಸ್ಥಿತಿ ಸಾಧಾರಣಧರ್ಮ್ಮಂ ಮರುಚ್ಛಬ್ದವು ಕ್ಲಿಷ್ಟವಾಗಿದೆ. ॥ 45 ॥

ವೃ॥ ತಳಿರೆಳೆಮಾದಳಂ ಪುದಿದ ಪೂಗುಡಿಯಲ್ಲಿ ಮಡಲ್ತ ಮಲ್ಲಿಯು ।
ಜ್ವಳ ಮುಕುಳಾಳಿ ಮುತ್ತು ಪವಳಂ ಕೊನರಾಗವನಾಬ್ಧಿಯುಲ್ಲಿ ಕಂ ।
ಗೊಳಿಪ ಪಡಂಗು ಮಾಮರಮದಾಗಿರೆ ಕೋಗಿಲೆ ನೆಟ್ಟ ಕೊಂಬಿನೋ ।
ಳ್ತೆಳೆದುದು ಕೂಪಕಂಬದ ತುದಿವತ್ತಿದ ನಾವಿಕನೊಂದು ಲೀಲೆಯಂ ॥

**ಟೀಕೆ** ॥ ತಳಿರ್ – ಚಿಗುರಿದ, ಎಳೆಮಾದಳಂ – ಎಳೆ ಮಾವಿನೆಲೆಯು, ಪುದಿದ – ತುಂಬಿದ, ಪೂಗುಡಿಯಲ್ಲಿ – ಹೂವಿನ ಕುಡಿಯಲ್ಲಿ, ಮಡಲ್ತ – ತುಂಬಿದ, ಮಲ್ಲಿಯ – ಮಲ್ಲಿಗೆಯ, ಉಜ್ವಲ – ಹೊಳೆಯುವ, ಮುಕ್ಕುಳ – ಮಗ್ಗುಗಳ, ಅಳಿ–ಸಾಲೆ, ಮುತ್ತು – ಮೌಕ್ತಿಕವಾಗಿಯು, ಕೊನರ್ – ಚಿಗುರೇ, ಪವಳಂ – ಹವಳವು, ಆಗೆ – ಆಗಲಾಗಿ, ವನಾಬ್ಧಿಯಲ್ಲಿ – ತೋಟವೆಂಬ ಕಡಲಿನೊಳಗೆ, ಕಂಗೊಳಿಪ – ಕಾಣಿಸುವ, ಮಾಮರಂ – ಮಾವಿನಮರವು, ಪಡಂಗು – ಹಡಗು ಆಗಿಯಿರೆ, ನೆಟ್ಟಕೊಂಬಿನೋಳ್ – ಮಧ್ಯಶಾಖೆಯಲ್ಲಿ ಕೋಗಿಲೆಯು, ಕೂಪಕಂಭಂ – ಮಧ್ಯಸ್ತಂಭದ, ತುದಿವತ್ತಿದ – ಕೊನೆಗೇರಿದ, ನಾವಿಕನ – ಹಡಗು ನಡೆಯಿಸುವವನ, ಒಂದು ಲೀಲೆಯಂ – ಒಂದು ಬಗೆಯನ್ನು, ತಳೆದುದು – ಧರಿಸಿತು.

**ತಾ** ॥ ವನವು ಸಮುದ್ರದ ಹಾಗೂ ಮಲ್ಲಿಗೆ ಮೊಗ್ಗು ಮುತ್ತಿನಂತೆಯು, ಮಾವಿನ ಚಿಗುರು ಹವಳದಂತೆಯು, ಮಾವಿನಮರವು ಹಡಗಿನ ಹಾಗೂ ಅದರ ನಡುವಣ ರೆಂಬೆ ಹಡಗಿನ ಕಂಬದ ಹಾಗೂ ಕೋಗಿಲೆಯು ಅದರ ಮೇಲಣ ನಾವಿಕನ ಹಾಗೂ ಇತ್ತೆಂದು ರೂಪಕೋಪಮಾಲಂಕಾರಗಳು.

ಕಂ॥ ಕಳಕಂಠಂಗಳ ಬಗ್ಗಣೆ ।
ಗಿಳಿಗಳ ಚಪ್ಪರಣೆಯಳಿಗಳಿಂಚರಮೆಸಗುಂ ॥
ತಳಿರ್ಗಳ್ತನಿವಣ್ಗಳ್ಸುಮ ।
ಕುಳಗಳು ಮಿಡಿಕಿರಿದ ಚೂತಶಾಖಾಂತರದೋಳ್ ॥ 45 ॥

**ಟೀಕೆ** ॥ ತಳಿರ್ಗಳ್ – ಚಿಗುರುಗಳು, ತನಿವಣ್ಗಳ್ – ಮಾಗಿದ ಹಣ್ಣುಗಳು, ಸುಮಕುಳಗಳುಂ – ಪೂತಂಡಗಳು, ಇಡಿಕಿರಿದ – ತುಂಬಿದ, ಚೂತಶಾಖಾಂ, ತರದೋಳ್ – ಮಾವಿನ ಕೊಂಬೆಯೊಳಗೆ, ಕಲಕಂಠಂಗಳ – ಕೋಗಿಲೆಗಳ, ಬಗ್ಗಣೆ – ಚಿಗುರು ಮೆಲ್ಲುವ ಧ್ವನಿಯು, ಗಿಳಿಗಳ ಚಪ್ಪರಣೆ – ರಸವನ್ನೀಂಟುವ ಸಪ್ಪುಳು, ಅಳಿಗಳ – ತುಂಬಿಗಳ, ಇಂಚರಂ – ಮಕರಂದ ಸ್ವಾದದ ಮಧುರ ಧ್ವನಿಯ, ಎಸಗುಂ – ಶೋಭಿಸುವದು.

**ತಾ** ॥ ಚಿಗುರು ಹಣ್ಣು ಹೂವು ಉಳ್ಳ ಮಾವಿನ ಮರದಲ್ಲಿ ಕೋಗಿಲೆಗಳ ತುಂಬಿಗಳ ಧ್ವನಿ ಕೇಳ್ಬಂದುದೆಂದು ಕ್ರಮಾಲಂಕಾರವು ॥ 45 ॥

ವೃ॥ ಕಾಮನ ಸಾಮಜಂ ಮಧುಹೀಶನ ಕೋಶಗೃಹಂ ಮಧುವ್ರತ ।
ಸ್ತೋಮದ ಪಾನಭೂಮಿ ಮಲಯಾನಿಲನಾಡುವ ಮಾಡುವೆಟ್ಟಮ ॥
ಲ್ಲೀ ಮೃದುಲಾಸ್ಯಶಾಲೆ ಶುಕವೃಂದದ ಜೇವಣದಾಗರಂ ಬಳಿ ।
ಕ್ಕೀ ಮರಮಲ್ತೆ ಮಾಮರಮೆನುತ್ತಜನಿಟ್ಟನೊರಲ್ದು ನಾಮಮಂ ॥ 46 ॥

**ಟೀಕ** ॥ ಈ ಮರಂ – ಈ ವೃಕ್ಷವು, ಕಾಮನ – ಮನ್ಮಥನ, ಸಾಮಜಂ – ಪಟ್ಟದಾನೆ, ಮಧುಮಹೀಶನ – ಮಧುರಾಯನ, ಕೋಶಗೃಹಂ – ಭಂಡಾರವು,

ಮಧುವ್ರತಸ್ತೋಮದ – ಭೃಂಗಕುಲದ ಪಾನದ ಭೂಮಿ ಎಂದರೆ ಮದ್ಯಪಾನಸ್ಥಲವು ಅಥವಾ ಮಧುವ್ರತಿಗಳ ಪ್ರಪಾಶಾಲೆ, ಮಲಯಾನಿಲನ್ – ಪರಿಮಳದ ಗಾಳಿಯು, ಆಡುವ – ಕ್ರೀಡಿಸುವ, ವಾಡುವೆಟ್ಟು – ಕೃತ್ರಿಮವಾದಬೆಟ್ಟ, ಮಲ್ಲೀ – ಮಲ್ಲಿಗೆಯೆಂಬವಳ, ಮೃದುಲಾಸ್ಯಶಾಲೆ – ಕೋಮಲವಾದ ನರ್ತನಗೃಹವು, ಬಳಿಕ – ಆಮೇಲೆ, ಶುಕವೃಂದದ – ಗಿಳಿವಿಂಡಿನ, ಜೇವಣದ – ಭೋಜನದ, ಆಗರಂ – ಕಣಿ, ಅಲ್ತೆ – ಅಲ್ಲವೆ, ಎನ್ನುತ್ತ – ಎಂದು, ಅಜಂ – ಬ್ರಹ್ಮನು, ಒಲ್ದು – ಕೂಗಿ, ಮಾಮರವೆನ್ನುತ್ತ – ಮಹಾವೃಕ್ಷವೆನ್ನುತ್ತ ನಾಮವನ್ನು, ಇಟ್ಟಂ – ಇಟ್ಟನು.

**ತಾ** ॥ ಮಾವಿನಮರ, ಮಹಾಮರ, ಮಾಮರ ಈ ಮರವು ಕಾಮಿನಿಗೆ ಪಟ್ಟದಾನೆಯೂ, ಚೈತ್ರಜನಿಗೆ ಭಂಡಾರವೂ, ತುಂಬಿಗಳಿಗೆ ಪಾನಶಾಲೆಯು, ಮಲಯಮಾರುತಕ್ಕೆ ಕ್ರೀಡಾಶೈಲವಾಗಿಯೂ, ಮಲ್ಲಿಗೆ ನಾಟ್ಯಶಾಲೆಯಾಗಿಯೂ ಗಿಳಿಗಳಿಗೆ ಭೋಜನಶಾಲೆಯಾದ್ದರಿಂದ ಮಹಾವೃಕ್ಷವೆಂದು ಬ್ರಹ್ಮನು ಹೆಸರಿಟ್ಟ ಹಾಗೆ ಮಾಮರವು ಶೋಭಿಸಿತು, ತದ್ರೂಪ್ಯರೂಪಕಸ್ವರೂಪೇತ್ಪ್ರೇಕ್ಷಾಲಂಕಾರವು,

ಚ ॥ ಗಿಳಿಗಳ ಸಾಲು ಸುರೇಂದ್ರಧನು ಚಂದಳಿರೊಂದಿದ ಮಿಂಚು ಕೋಕಿಲಾ ।
ವಳಿಯರವಂಘನಧ್ವನಿಗಳ್ಮಕರಂದಮೆ ವೃಷ್ಟಿಯೆಂತ ಕಂ ॥
ಗೊಳಿಸೆ ನಿಲುಂಬಿ ತುಂಬಿ ಕವಿದಾಮ್ರಮನ ಭ್ರವಗೆತ್ತುಕೇಕಿಮಂ ।
ಡಲೆ ಬಳಿಸಾರ್ದು ನರ್ತಿಸುಗುಮೀಕ್ಷಿಸಿ ಮಚ್ಚುವಿನಂ ಮನೋಭವಂ ॥

**ಟೀಕೆ** ॥ ಗಿಳಿಗಳ ಸಾಲು, ಇಂದ್ರಧನುಸ್ಸು – ಇಂದ್ರನಬಿಲ್ಲು, ಚಂದಳಿರ್ – ಕೆಂಪುಚಿಗುರೇ, ಒಂದಿದ – ಹೊಂದಿಕೆಯಾದ, ಮಿಂಚು – ತಟಿತ್ತೆ, ಕೋಕಿಲಾವಳಿಯ – ಕೋಗಿಲೆಗಳ ಬಂತಿಯ, ಆರವಂ – ಶಬ್ದವು, ಘನಧ್ವನಿಗಳ್ – ಗುಡುಗುಗಳು, ಮಕರಂದಮೆ – ಪುಷ್ಪರಸವೇ, ವೃಷ್ಟಿಯಂತೆ – ಮಳೆಯಂತೆ, ಕಂಗೊಳಿಸೆ – ಕಾಣಿಸಲು, ಕೇಕಿಮಂಡಲಿ – ನವಿಲುವಿಂಡು, ನಿಲುಂಬಿ – ಬಾಗಿ, ತುಂಬಿ – ವ್ಯಾಪಿಸಿ, ಕವಿದ – ಮುಚ್ಚಿಕೊಂಡ, ಆಮ್ರಮಂ – ಮಾಮರವನ್ನು, ಅಭ್ರವಗೆತ್ತು – ಮೇಘವೆಂದು ತಿಳಿದುಕೊಂಡ, ಮನೋಭವಂ – ಮನ್ಮಥನು, ಈಕ್ಷಿಸಿ – ನೋಡಿ, ಬಳಿಸಾರ್ದು – ಹತ್ತಿರಕ್ಕೆ ಬಂದು, ಮೆಚ್ಚುವಿನಂ – ಮೆಚ್ಚಿಕೊಳ್ಳುವ ಹಾಗೆ, ನರ್ತಿಸುಗುಂ – ಕುಣಿಯುವದು.

**ತಾ** ॥ ಮಾವಿನಮರದಲ್ಲಿ ಹಲವು ಬಣ್ಣದ ಗಿಡಗಳ ಸಾಲು ಇಂದ್ರಚಾಪದಂತೆಯೂ, ಕೆಂಚಿಗುರು ಮಿಂಚಿನಂತೆಯೂ, ಕೋಕಿಲ ಧ್ವನಿಯು ಗುಡುಗಿನಂತೆಯೂ, ಜೇನುತೊಟ್ಟುಗಳು ಮಳೆಯಂತೆಯೂ ಇರಲಾಗಿ ನವಿಲುಗಳು, ಮಾವಿನಮರವನ್ನು ತಮಗೆ ಪ್ರಿಯವಾದ ಕೃಷ್ಣಮೇಘವೆಂದುಕೊಂಡು ನೋಡುವವರಿಗೆ ಕಾಮೋದ್ರೇಕವಾಗುವಂತೆ ಕುಣಿದಾಡದೊಡಗಿದವು. ರೂಪಕೋಪಮಾನಗರ್ಭಿತ ಭ್ರಾಂತಿಮದಲಂಕಾರವು.

ಕಂ॥ ತಳಿರ್ಗಳೆ ದಳ್ಳುರಿಯಲರಿಂ ।
ಬೆಳದಲರ್ವುಡಿ ಧೂಮಮಂತ್ರಘೋಷಂ ಪಿಕಸಂ ॥
ಕುಳರವಮೆನೆ ಚೂತಂ ಕಂ ।
ಗೊಳಿಪುದು ಹೋಮಾಗ್ನಿಯಂತೆ ಕಾಮಾಧ್ವರಿಯಾ ॥ 48 ॥

**ಟೀಕೆ** ॥ ತಳಿರ್ಗಳೆ – ಚಿಗುರುಗಳೇ, ದಳ್ಳುರಿ – ಮಹಾಜ್ವಾಲೆ, ಅಲರಿಂ–ಪುಷ್ಪದಿಂದ, ಬೆಳದ – ವೃದ್ಧಿಯಾದ, ಅಲರ್ವುಡಿ – ಪುಪ್ಪುಡಿಯೇ, ಧೂಮ – ಹೊಗೆ, ಪಿಕಸಂಕುಳರವಂ – ಕೋಗಿಲೆವಿಂಡಿನ ಕೂಗು, ಮಂತ್ರಘೋಷಂ – ಮಂತ್ರಧ್ವನಿಯು, ಎನೆ – ಎಂಬಂತೆ, ಚೂತಂ – ಸೀಮಾವಿನಮರವು, ಕಾಮಾಧ್ವರಿಯ ಕಾಮಸೋಮಯಾಜಿಯ, ಹೋಮಾಗ್ನಿಯಂತೆ – ಅಗ್ನಿಹೋತ್ರದ ಹಾಗೆ, ಕಂಗೊಳಿಪುದು – ಪ್ರಕಾಶಿಸುವುದು.

**ತಾ** ॥ ಮಾವಿನಮರವು ಚಿಗುರಿ ಪೂತು ಕೋಗಿಲೆಕೂಗಿನಿಂ ಕೂಡಿದ್ದಾಗಿರಲು, ನೋಡುವ ವಿರಹಿಗಳಿಗೆ ಕಾಮೋದ್ರೇಕವಾಗಿ ಮನ್ಮಥನೆಂಬ ಸೋಮಯಾಜಿಯು ತನ್ನ ಇಷ್ಟಸಿದ್ಧಿಗೋಸುಗ ಹೋಮವಂ ಗೆಯ್ಯುತ್ತಿರುವ ಅಗ್ನಿಹೋತ್ರವೋಯೆಂಬಂತೆ ಕೆಂಪಗಿರುವ ಮಾವಿನ ಮರದಲ್ಲಿ ಕೆಂಜಿಗುರು ಉರಿಯುವ ಹಾಗೂ ಪುಪ್ಪುಡಿ ಹೊಗೆಯ ಹಾಗೂ, ಕೋಕಿಲಧ್ವನಿಯು ವೇದವುಂತ್ರದ ಹಾಗೂ, ತೋರಿತೆಂದು ಉಪಮೋತ್ಪ್ರೇಕ್ಷಾಲಂಕಾರಗಳು ॥ 48 ॥

ಮ ॥ ತನಿವಣ್ಣಮ್ಮನವಾರೆ ನೋಡಿ ಬಳಿವಂದೊಲ್ದಪ್ಪಿ ಪಕ್ಕಂಗಳಿಂ ।
ದನಿದೋರುತ್ತೊಲವೆತ್ತು ಚಂಚುಪುಟದಿಂದಂಮೆಲ್ಪಿನಿಂ ಸೀಳ್ದು ಸೀ ।
ಯನೆ ಸೋರ್ವಾರಸಧಾರೆಯಂ ಸವಿದು ಚೀತ್ಕಾರಸ್ವರಂಪೊಣ್ಮೆ ತ ।
ನ್ನನಿಯಳ್ಗಂ ಕರೆದಿತ್ತದಂ ತಣಿಪುಗುಂಕೀರಾಳಿ ಮಾಕಂದದೋಳ್ ॥ 49 ॥

**ಟೀಕೆ** ॥ ಮಾಕಂದದೋಳ್ – ಸೀಮಾವಿನ ಮರದಲ್ಲಿ, ಕೀರಾಳಿ – ಗಿಳಿವಿಂಡು, ತನಿವಣ್ಣಂ – ಪೂರ್ಣಫಲವನ್ನು, ಮನವಾರೆ – ಮನಸ್ತೃಪ್ತಿಯಾಗುವಂತೆ ನೋಡಿ, ಬಳಿವಂದು – ಹತ್ತಿರಕ್ಕೆ ಬಂದು, ಒಲ್ದು – ಒಪ್ಪಿ, ಪಕ್ಕಗಳಿಂ – ರೆಕ್ಕೆಗಳಿಂದ, ಅಪ್ಪಿ – ಆಲಿಂಗಿಸಿಕೊಂಡು, ದನಿದೋರುತ್ತ – ಧ್ವನಿಯನ್ನು ತೋರಿಸುತ್ತ, ಒಲವೆತ್ತು – ಒಪ್ಪಿಗೆಯಂ ಪಡದು, ಚಂಚುಪುಟದಿಂ – ಕೊಕ್ಕಿನ ಕೊನೆಯಿಂದ, ಮೆಲ್ಪಿನಿಂ – ಮೆಲ್ಲನೆ, ಸೀಳ್ದು – ಸಿಗುಳಿ, ಸೀಯನೆ – ಮಧುರವಾಗಿ, ಸೋರ್ಪ – ಸೋರುವ, ಆ ಮಾವಿನ, ರಸಧಾರೆಯಂ – ದ್ರವಪ್ರವಾಹವನ್ನು, ಸವಿದು – ಈಂಟಿ, ಚೀತ್ಕಾರಸ್ವರಂ – ತೃಪ್ತಿಸೂಚಕಧ್ವನಿಯು, ಪೊಣ್ಮೆ – ಹೊರಡಲು, ತನ್ನ ಇನಿಯಳ್ಗಂ – ಪ್ರಿಯಳಾದ ಹೆಣ್ಣುಗಿಳಿಯನ್ನೂ, ಕರೆದಿತ್ತು – ಕೂಗಿಕೊಟ್ಟು, ತಣಿಪುಗುಂ – ತೃಪ್ತಿಪಡಿಸುವುದು.

**ತಾ** ॥ ಮಾಮರದಲ್ಲಿ ಗಂಡುಗಿಳಿಗಳು ಹಣ್ಣಿನ ರಸವನ್ನು ತಾವೂ ಸವಿದು ಪ್ರಿಯರಂ ಕರೆದು ಅವರ್ಗಿತ್ತು ತೃಪ್ತಿಗೊಳಿಸುತ್ತಿದ್ದವು ಎಂಬುದರಿಂ ಉದಾತ್ತಾಲಂಕಾರ॥

(ಮುಂದುವರಿಯುವುದು)

# ವೀರಶೈವ ಆಕರ ಶೋಧಗಳು (ಆಧುನಿಕ ಕಾಲ) (ಕ್ರಿ.ಶ. 19–21ನೇ ಶತಮಾನಗಳಲ್ಲಿ)

ಡಾ. ಬಿ. ನಂಜುಂಡ ಸ್ವಾಮಿ

ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಭಾರತದ ಇತಿಹಾಸಕ್ಕೆ ವಿಶೇಷವಾದ ಸ್ಥಾನ. ಭಾರತದಲ್ಲಿ ಕರ್ನಾಟಕಕ್ಕೆ, ಕರ್ನಾಟಕದ ಮಣ್ಣಿನಲ್ಲಿ ಬೆಳೆದ ಧರ್ಮದ ವಿವರಗಳನ್ನು ಅಧ್ಯಯನ ಮಾಡಲು ಪ್ರಪಂಚದ ಮೂಲೆಮೂಲೆಯಿಂದ ವಿದ್ವಾಂಸರು ಬರುತ್ತಲೇ ಇರುತ್ತಾರೆ. ಈ ಮಣ್ಣಿನಲ್ಲಿ ಬೆಳೆದ ಪ್ರಮುಖ ಧರ್ಮಗಳೆಂದರೆ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಕ್ತಿವಿಶಿಷ್ಟಾದ್ವೈತ, ಜೈನ. ಹೊರಗಿನಿಂದ ಬಂದ ಧರ್ಮಗಳೆಂದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು. ಕರ್ನಾಟಕದ ನೆಲದಲ್ಲಿ ಹುಲುಸಾಗಿ ಬೆಳೆದ ಧರ್ಮಗಳ ಪೈಕಿ ಶಕ್ತಿವಿಶಿಷ್ಟಾದ್ವೈತ, ವೀರಶೈವ, ಲಿಂಗವಂತ, ಲಿಂಗಾಯತ, ಶಿವಾಚಾರ, ಶರಣಧರ್ಮ ಮುಂತಾದ ಹೆಸರಿನಲ್ಲಿ ಕರೆಸಿಕೊಳ್ಳುವ ವೀರಶೈವ ಧರ್ಮ ಪ್ರಮುಖವಾಗಿದೆ. ಈ ಧರ್ಮದ ಆಕರಗಳು ಅಖಿಲಭಾರತ ಮಟ್ಟದಲ್ಲಿ ಹರಡಿಹೋಗಿದ್ದು, ಅವುಗಳ ವ್ಯವಸ್ಥಿತ ಅಧ್ಯಯನ ನಡೆಯಬೇಕಾಗಿದೆ.

ಭಾರತದಲ್ಲಿ ಆಂಗ್ಲ ಶಾಲಾಕಾಲೇಜುಗಳು ಪ್ರಾರಂಭವಾದ ಮೇಲೆ ವಿದೇಶೀಯರು ತಮ್ಮ ಸಂಸ್ಕೃತಿ ಮತ್ತು ಧರ್ಮವನ್ನು ಶಾಲಾ ಮಕ್ಕಳ ಮೂಲಕ ಪ್ರಚಾರ ಮಾಡಲು ಪ್ರಯತ್ನಿಸಿದರು. ಆದರೆ ಅದು ವಿವಾದವನ್ನು ಉಂಟುಮಾಡಿದ್ದರಿಂದ ಅವರು ಅನ್ಯ ಮೂಲವನ್ನು ಆಶ್ರಯಿಸಿದರು. ವಿದೇಶೀಯರ ಈ ಪ್ರಚೋದನೆಯಿಂದ ಭಾರತಕ್ಕೆ ಆದ ಒಂದು ಲಾಭವೆಂದರೆ ಮೂಲೆಮೂಲೆಗಳಲ್ಲಿ ಅಡಗಿದ್ದ ಓಲೆಗರಿಕಟ್ಟು, ಕಡತ, ಕಾಗದ ಹಸ್ತಪ್ರತಿಗಳು, ಶಿಲಾಶಾಸನಗಳು, ತಾಮ್ರಶಾಸನಗಳು, ತೈಲಚಿತ್ರಗಳು, ಮೂರ್ತಿಶಿಲ್ಪಗಳು, ದೇವಾಲಯದ ದಾಖಲೆಗಳು, ಸಾಂಸ್ಕೃತಿಕವಾಗಿ ನಡೆಯುತ್ತಾ ಇದ್ದ ಉತ್ಸವಗಳು, ಆರಾಧನೆಗಳು, ಸುರುಳಿ ಕಾಗದಕಟ್ಟುಗಳೂ, ರಾಜನಿರೂಪಗಳು, ಮಠದ ಸ್ವಾಮಿಗಳು ಬರೆದ ನಿರೂಪಗಳು ಬೆಳಕಿಗೆ ಬಂದವು. ಇವುಗಳನ್ನು ಕುರಿತು ಅಧ್ಯಯನಗಳು ನಡೆದವು.

ವೀರಶೈವ ಆಕರಶೋಧಗಳು 19 ರಿಂದ 21ನೇ ಶತಮಾನದಲ್ಲಿ ವಿಶೇಷವಾಗಿ ಪ್ರಕಟವಾದ ಗೆಜೆಟಿಯರ್‌ಗಳು, ಸಾಹಿತ್ಯಚರಿತ್ರೆಗಳು, ಇತಿಹಾಸಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಮಾಹಿತಿ ಚದುರಿಹೋಗಿವೆ. ಹತ್ತಾರು ಜನ ಯುವ ವಿದ್ವಾಂಸರು ಆಳವಾದ ಅಧ್ಯಯನ ಮಾಡಿ ಈ ಆಕರಗಳನ್ನು ಕ್ರೋಡೀಕರಿಸಬೇಕಿದೆ.

ವೀರಶೈವ ಧರ್ಮಗ್ರಂಥಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡುತ್ತಾ ಬಂದಿರುವ ವಿದ್ವಾಂಸರು ಚದುರಿದಂತೆ ಮುದ್ರಣವಾಗಿರುವ ಗ್ರಂಥಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕಾಗಿದೆ. ಹರದತ್ತಶಿವಾಚಾರ್ಯನು ತಮಿಳುನಾಡಿನ ಒಬ್ಬ ವೀರಶೈವ ಕವಿ. ಈತ ಹುಟ್ಟಿನಿಂದ ವೈಷ್ಣವನಾಗಿದ್ದರೂ ಶಿವನಲ್ಲಿ ಅಚಲವಾದ ಭಕ್ತಿಯುಳ್ಳವನಾಗಿದ್ದನೆಂಬುದು ಈತನ ಗ್ರಂಥವಾದ 'ಶ್ರುತಿಸೂಕ್ತಿಮಾಲ'ದ ಒಂದು ಶ್ಲೋಕದಿಂದ ತಿಳಿದುಬರುವುದು. ಈತನ ಕಾಲ ಸುಮಾರು 6ರಿಂದ 11ನೇ ಶತಮಾನದವರೆಗೆ ಇರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ತಂಜಾವೂರಿನ ಸಮೀಪದ ಗಂಜನೂರು ಇವನು ಹುಟ್ಟಿದ ಊರು. ಮೊದಲಿಗೆ ಇವನ ಹೆಸರು ಸುದರ್ಶನಾಚಾರ್ಯ. ಈತ ರಚಿಸಿದ ಮೂರು ಕೃತಿಗಳೂ ಲಭ್ಯವಾಗಿವೆ. (1) ಶೃತಿಸೂಕ್ತಿ ಮೂಲ, (2) ಹರಿಹರ ತಾರತಮ್ಯ, (3) ಪಂಚಶ್ಲೋಕೀ. ಈ ಕವಿಯ ಬಗ್ಗೆ ಡಾ. ವನಜಾ ಕುಲಕರ್ಣಿಯವರು ವಿಶೇಷವಾದ ಅಧ್ಯಯನವನ್ನು ಮಾಡಿದ್ದಾರೆ. ಅವರು ರಚಿಸಿದ ಮಹಾಪ್ರಬಂಧ ಮತ್ತು ಮೇಲಿನ ಮೂರು ಕೃತಿಗಳನ್ನು ಲಭ್ಯವಿರುವ ಟೀಕಾಸಮೇತ ಮುದ್ರಣ ಮಾಡಬೇಕು. ವೀರಶೈವ ಧರ್ಮದ ಹಳೆಯ ಗ್ರಂಥಗಳೂ ಮುದ್ರಣಗೊಂಡು ಅಧ್ಯಯನಕ್ಕೆ ಲಭ್ಯವಾದರೆ ಇನ್ನಷ್ಟು ಮಾಹಿತಿಗಳು ಲಭ್ಯವಾಗುತ್ತವೆ. 'ಹರಿಹರ ತಾರತಮ್ಯಂ' ಲಘು ಕೃತಿ ಪ್ರೊ. ಸಿ. ಮಹಾದೇವಪ್ಪನವರು 2002ರಲ್ಲಿ ಪ್ರಕಟಿಸಿದ 'ಶಿವಸ್ತೋತ್ರ ಸಾಹಿತ್ಯ ಸಂಚಯ' ಎಂಬ ಸ್ತೋತ್ರಗ್ರಂಥದಲ್ಲಿ ಮುದ್ರಣವಾಗಿದೆ.

ನಾಗವರ್ಮನ ಕನ್ನಡ ಛಂದಸ್ಸು, ರೆ. ಎಫ್. ಕಿಟ್ಟೆಲ್‌ರವರಿಂದ 1875ರಲ್ಲಿ ಸಂಪಾದನೆಗೊಂಡು ಪ್ರಕಟಗೊಂಡಿತು. 'AN ESSAY ON CANARESE LITERATURE' ಗ್ರಂಥದ ಪುಟ 32ರಲ್ಲಿ ಮಹಾಶಿವಭಕ್ತ, ವೀರಶೈವಧರ್ಮದ ಆದ್ಯ ಪುರುಷನಾದ ಕೊಂಡಗುಳಿ ಕೇಶಿರಾಜ, ಶ್ರೀಪತಿ ಪಂಡಿತ, ಶಿವಲೆಂಕ ಮಂಚಣ್ಣ ಪಂಡಿತ, ಗುರು ಮಲ್ಲಿಕಾರ್ಜುನ ಪಂಡಿತ, ಜಗಜ್ಯೋತಿ ಬಸವಣ್ಣ ಮೊದಲಾದವರ ಉಲ್ಲೇಖವಿದೆ. ಅಡಿಟಿಪ್ಪಣಿಯಲ್ಲಿ ಪ್ರಭುಲಿಂಗಲೀಲೆ, ಪ್ರೌಢರಾಯಕಾವ್ಯ ಹಾಗೂ ಉದ್ಭಟ ಕಾವ್ಯ ಬಲ್ಲಾಕಿ ನಗರದ ಉದ್ಭಟದೇವ ಅಥವಾ ಉದ್ಭಟ (ಈತ ಭೋಜರಾಜನ ಗುರು) ಮೊದಲಾದವರ ಉಲ್ಲೇಖಗಳಿವೆ. ಬ್ರಹ್ಮೋತ್ತರ ಖಂಡದಲ್ಲಿ ಬಾಣ, ಕೇಶಿರಾಜ, ಮಯೂರ, ಹಲಾಯುಧ ಮೊದಲಾದ ಕವಿಗಳನ್ನು ಉಲ್ಲೇಖಿಸಲಾಗಿದೆ. ಅಡಿಟಿಪ್ಪಣಿಯಲ್ಲಿ ಪ್ರಭುಲಿಂಗಲೀಲೆ, ಬ್ರಹ್ಮೋತ್ತರಖಂಡ, ಗಣಸಹಸ್ರನಾಮ, ಶರಣಲೀಲಾಮೃತ ಕೃತಿಗಳು ಉಲ್ಲೇಖಗೊಂಡಿವೆ, ಕಾಕತೀಯ ರಾಜನಾದ ಗಣಪತಿ ಮತ್ತು ಆತನ ಸಮಕಾಲೀನನಾದ ಬಸವಣ್ಣ ಹಾಗೂ ಆ ಕಾಲದ 'ಗುಂಡ–ಬ್ರಹ್ಮಯ್ಯ' ಮತ್ತು ಅನೇಕ ವೀರಶೈವ ಕೃತಿಗಳ ಉಲ್ಲೇಖವಿದೆ.

'ಚನ್ನಬಸವ ಪುರಾಣ', 'ರಾಜಶೇಖರ ವಿಳಾಸ' ವೀರಶೈವ ಆಚಾರ್ಯ ಕೃತಿಯ 46ನೇ ಪುಟದಲ್ಲಿ 'ಕೇಶಿರಾಜ ದಂಡೇಶ' ಉಲ್ಲೇಖವಿದೆ. SOME SAIVA PANDITS ಶಿವಸ್ತೋತ್ರದ ಮಲ್ಲಣ್ಣ, ಪಂಡಿತಾರಾಧ್ಯ, ಶ್ರೀಪತಿ ಪಂಡಿತ, ಶಿವಲೆಂಕ ಮಂಚಣ್ಣ

ಪಂಡಿತ, ಅಮರಗುಂಡ ಮಲ್ಲಿಕಾರ್ಜುನ ಪಂಡಿತರ ಉಲ್ಲೇಖವಿದೆ. ಹರಿಹರ ಮತ್ತು ರಾಘವಾಂಕರ ಉಲ್ಲೇಖವಿದೆ. ಪಾಲ್ಕುರಿಕೆ ಸೋಮನಾಥ, ಕಂಚಿ ಶಂಕರಾರಾಧ್ಯ, ಎರಡನೇ ಗುಬ್ಬಿ ಮಲ್ಲಣ್ಣಾರ್ಯನ ವೀರಶೈವಾಮೃತ ಪುರಾಣದ ಉಲ್ಲೇಖವಿದೆ. ಸಿಂಗಿರಾಜನ ಅಮಲ ಬಸವಚಾರಿತ್ರ, ಕೆರೆಯ ಪದ್ಮರಸ, ರಾಘವದೇವ, ಜಕ್ಕಣ್ಣಾರ್ಯ, ಚಾಮರಸ, ಭೀಮರಸ, ಮೊಗ್ಗೆ ಆಚಾರ್ಯ, ಕಲ್ಮಠ ಆಚಾರ್ಯ, ಸಿಂಗಿರಾಜ ಆಚಾರ್ಯ, ಪಾಲ್ಗುರಿಕೆ ಸೋಮನಾಥ, ಮಹಾದೇವಯ್ಯನವರನ್ನು ದಾಖಲಿಸಲಾಗಿದೆ.

ಪ್ರಭುಲಿಂಗಲೀಲೆಯು ತೆಲುಗು ಭಾಷೆಗೆ ಪಿಡುಪರ್ತಿ ಸೋಮಯ್ಯನವರಿಂದ, ತಮಿಳು ಭಾಷೆಗೆ ಶಿವಪ್ರಕಾಶ ದೇಶಿಕರಿಂದ ಹದಿನೇಳನೇ ಶತಮಾನದಲ್ಲಿ ಅನುವಾದವಾಗಿರುವುದನ್ನು ಗಮನಿಸಿದ್ದಾರೆ. ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ, ಅನುಭವಸಾರ, ಪರಮಾನುಭವಬೋಧೆ, ಪುರಾತನ ತ್ರಿವಿಧಿ, ವಿವೇಕ ಚಿಂತಾಮಣಿಗಳ ಉಲ್ಲೇಖವಿದ್ದು, ಆಗಿನ ಕಾಲದಲ್ಲೇ ವಿವೇಕ ಚಿಂತಾಮಣಿಯು ತಮಿಳು ಭಾಷೆಗೆ ಅನುವಾದಗೊಂಡಿರುವುದನ್ನು ಗಮನಿಸಿದ್ದರು. ಷಡಕ್ಷರದೇವನ ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ವೃಷಭೇಂದ್ರ ವಿಜಯ, ಕವಿಕರ್ಣರಸಾಯನ, ಭಕ್ತಾಧಿಕ್ಯ, ಶಿವಾಧಿಕ್ಯ ಕೃತಿಗಳನ್ನು ಉಲ್ಲೇಖಿಸಿದ್ದಾರೆ. ರಾಜಶೇಖರ ವಿಳಾಸ ರಚನೆಯಾದದ್ದು ಗುಬ್ಬಿಯ ಮಲ್ಲಣ್ಣನ ಭಾವಚಿಂತಾರತ್ನ ಆಧರಿಸಿ ರಚಿಸಿದ್ದು ಎಂದು ಸಂಶೋಧಿಸಿದ್ದಾರೆ. ರೇಣುಕಾರ್ಯ, ಏಕೋರಾಮಾರ್ಯ, ಪಂಡಿತಾರ್ಯ, ಮರುಳಾರ್ಯ, ಮಾಯಿದೇವ, ಜಕ್ಕಣ್ಣಾರ್ಯ, ಮಲ್ಲಣ್ಣಾರ್ಯ, ಮಲ್ಲಣ್ಣಾರ್ಯ (ಗುಬ್ಬಿ), ಶಂಕರ, ಹರೀಶ್ವರ ಕವಿಗಳ ಉಲ್ಲೇಖವಿದೆ. ಇದೇ ಪುಟದ ಅಡಿಟಿಪ್ಪಣಿಯಲ್ಲಿ ರೇವಣರಾಧ್ಯ, ರೇವಣಸಿದ್ಧೇಶ್ವರ, ರೇವಣಸಿದ್ಧರನ್ನೇ ಕೊಲ್ಲಿಪಾಕಿಯಲ್ಲಿ ರೇಣುಕರನ್ನು ದ್ವಾಪರದಲ್ಲಿ ಕರೆಯುತ್ತಾ ಇದ್ದುದನ್ನು ಗುರುತಿಸಿದ್ದಾರೆ. ಸುಪ್ರಭೇದಾಗಮದಲ್ಲಿ ಕದಳೀಪುರ ಅಥವಾ ಬಾಳೆಹೊನ್ನೂರಿನಲ್ಲಿ ರೇವಣನ ಸಿಂಹಾಸನ ಇರುವುದನ್ನು ದಾಖಲಿಸಿದ್ದಾರೆ.

ರೇವಣ ಮೊದಲಿಗರು, ಎರಡನೆಯವರು ಮರುಳಸಿದ್ಧರು. ಇವರು ಹುಟ್ಟಿದ್ದು ಸಿದ್ಧವಟದಲ್ಲಿ. ಇವರ ಸಿಂಹಾಸನ ಉಜ್ಜಯಿನಿಯಲ್ಲಿದೆ. ಮೂರನೆಯವರು ಪಂಡಿತ ಇವರು ಹುಟ್ಟಿದ್ದು ಸುಧಾಕುಂಡದಲ್ಲಿ, ಇವರ ಸಿಂಹಾಸನ ಶ್ರೀಶೈಲದಲ್ಲಿ, ಏಕೋರಾಮ ಇವರು ದ್ರಾಕ್ಷಾರಾಮದಲ್ಲಿ ಹುಟ್ಟಿದ್ದು ಇವರ ಸಿಂಹಾಸನ ಕೇದಾರದಲ್ಲಿದೆ. ಐದನೆಯವರು ವಿಶ್ವೇಶ್ವರ. ವಿಶ್ವೇಶ್ವರ ಲಿಂಗದಲ್ಲಿ ಹುಟ್ಟಿದವರು. ಇವರ ಸಿಂಹಾಸನ ಕೊಲ್ಲಿಪಾಕಿ ಎಂದು ಹೇಳಲಾಗಿದೆ. ಸಿದ್ಧಾಂತ ಶಿಖಾಮಣಿ ಹದಿನೇಳನೇ ಶತಮಾನದಲ್ಲಿ ತಮಿಳುಭಾಷೆಗೆ ತರ್ಜುಮೆಯಾಗಿರುವುದನ್ನು ಗಮನಿಸಿದ್ದಾರೆ.

ಅಖಂಡೇಶ್ವರ ವಚನಗಳ ಹಸ್ತಪ್ರತಿಯನ್ನು ಪರಿಶೀಲಿಸಿ ಅದರಲ್ಲಿ 'ಷಟ್‌ಸ್ಥಲ ಆಚರಣೆ' ಯುಕ್ತವಾಗಿರುವುದು ಮತ್ತು ಲಿಂಗವಂತ ಧರ್ಮದ ಎಲ್ಲಾ ವಿಷಯವನ್ನು ತಿಳಿಸುವಂತಹ ಮಹತ್ತ್ವದ ಕೃತಿ ಎಂದು ಅಂದೇ ಗಮನಿಸಿದ್ದರು. ಆ ವಚನ ಕಟ್ಟಿನಲ್ಲಿ ಗುರುಕಾರುಣ್ಯ ಸ್ಥಳ, ಲಿಂಗಧಾರಣ ಸ್ಥಲ, ವಿಭೂತಿಧಾರಣ ಸ್ಥಲ,

ರುದ್ರಾಕ್ಷಧಾರಣ ಸ್ಥಲ, ಭಕ್ತಸ್ಥಲ, ತುರ್ಯನಿರಾಲಂಬನ ಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಷಟ್‌ಸ್ಥಲ ಮತ್ತು ಷಡ್‌ಕ್ಷರ 'ಓಂ ನಮಃ ಶಿವಾಯ', ಷಡ್ ಧಾತು, ಷಟ್ಕರ್ಮ, ಷಡ್‌ಇಂದ್ರಿಯ, ಷಡ್‌ಭಾವ, ಷಡ್‌ಲಿಂಗದ ಉಲ್ಲೇಖವನ್ನು ಮಾಡಿದ್ದಾರೆ.

ಪಂಚೀಕರಣ ತತ್ತ್ವವನ್ನು ಬೋಧಿಸುವ 15 ವಚನಗಳ ಸಂಕಲನವಿದ್ದು ಆ ವಚನಗಳ ಅಂಕಿತ 'ಚಿದಾನಂದ ಸದ್ಗುರು ಪ್ರಭು' ಎಂದು ತಿಳಿಸಿದ್ದಾರೆ. ಲಿಂಗಾವಧೂತ ವಚನಗಳ ಒಂದು ಕಟ್ಟನ್ನು ಗಮನಿಸಿ ಆ ವಚನಗಳ ಅಂಕಿತ 'ಓಂ ಶಂಕರ ನಂಜುಂಡೇಶ್ವರ ಪ್ರಭು' ಅಥವ 'ಓಂ ಕೂಡಲ ಚನ್ನಸಂಗಮದೇವ ಪ್ರಭು' ಎಂದು ಇರುವುದನ್ನು ಗಮನಿಸಿದ್ದಾರೆ. ಶಂಕರದೇವರ ಏಳು ರಗಳೆಗಳೂ ಇರುವ ಹಸ್ತಪ್ರತಿಯನ್ನು ಪರಿಶೀಲಿಸಿದ್ದಾರೆ. ಸರ್ವಜ್ಞನ ತ್ರಿಪದಿ, ಮೌನೇಶ್ವರ ಪುರಾಣಗಳನ್ನು ಉಲ್ಲೇಖಿಸಿದ್ದಾರೆ. ಇನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಮತ್ತಷ್ಟು ಮಾಹಿತಿ ಲಭ್ಯವಾಗುವ ಸಂಭವವಿದೆ.

ದಿ. ಬಿ.ಎಲ್. ರೈಸ್‌ರವರು 1884 ರಲ್ಲಿ ಸಂಪಾದಿಸಿದ ನಾಗವರ್ಮ ಕೃತ 'ಕರ್ನಾಟಕ ಭಾಷಾಭೂಷಣ'ದ ಪೀಠಿಕೆಯಲ್ಲಿ ಹೇಳುವಂತೆ ಮೂರು ಭಾಗಗಳು ಲಭ್ಯವಿದ್ದು ಕೃತಿಯ ಕಡೆಯ ಭಾಗದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಸಿಂಹಾವಲೋಕನ ಮಾಡಿದ್ದಾರೆ. ಈ ಪ್ರಬಂಧದಲ್ಲಿ ಹಲವು ವೀರಶೈವ ಕವಿಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಹರೀಶ್ವರ, ರಾಘವಾಂಕ, ಪಾಲ್ಕುರಿಕೆ ಸೋಮನಾಥ, ವೇದಭಾಷ್ಯವನ್ನು ರಚಿಸಿದ ಹರಭಕ್ತ, ಶಿವಕವಿ, ಭೀಮಕವಿ, ಗುಬ್ಬಿ ಮಲ್ಲಣಾರ್ಯ, ಸಿಂಗಿರಾಜ, ಚಾಮರಸ, ವಿರಕ್ತ ತೋಂಟದಾರ್ಯ, ಅದ್ರೀಶಕವಿ, ನಿಜಗುಣ ಶಿವಯೋಗಿ, ಚಿಕ್ಕನಂಜೇಶ, ಶಾಂತಲಿಂಗ, ಷಡಕ್ಷರದೇವ, ನಿಟ್ಟೂರು ನಂಜಯ್ಯ, ನಿಡುಗಲ್ಲು ಚನ್ನಪ್ಪ ಮುಂತಾದ ಕವಿಗಳನ್ನು ಕಾಲ ನಿರ್ದೇಶನ ಮಾಡಿ ಚರ್ಚೆ ಮಾಡಿದ್ದಾರೆ. ಕವಿಗಳ ವಿವರಗಳು ಸಿಕ್ಕದಿರುವ ಕಡೆ ಹಸ್ತಪ್ರತಿಗಳನ್ನು ಪರಿಶಿಲಿಸಿ ಕೆಲವು ವೀರಶೈವ ಕವಿಗಳ ಪಟ್ಟಿ ಕೊಟ್ಟಿದ್ದಾರೆ. ಶಾಂತವೀರದೇಶಿಕ ರಚನೆ ಮಾಡಿರುವ ಈ ಕೃತಿ 'ಶಿವಲಿಂಗಚಾರಿತ್ರ' ಇರಬೇಕು. ಗುರುಭಕ್ತೇಂದ್ರ ಚರಿತ್ರೆ ರಚಿಸಿರುವ, 'ಪ್ರಸಾದ ಭೂಷಣ' ಷಡ್‌ಸ್ಥಲ ಉಪದೇಶವನ್ನು ಹೊಂದಿದ, ಕುಮಾರ ಬಂಕನಾಥನ ಉಲ್ಲೇಖ ಇರುವಂತಹ 'ಪ್ರಭುದೇವರ ವಚನದ ಟೀಕೆ' ಇರುವ ಹಸ್ತಪ್ರತಿಯೇ ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರ ವಚನ ಟೀಕೆ ಬರೆದ ಮಹಾಲಿಂಗ ದೇವನದು. ತೋಂಟದ ಸಿದ್ಧಲಿಂಗೇಶ್ವರ ಅಥವಾ ಸಿದ್ಧೇಶ್ವರ ರಚಿಸಿದ 'ಷಟ್‌ಸ್ಥಲ ಜ್ಞಾನಸಾರಾಮೃತ.'

ರೈಸ್‌ರವರ ಕಾಲದಲ್ಲಿ ಈ ಕೃತಿಗಳನ್ನು ರಚಿಸಿದ ಕವಿಗಳು ಯಾರು ಎಂದು ತಿಳಿದಿರಲಿಲ್ಲ. ರುದ್ರಭಾರತ, ಸಿದ್ಧರಾಮಚಾರಿತ್ರ, ಶಾಂತಗಣೇಶ್ವರ ಸಾಂಗತ್ಯ, ಷಟ್‌ಸ್ಥಲ ತಿಲಕ, ಗುರುಬೋಧಾಮೃತ, ಲಿಂಗಚರಿತ್ರ, ಸೌಂದರ ಪುರಾಣ, ವೀರಸಂಗಯ್ಯನ ಸಾಂಗತ್ಯ, ಚಿಕ್ಕಯ್ಯನ ಸಾಂಗತ್ಯ, ಭೈರವೇಶ್ವರ ಕಥೆ, ಶರಣಬಸವ ರಗಳೆ, ಶಿವಪಾರಿಜಾತ, ಶಿವರಾತ್ರಿ ಕಥೆ, ಸಾನಂದ ಗಣೇಶ್ವರನ ಕಥೆ ಮೊದಲಾದ ಕೃತಿಗಳನ್ನು ಪರಿಶೀಲಿಸಿದ್ದಾರೆ.

ಮೈಸೂರು ನಗರದ ವೀರಶೈವ ಪತ್ರಿಕಾ ಪಿತಾಮಹ ಎಂದೇ ಪ್ರಖ್ಯಾತವಾದ ಯಜಮಾನ್ ವೀರಸಂಗಪ್ಪನವರು ತಮ್ಮ ಸಾಹಿತ್ಯಸೇವೆಯನ್ನು ಪ್ರಾರಂಭಿಸುವ ಮೊದಲು ಕನ್ನಡನಾಡಿನ ಮೂಲೆಮೂಲೆಯು ಪ್ರಮುಖ ಪೇಟೆ, ಮನೆಗಳಿಗೆ ಅರ್ಥಾತ್ ನಗರದ ಅಂದಿನ ಗಣ್ಯರಾಗಿದ್ದ ಪೇಟೆಶೆಟ್ಟರು, ಯಜಮಾನರುಗಳಿಗೆ ಬರೆದ ವಿನಯಾರ್ಥ ಪತ್ರದಲ್ಲಿ ನಲ್ವತ್ತು ವೀರಶೈವ ಪ್ರಮುಖ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಈ ಪತ್ರಿಕೆ ಬರೆದದ್ದು ಸುಮಾರು 1880 ರ ಹಿಂದೆಮುಂದೆ. "ಮೈಸೂರು ಜನಗಣತಿ" ಸಂದರ್ಭದಲ್ಲಿ ವೀರಶೈವರನ್ನು ಯಾವ ವರ್ಗದಲ್ಲಿ ಪರಿಗಣಿಸಬೇಕು ಎಂದು ಚರ್ಚೆ ನಡೆದಾಗ ಸಮಾಜ ಬಹಳ ಜಾಗ್ರತೆ ವಹಿಸಿ ಒಂದು ಚಳುವಳಿಯನ್ನೇ ಮಾಡಿತು. ಆ ಸಂದರ್ಭದಲ್ಲೆ "ಬ್ರಾಹ್ಮಣ-ಬ್ರಾಹ್ಮಣೇತರ" ಚಳುವಳಿಯೂ ಪ್ರಾರಂಭವಾಗಿದ್ದು, ನನ್ನ ಪ್ರಕಾರ ಈ ಚಳುವಳಿಯ ಜನಕ 'ಮೈಸೂರು ಸ್ಟಾರ್' ಪತ್ರಿಕೆಯ ಯಜಮಾನ್ ವೀರಸಂಗಪ್ಪನವರೇ,

**ನಿರಂತಗ್ನಾಯೋಸ್ತು**
**ಶ್ರೀ ದಕ್ಷಿಣಾ ಮೂರ್ತಿಯೇ ನಮಃ**
**ಶ್ರೀಮತ್ ರೇಣುಕಾಚಾರ್ಯ ನಮಃ**
**ವೀರಶೈವ ಸಿದ್ಧಾಂತ ಮುದ್ರಣ ಪ್ರಕಟನ ಪತ್ರಿಕಾ**

ಶ್ರೀಮದ್ವೀಮಾಹೇಶ್ವರಮತ ಪ್ರವರ್ತಕ ವೇದಾಗಮಾದಿ ಪ್ರತಿಪಾದಿತ ಷಟ್‌ಸ್ಥಲ ತತ್ವವಿದಿತಷ್ಟಾವರಣ ಪಂಚಾಚಾರಧುರೀಣರಾದ ಶಿವಾರ್ಥ ಶರೀರ ಶೋಷಣ ಶಿವಾರ್ಚನ ಶ್ರೀ ರುದ್ರಾಧ್ಯಯನ । ಶಿವಸ್ವರೂಪಚಿಂತಾ ಶಿವತತ್ವವೇದನ ರೂಪ ತಪಃ ಕರ್ಮ ಜಪಧ್ಯಾನ ಜ್ಞಾನಮಯ ಪಂಚಯಜ್ಞ ನಿರತರಾದ ವೇದಾಂತೋದಿತ । ತತ್ವಮಸ್ಯಾದಿ ಮಹಾವಾಕ್ಯಬ್ಧಿ ಸಮುತ್ಥಿತ ಸುಧಾಧಾರಾಯಿತ ಲಿಂಗಾಂಗಸಾಮರಸ್ಯ ಧುರೀಣರಾದ ಅಶೇಷ ವೀರಶೈವ ಮಹಾಜನಗಳ ಸನ್ನಿಧಿಯಲ್ಲಿ ಮೈಸೂರಲ್ಲಿರುವ ನಿಖಿಲ ವೀರಶೈವ ಮಹಾಜನಂಗಳು ಸಾಷ್ಟಾಂಗ ನಮಸ್ಕಾರ ಪುರಸ್ಸರವಾಗಿ ।

॥ ವಿಜ್ಞಾಪಿಸುವದೇನೆಂದರೆ ॥

ನಮ್ಮ ಪೂರ್ವಾಚಾರ್ಯರಾದ ಶ್ರೀಮತ್ ಷಟ್‌ಸ್ಥಲಬ್ರಹ್ಮೀ ಮರಿತೋಂಟದಾರ್ಯ ಮಗ್ಗೆ ಮಾಯಿದೇವ, ಮಂಚಂಣ ಪಂಡಿತ, ಸೋಮಾರಾಧ್ಯ, ಸೋಸಲಿ ವೀರಣಾರಾಧ್ಯ, ನಂದೀಶ್ವರ, ನೀಲಕಂಠ, ಶಿವಾಚಾರ್ಯರು ಮೊದಲಾದವರಿಂದ ರಚಿಸಲ್ಪಟ್ಟ ಶ್ರುತಿಸ್ಮೃತಿ ಪುರಾಣಾಗಮೋಪನಿಷತ್ಸಾರಭೂತಂಗಳಾದ ಅನೇಕ ವೀರಶೈವ ಸಿದ್ಧಾಂತ ಗ್ರಂಥಗಳುಂಟೆಬುವ ಸಂಗತಿಯು ಸರ್ವರಿಗೂ ವಿದಿತವಾಗಿರಬಹುದು. ಆದರೆ ಆ ಗ್ರಂಥಗಳೆಲ್ಲಾ ದೊರೆಯದಿದ್ದಾಗ್ಯೂ ಕೆಲವು ಗ್ರಂಥಗಳು ಅಲ್ಲಲ್ಲಿ ವಿರಳವಾಗಿವೆ. ಅವುಗಳಲ್ಲಿ :

**1ನೇ ನಂಬರು ಪುಸ್ತಕಗಳೂ**

1. ವೀರಶೈವಾನಂದ ಚಂದ್ರಿಕಾ
2. ಲಿಂಗಧಾರಣ ಚಂದ್ರಿಕಾ
3. ಲಿಂಗಧಾರಣ ದೀಪಿಕಾ
4. ಕ್ರಿಯಾಸಾರ
5. ಶ್ರೀಮದ್ಬಸವರಾಜೀಯ
6. ಮಾಚಿದೇವಮನೋವಿಲಾಸ
7. ವೀರಶೈವಾಚಾರಕೌಸ್ತುಭ
8. ಶಿದ್ಧಾಂತ ಶಿಖಾಮಣಿ
9. ಪಂಡಿತಚಾರಿತ್ರ
10. ಅನುಭವಸೂತ್ರ
11. ವಿಶೇಷಾರ್ಥ ಪ್ರಕಾಶಿಕಾ
12. ವೀರಶೈವ ಸರ್ವೋತ್ಕರ್ಷ ಪ್ರದೀಪಿಕಾ
13. ಶಿವಾದ್ವೈತ ಪ್ರಕಾಶಿಕಾ
14. ವೀರಶೈವ ಚಿಂತಾಮಣಿ
15. ವ್ಯಾಸಕೃತ ಬಸವೇಶ್ವರ ಪುರಾಣ
16. ದೀಕ್ಷಾವಿಧಿ
17. ವಿವಾಹವಿಧಿ
18. ಗುರುಪೂಜಾವಿಧಿ
19. ವಾತುಲತಂಥ್ರ
20. ವೀರಾಗಮ

**2ನೇ ನಂಬರು ಪುಸ್ತಕಗಳೂ**

1. ರೇಣುಕ ಭಾಷ್ಯ
2. ನೀಲಕಂಠ ಭಾಷ್ಯ
3. ತರ್ಕ ಚಂದ್ರಿಕಾ
4. ಶಿದ್ಧಾಂತ ಶೇಖರ
5. ವೀರಮಾಹೇಶ್ವರಾಚಾರಸಂಗ್ರಹ
6. ಶಿವಜ್ಞಾನ ಸಮುಚ್ಚಯ
7. ವೀರಶೈವ ರತ್ನಾಕರ
8. ಷಟ್‌ಸ್ಥಳ ಚಂದ್ರಿಕಾ
9. ಶಿವಜ್ಞಾನ ಮಂಜರಿ
10. ವೀರಶೈವ ಪ್ರಕಾಶಿಕಾ
11. ಕೈವಲ್ಯಸಾರಃ
12. ವೀರಶೈವ ಸಂಜೀವನಾ
13. ವೀರಶೈವಾಚಾರ ಪ್ರದೀಪಿಕಾ
14. ಶಿವಜ್ಞಾನಶೇಖರ
15. ಶಂಕರಸಾರೋದ್ಧಾರ
16. ಶಿವಪ್ರಸಂಗ ರತ್ನಾಕರ
17. ಶಿವಜ್ಞಾನ ಪ್ರದೀಪಿಕಾ
18. ಸಿದ್ಧಾಂತ ಸಾರಾವಳಿ
19. ವೀರಶೈವಾಭ್ಯುದಯ
20. ವೀರಶೈವಮತೋದ್ಧಾರ ಚಂದ್ರಿಕಾ

ಮೇಲಿನ ಗ್ರಂಥಗಳ ಪಟ್ಟಿಯಲ್ಲಿ ಮುಖ್ಯವಾದ ಗ್ರಂಥಗಳು ಯಜಮಾನ್ ವೀರಸಂಗಪ್ಪನವರಿಂದ ಪ್ರಕಾಶಗೊಂಡವು. ಅವುಗಳ ಪಟ್ಟಿ ಇಂತಿದೆ: 1. ಸಿದ್ಧಾಂತ ಶಿಖಾಮಣೀಃ 2. ಮಾಚಿದೇವ ಮನೋವಿಲಾಸಃ 3. ಲಿಂಗಧಾರಣ ಚಂದ್ರಿಕಾ 4. ವೀರಶೈವಾಚಾರ ಕೌಸ್ತುಭಂ 5. ಕ್ರಿಯಾಸಾರಃ 6. ಅನುಭವಸೂತ್ರಂ 7. ವೀರಮಾಹೇಶ್ವರ ಪ್ರಶಂಸಾ 8. ಶಿವಪೂಜಾವಿಧಿಃ 9. ವೀರಶೈವ ವಿವಾಹ ವಿಧಿಃ 10. ಸಟೀಕಾ ನಂದೀವ್ರತಂ 11. ದೀಕ್ಷಾ ವಿಧಿಃ 12. ವೀರಶೈವೋತ್ಕರ್ಷ ಸಂಗ್ರಹಃ 13. ಸಟೀಕಾ ವೃಷಭೇಂದ್ರ ವಿಜಯಂ 14. ಕೊಟ್ಟೂರು ಬಸವೇಶ್ವರ ಪುರಾಣಂ 15. ಪರಮತ ಗಜಾಂಕುಶ ತಾರಾವಳೀ 16. ಶತಕತ್ರಯಂ 17. ಕರ್ಣಾಟಕ ಶಬ್ದಮಂಜರಿ 18. ಗುರು ಶಂಕರೇಶ್ವರ ಶತಕಂ 19. ಷಟ್ಸ್ಥಲವಿದ್ಯಾ 20. ವ್ರತಪ್ರಚಾರ.

ಈ ಮುದ್ರಿತ ಪುಸ್ತಕಗಳಲ್ಲಿ ಕೆಲವು ಈಗ ಪಾತಾಳಗರುಡಿ ಹಾಕಿ ಹುಡುಕಿದರೂ ಸಿಗುವುದಿಲ್ಲ.

ಆಸ್ಥಾನ ಮಹಾವಿದ್ವಾನ್ ಕರ್ನಾಟಕ ಭೂಷರತ್ನಂ ಪಿ.ಆರ್. ಕರಿಬಸವಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ ಗ್ರಂಥಗಳು ಆರಂಭದ ದಿನದಲ್ಲಿ ಯಜಮಾನ್ ವೀರಸಂಗಪ್ಪನವರ ಜೊತೆಯಲ್ಲಿ ದುಡಿದು ಹಲವು ಮುಖ್ಯವಾದ ಗ್ರಂಥಗಳನ್ನು ಸಂಪಾದಿಸಿಕೊಟ್ಟರು. ಅವರು ಸಂಪಾದಿಸಿದ ಪ್ರಮುಖ ಗ್ರಂಥಗಳು:

1. ಕ್ರಿಯಾಸಾರ 2. ಸಿದ್ಧಾಂತ ಶಿಖಾಮಣಿ 3. ದೀಕ್ಷಾ ವಿಧಿ 4. ಮಾಚಿದೇವ ಮನೋವಿಲಾಸ 5. ಲಿಂಗಧಾರಣ ಚಂದ್ರಿಕಾ 6. ಅನುಭವ ಸೂತ್ರ 7. ವಿವಾಹ ವಿಧಿ 8. ವೀರಶೈವೋತ್ಕರ್ಷ ಸಂಗ್ರಹ 9. ಸ್ಟಾರ್ ಕರೆಸ್ಪಾಂಡೆನ್ಸ್ 10. ಸಂಸ್ಕೃತ ಬಸವೇಶ ವಿಜಯ 11. ಕನ್ನಡ ಬಸವೇಶ ವಿಜಯ 12. ರಾಜಶೇಖರ ವಿಳಾಸ 13. ಶಂಬರಶಂಕರ ವಿಳಾಸ 14. ಭಕ್ತಾಧಿಕ್ಯ ರತ್ನಾವಳಿ 15. ದಶಗ್ರಂಥಿ 16. ಅನುಭವಸಾರ 17. ವ್ಯಾಸೋಕ್ತ ಬಸವ ಪುರಾಣ 18. ಶಿವಾದ್ವೈತ ಮಂಜರಿ 19. ಸಿದ್ಧೇಶ್ವರ ಪುರಾಣ 20. ವೀರಶೈವ ಪ್ರದೀಪಿಕಾ 21. ಶಿವಪೂಜಾವಿಧಿ 22. ಸಂಕ್ಷೇಪ ಶಿವಪೂಜಾವಿಧಿ 23. ಗಣಸಹಸ್ರ ನಾಮಾವಳೀ ಸ್ತೋತ್ರವು.

ಆಸ್ಥಾನವಿದ್ವಾನ್ ಎನ್.ಆರ್. ಕರಿಬಸವ ಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ ಗ್ರಂಥಗಳು: 1 ಸಿದ್ಧಾಂತ ಶಿಖಾಮಣಿ 2. ಪಂಡಿತಾರಾಧ್ಯ ಚರಿತ್ರೆ 3. ಚೆನ್ನಬಸವ ವಿಜಯಂ 4. ಬಸವರಾಜ ವಿಜಯ 5. ಸೌಂದರ ಪುರಾಣ 6. ವೀರಶೈವ ಧರ್ಮ ಶಿರೋಮಣಿ 7. ರೇವಣ ಸಿದ್ಧೇಶ್ವರ ಪುರಾಣ 8. ಪಾಲ್ಕುರಿಕೆ ಸೋಮೇಶ್ವರ ಪುರಾಣ 9. ವೀರಶೈವ ದೀಕ್ಷಾವಿಧಿ 10. ಶಿವಯೋಗ ಪ್ರದೀಪಿಕಾ 11. ಶತಸೂತ್ರರತ್ನ 12. ತತ್ವ ಪ್ರಕಾಶಿಕಾ 13. ರಕ್ಷಾಶತಕಂ 14. ಶಂಕರಲಿಂಗ ಕಂದ 15. ಸ್ತುತಿ ಮುಕ್ತಾವಳಿ 16. ದೇವಿ ಕಾಲೋತ್ತರಾಗಮದ ಜ್ಞಾನಾಚಾರ ಬೋಧಕ ಪಟಲವು. 17. ಸಟೀಕಾ ವೃಷಭೇಂದ್ರವಿಜಯ.

ಮೈಸೂರು ಪರಿಸರದ ವೀರಶೈವ ವಿದ್ವಾಂಸರ ಸಾಹಿತ್ಯ ಸಂಶೋಧನೆ, ಸಂಪಾದನೆ ಪ್ರಕಟಣೆ ಎಂಬ ಶೀರ್ಷಿಕೆಯಡಿಯಲ್ಲಿ ನಮ್ಮ ನಾಡಿನ ಯುವ ವಿದ್ವಾಂಸರು ಮಹಾಪ್ರಬಂಧಗಳನ್ನು ರಚಿಸಿದರೆ ನಮಗೆ ಅವರುಗಳು ಮಾಡಿರುವ ಸಾಹಿತ್ಯವಿಸ್ತಾರದ ಅರಿವು ಉಂಟಾಗುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ್ದು ಚರ್ಚೆ, ಮೈಸೂರಿನ ಯಜಮಾನ ವೀರಸಂಗಪ್ಪನವರು ತಮ್ಮ ಸ್ಟಾರ್ ಪತ್ರಿಕೆಯಲ್ಲಿ ಸಿದ್ಧಾಂತವನ್ನು ಅನುಸರಿಸುವ ವಿದ್ವಾಂಸರು ಹಾಕಿದ ನೂರಾರು ಪ್ರಶ್ನೆಗಳಿಗೆ ಉತ್ತರವನ್ನು ತಾವೂ ಬರೆದು, ಎಲ್ಲ ವಿದ್ವಾಂಸರಿಂದ ಬರೆಯಿಸಿ ದಿಗ್ವಿಜಯರಾದವರು. ಮುಂದಿನ ಜನಾಂಗದ ಉಪಯೋಗಕ್ಕೆ ಪುಸ್ತಕರೂಪದಲ್ಲಿ ಪ್ರಕಟಿಸಿದರು.

1. ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಕರೆಸ್ಪಾಂಡೆನ್ಸ್–1, (2) 26ನೇ ಮೇ 1882–30ನೇ ಮೇ 1894 ಇಸವಿವರೆಗೆ.

2. ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಕರೆಸ್ಪಾಂಡೆನ್ಸ್ 2) ಸನ್ 1896 ನೇ ಇಸವಿ ಜೂನ್ ಮಾಹೆಯಿಂದ 1886 ನೇ ಆಗಸ್ಟ್ ಮಾಹೆವರೆಗೆ ಪ್ರಕಟಿಸಿದ ಕರೆಸ್ಪಾಂಡೆನ್ಸ್ ಭಾಗ 1 ಪುಸ್ತಕರೂಪದಲ್ಲಿ ಹೊರಬಂದದ್ದು 15 ಜೂನ್ 1884ನೇ

ಇಸವಿಯಲ್ಲಿ. ಭಾಗ 2 1886ನೇ ಇಸವಿಯಲ್ಲಿ ಪುಸ್ತಕ ರೂಪದಲ್ಲಿ ಹೊರಬಂದಿದೆ. ಈ ಎರಡು ಪುಸ್ತಕಗಳು ಬಹಳ ಹಳೆಯವಾದ್ದರಿಂದ ಇನ್ನು ಸ್ವಲ್ಪ ದಿವಸದಲ್ಲಿ ಮುಟ್ಟಿ ನೋಡಲು ಲಭ್ಯವಾಗುವುದಿಲ್ಲ. ನೂರಾರು ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ಹೇಳಿರುವ ಅಪರೂಪದ ಪುಸ್ತಕಗಳಿವು. ಮೈಸೂರು ಸ್ಟಾರ್ ಪತ್ರಿಕೆ ಪೂರ್ವಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡಿದ ಹಿರಿಯ ವಿದ್ವಾಂಸರಾದ ಎನ್.ಆರ್. ಕರಿಬಸವಶಾಸ್ತ್ರಿಗಳಿಂದ 'ಷಟ್ಸ್ಥಲ ವಿದ್ಯಾ' ಎಂಬ ಗ್ರಂಥವನ್ನು ಬರೆಸಿ ಪ್ರಕಟಿಸಿತು. ಈ ಪುಸ್ತಕದ ಎರಡನೇ ಮುದ್ರಣ 1923 ರಲ್ಲಿ ಹೊರಬಂದಿದೆ. ಪೀಠಿಕೆಯ ಕಡೆಯಲ್ಲಿ ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿಗಳು ಈ ಮಾತುಗಳನ್ನು ಹೇಳಿದ್ದಾರೆ: "ಈ ಏಕೋತ್ತರ ಶತಸ್ಥಲ ವಿಚಾರವು ಶಿವಾಗಮಗಳಲ್ಲೂ, ಸಿದ್ಧಾಂತ ಶಿಖಾಮಣೀ, ಕೈವಲ್ಯಸಾರಃ, ಏಕೋತ್ತರ ಶತಸ್ಥಲೀ, ವೀರಶೈವಾನಂದ ಚಂದ್ರಿಕೆ, ಅನುಭವ ಸೂತ್ರ ಮೊದಲಾದ ಅನೇಕ ಸಂಸ್ಕೃತ ಗ್ರಂಥಗಳಲ್ಲಿಯೂ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಕನ್ನಡಿಗರಿಗೆ ಅದನ್ನು ಸಂಗ್ರಹವಾಗಿ ತಿಳಿಸುವ ಉದ್ದೇಶದಿಂದ ಒಂದೆರಡು ಗ್ರಂಥಗಳು ಈಚೆಗೆ ಕೆಲವರಿಂದ ಬರೆಯಲ್ಪಟ್ಟಿದ್ದರೂ, ಅವು 101 ಸ್ಥಲಗಳ ವಿವರಣೆಯನ್ನು ನೀಡುವ ಉತ್ತರ ಭಾಗದಂತಿರುವವು. ಅದಕ್ಕೆ ಪೂರ್ವಭಾಗದಂತಿರುವ ಷಟ್ಸ್ಥಲದ ಮುಖ್ಯ ವಿಷಯಗಳನ್ನು ಸಂಗ್ರಹಿಸಿ ಬರೆಯುವುದು ಅವಶ್ಯಕವಾಗಿ ತೋರಿದುದರಿಂದ ಈ ಚಿಕ್ಕ ನಿಬಂಧವು ಬರೆಯಲ್ಪಟ್ಟಿತು. ಸಂಸ್ಕೃತ ಗ್ರಂಥದಲ್ಲಿ ಷಟ್ಸ್ಥಲಗಳನ್ನು ತಿಳಿಯುವುದು ಸರ್ವರಿಗೂ ಸಾಧ್ಯವಲ್ಲದ ಪ್ರಯುಕ್ತವೂ ಪ್ರತಿಯೊಬ್ಬ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಕರಸ್ಪಾಂಡೆನ್ಸ್‌ನಲ್ಲಿರುವ ಷಟ್ಸ್ಥಲಗಳನ್ನು ತಿಳಿದುಕೊಳ್ಳಬೇಕಾಗಿರುವುದರಿಂದಲೂ ಈ ಕನ್ನಡ ಗ್ರಂಥವು ಮುದ್ರಣ ಮಾಡಿಸಲ್ಪಟ್ಟಿದೆ."

ಗುಬ್ಬಿ ಆರಾಧ್ಯ ವೀರೇಶ್ವರ ಶಾಸ್ತ್ರಿಗಳು ಅಥವಾ ಹುಚ್ಚ ವೀರಶಾಸ್ತ್ರಿಗಳು ತಾವೇ ರಚಿಸಿದ "ವೀರಶೈವಾನಂದ ಚಂದ್ರಿಕಾ"ದಲ್ಲಿ (1890) ಪ್ರಾಚೀನ ವೀರಶೈವ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳ ಒಂದು ಪಟ್ಟಿಯನ್ನು ನೀಡಿದ್ದಾರೆ. ಗುಬ್ಬಿ ನಗರದಲ್ಲಿ ಶಾಸ್ತ್ರಿಗಳು ಪೌರೋಹಿತ್ಯ, ಅಧ್ಯಾಪನ, ನಾಟಕಕಾರ, ಗ್ರಂಥ ಕರ್ತೃ, ಗ್ರಂಥ ಸಂಪಾದಕ, ಶಿವಕೀರ್ತನಕಾರ – ಹೀಗೆ ವೈವಿಧ್ಯಮಯವಾದ ಬದುಕನ್ನು ಬದುಕಿದವರು. ಆರಾಧ್ಯ ವೀರೇಶ್ವರ ಶಾಸ್ತ್ರಿಗಳು ಅಥವಾ ಹುಚ್ಚವೀರಶಾಸ್ತ್ರಿಗಳು ಬ್ರಾಹ್ಮಣ–ಬ್ರಾಹ್ಮಣೇತರ ಚಳುವಳಿಯ ಆರಂಭದ ದಿನಗಳಲ್ಲಿ ಪ್ರಕಟಿಸಿದ ಈ ಗ್ರಂಥದಲ್ಲಿ ಹಲವು ಉಪಯುಕ್ತ ಮಾಹಿತಿಗಳು ಇವೆ. ದಕ್ಷಿಣಾಮೂರ್ತಿ ಶಾಸ್ತ್ರಿಗಳ ಶ್ರೀ ರಾಜರಾಜೇಶ್ವರಿ ಮುದ್ರಾಕ್ಷರ ಶಾಲೆಯಲ್ಲಿ 1890 ರಲ್ಲಿ ಮುದ್ರಣವಾದ ಈ ಸಂಸ್ಕೃತ ಕೃತಿಗೆ ಶಾಸ್ತ್ರಿಗಳೇ ಕನ್ನಡ ಟೀಕೆ ಬರೆದಿದ್ದಾರೆ. ಈ ಪುಸ್ತಕದ ಪುಟ 50, 51, 52 ರಲ್ಲಿ ಹಲವು ಸಂಸ್ಕೃತ ಮತ್ತು ಕನ್ನಡ ಕೃತಿಗಳ ಪಟ್ಟಿಯನ್ನು ನೀಡಿದ್ದಾರೆ. ಮೂಲ ಓಲೆಗರಿ ಕಟ್ಟುಗಳನ್ನು ಪರಿಶೀಲಿಸಿ ಪಟ್ಟಿಯನ್ನು ತಯಾರಿಸಿದ್ದು ಅಂದಿನ ದಿನಮಾನದಲ್ಲಿ ಅವರು ಮಾಡಿದ ಬಹು ದೊಡ್ಡ ಕೆಲಸ.

1. ರೇಣುಕಾಚಾರ್ಯ ಭಾಷ್ಯ 2. ಶೃತಿಸಾರ ಭಾಷ್ಯ 3. ನೀಲಕಂಠ ಭಾಷ್ಯ 4. ಸೋಮನಾಥ ಭಾಷ್ಯ – (ಪಾಲ್ಕುರಿಕೆ ಸೋಮನಾಥ) 5. ಸರ್ವೇಶ್ವರ ಭಾಷ್ಯಂ 6. ಸಿದ್ಧಾಂತ ಶಿಖಾಮಣಿಃ (ಶಿವಯೋಗಿ ಶಿವಾಚಾರ್ಯ) 7. ಚೋಳ ರೇಣುಕ ಸಂವಾದಂ (ಸೋಸಲೆ ರೇವಣಾರಾಧ್ಯ) 8. ರೇಣುಕ ಚಾರಿತ್ರಂ (ಸಂಸ್ಕೃತ ಶ್ಲೋಕದಲ್ಲಿ ಈ ಹೆಸರು ಇದೆ. ಕನ್ನಡ ಟೀಕಾಭಾಗದಲ್ಲಿ ಈ ಕೃತಿಯ ಉಲ್ಲೇಖ ಇಲ್ಲ.) 9. ವೀರಮಾಹೇಶ್ವರ ಸಂಗ್ರಹಂ – ನೀಲಕಂಠ ನಾಗನಾಥಾಚಾರ್ಯಃ (ವೀರಮಾಹೇಶ್ವರಾಧಿಕ್ಯ ಗಣಾಧಿಕ್ಯ) (ವೀರಮಾಹೇಶ್ವರ ಗಣಾಧಿಕ್ಯ) ಎಂದು ಶಾಸ್ತ್ರಿಗಳು ಬರೆದಿದ್ದಾರೆ. 10. ವೀರಶೈವಾಚಾರ ಕೌಸ್ತುಭಂ–ಮೌನಪ್ಪ ಪಂಡಿತ, 11. ವೀರಶೈವ ಪ್ರಕಾಶಿಕಾ 12 ವೀರಶೈವ ರತ್ನಾಕರಂ 13. ವೀರಶೈವೋತ್ಕರ್ಷ ಪ್ರಕಾಶಿಕಾ – ಸ್ವಾದಿ ಚನ್ನಬಸವ ಸ್ವಾಮಿಗಳು 14. ವೀರಶೈವಾನಂದ ಚಂದ್ರಿಕೆ – ಮರಿ ತೋಂಟದಾರ್ಯ 15. ವೀರಶೈವ ಪ್ರದೀಪಿಕೆ 16. ಶಿವಜ್ಞಾನ ಶೇಖರಂ 17. ಶಿವಾದ್ವೈತ ಮಂಜರೀ – (ಸ್ವಪ್ರಭಾನಂದನಾಥಃ) 18. ಪಂಡಿತಾಚಾರ್ಯ ಚಾರಿತ್ರಂ – ಗುರುರಾಜ 19. ಮರುಳ ಸಿದ್ಧ ಚಾರಿತ್ರಂ 20. ರೇವಣಸಿದ್ಧ ಚಾರಿತ್ರಂ 21. ಕ್ರಿಯಾಸಾರಃ 22. ಕೈವಲ್ಯ ಸಾರಃ – (ವಿರಕ್ತ ತೋಂಟದಾರ್ಯ) 23. ಬಸವರಾಜೀಯ – (ಪಾಲ್ಕುರಿಕೆ ಸೋಮನಾಥ) 24. ಮಾಚಿದೇವ ಮನೋವಿಲಾಸ – (ಆನಂದ ಬಸವಲಿಂಗ ಯತಿಃ) 25. ವೀರಶೈವ ಸಂಜೀವಿನಿ – (ವಿರಕ್ತ ತೋಂಟದಾರ್ಯ) 28. ಪಂಡಿತ ಚಾರಿತ್ರಂ 29. ನಿರಾಭಾರಿ ಸಂಗ್ರಹಂ 30. ಷಟ್ಸ್ಥಲ ತಿಲಕಂ – (ಮುಖಬೋಳು ಸಿದ್ಧೇರಾಮ) 31. ಶಿವಪ್ರಸಂಗ ರತ್ನಾವಳಿ 32. ಷಟ್ಸ್ಥಲ ಚಂದ್ರಿಕೆ – (ಹದಿನೆಂಟನೇ ಶತಮಾನದಲ್ಲಿ ಇದ್ದ ತೋಂಟದಾರ್ಯ) 33. ಶಿವಜ್ಞಾನ ಪ್ರದೀಪಿಕೆ 34. ಶಾಂಭವ ಸಾರೋದ್ಧಾರ 35. ಶಿವತರ್ಕ ಚಂದ್ರಿಕಾ 36. ಲಿಂಗಧಾರಣ ಚಂದ್ರಿಕೆ (ನಂದಿಕೇಶ್ವರಃ) 37. ಶಿವಾದ್ವೈತ ಪ್ರದೀಪಿಕೆ 38. ಸಿದ್ಧಾಂತ ಶೇಖರ 39. ವಿಶೇಷಾರ್ಥ ಪ್ರಕಾಶಿಕೆ (ಮೊಗ್ಗೆ ಮಾಯಿದೇವ) 40. ಅನಾದಿ ವೀರಶೈವ ಸಂಗ್ರಹ (ಸಂಪಾದನೆ ಸಿದ್ಧವೀರಣ್ಣಾರ್ಯಃ) 41. ಧರ್ಮಸಂಗ್ರಹ.

ಜೇರಿಗೆ ಬಸವಲಿಂಗಪ್ಪನವರು ಎಂದು ಪ್ರಖ್ಯಾತರಾದ ಆಧುನಿಕ ವಚನಕಾರರು ವೀರಶೈವ ಗ್ರಾಮಾಂತರ ಪುರಾತನ ಸ್ವನಿರ್ಮಿತ ಪಾಠಶಾಲಾ ವಿದ್ಯಾರ್ಥಿಗಳಿಗೂ ಆಂಗ್ಲೇಯರ ಪಾಠಶಾಲೆ ವೀರಶೈವ ಪ್ರಥಮ ವಿದ್ಯಾಭ್ಯಾಸಿಗಳಿಗೂ ಉಪಯುಕ್ತವಾಗಿರುವಂತೆ 'ವೀರಶೈವ ಮತ ವಿಷಯಸಾರ' ಎಂಬ ಮೂವತ್ತೈದು ಪುಟದ ಪುಸ್ತಕದಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯವನ್ನು ಚರ್ಚಿಸಿದ್ದಾರೆ. ಕರ್ತೃಸಮೇತ 45 ಜನ ಕವಿಗಳ ಪಟ್ಟಿಯನ್ನು ನೀಡಿದ್ದಾರೆ.

1. ರೇಣುಕರು – ರೇಣುಕ ಭಾಷ್ಯ (ಸಂಸ್ಕೃತ ಮತ್ತು ಷಟ್ಸ್ಥಲ ಸಿದ್ಧಾಂತ ಕನ್ನಡದಲ್ಲಿ)
2. ಶಿವಯೋಗೀಶ್ವರ – ಸಿದ್ಧಾಂತ ಶಿಖಾಮಣಿ
3. ನೀಲಕಂಠ – ಕ್ರಿಯಾಸಾರ, ವೀರಮಾಹೇಶ್ವರಾಚಾರ ಸಂಗ್ರಹ

4. ನೀಲಕಂಠ ಶಿವಾಚಾರ್ಯ – ಬ್ರಹ್ಮಸೂತ್ರ ಭಾಷ್ಯ
5. ನಂದೀಶ್ವರ – ಲಿಂಗಧಾರಣ ಚಂದ್ರಿಕೆ
6. ಬಸವಲಿಂಗಾರ್ಯ – ಮಾಚಿದೇವ ಮನೋವಿಲಾಸ
7. ಜಗದಾರಾಧ್ಯ ನಾಗೇಶರು – ಶಿವಜ್ಞಾನ ಪ್ರದೀಪಿಕೆ
8. ಸುಧಾಪುರದ ಚನ್ನವೀರಸ್ವಾಮಿಗಳು – ವೀರಶೈವೋತ್ಕರ್ಷ ಪ್ರದೀಪಿಕೆ
9. ಶರಣರ ವಚನಗಳು – ಬಸವೇಶ್ವರ ವಚನ, ಚನ್ನಬಸವೇಶ್ವರ ವಚನ, ಪ್ರಭುದೇವರ ವಚನ, ಸಿದ್ಧರಾಮೇಶ್ವರ ವಚನ
10. ಹಂಪೆ ಹರೀಶ್ವರ ದೇವರು – ಗಿರಿಜಾಕಲ್ಯಾಣ, ಪುರಾತನರ ರಗಳೆ, ಪಂಪಾಶತಕ, ಶಿಲಾಕ್ಷರಮಾಲೆ, ಮುರುಗಯ (ಅದು ಮುಡಿಗೆಯಷ್ಟಕ ಇರಬೇಕು), ರಕ್ಷಾಶತಕ
11. ರಾಘವಾಂಕ – ಸಿದ್ಧರಾಮೇಶ್ವರ ಪುರಾಣ, ಅದ್ಯಯನ ಕಾವ್ಯ, ಹರಿಶ್ಚಂದ್ರ ಕಾವ್ಯ, ವೀರೇಶ್ವರ ಕಥೆ, ಸೋಮನಾಥ ಚರಿತ್ರೆ, ಶರಭ ಚಾರಿತ್ರ, ಹರಿಹರ ಮಹತ್ವ
12. ಕೆರೆಯ ಪದ್ಮರಸ – ಸಂಸ್ಕೃತದಲ್ಲಿ ಸಾನಂದ ಚರಿತ್ರೆ, ಕನ್ನಡದಲ್ಲಿ ದೀಕ್ಷಾ ಬೋಧೆ
13. ಕುಮಾರ ಪದ್ಮರಸ – ಕನ್ನಡದಲ್ಲಿ ಸಾನಂದ ಚರಿತ್ರೆ (ಪದ್ಮರಸ ಪುರಾಣ) ಇದು ಪದ್ಮರಾಜ ಪುರಾಣ ಇರಬೇಕು.
14. ಪಾಲ್ಕುರಿಕೆ ಸೋಮಾರಾಧ್ಯ – ತೆಲುಗಿನಲ್ಲಿ ಬಸವ ಪುರಾಣ, ಪಂಡಿತಚಾರಿತ್ರ್ಯ, ಸಂಸ್ಕೃತದಲ್ಲಿ ಸೋಮನಾಥ ಭಾಷ್ಯ ಅಥವಾ ಬಸವರಾಜೀಯ, ಅಕ್ಷರಾಂಕನ ಗದ್ಯ, ಬಸವೇಶ್ವರ ಪಂಚಗದ್ಯ, ಕನ್ನಡದಲ್ಲಿ ಗಣಸಹಸ್ರನಾಮ, ದೀಪದಕಲ್ಲಿ ಚರಿತ್ರೆ, ಸೋಮೇಶ್ವರ ಶತಕ.
15. ಸೋಮರಾಜರು – ಉದ್ಭಟ ಕಾವ್ಯ
16. ಬಿಜಯಾಚಾರ್ಯರು – ಸಂಸ್ಕೃತದಲ್ಲಿ ಬಸವರುದ್ರ
17. ಮೊಗ್ಗೆ ಮಾಯಿದೇವರು – ಕನ್ನಡದಲ್ಲಿ ಶತಕತ್ರಯ – ಸಂಸ್ಕೃತದಲ್ಲಿ ಅನುಭವ ಸೂತ್ರ, ವಿಶೇಷಾರ್ಥ ಪ್ರಕಾಶಿಕೆ.
18. ಭೀಮಕವಿ – ಬಸವ ಪುರಾಣ, ಸಂಸ್ಕೃತದಲ್ಲಿ ಜ್ಯೋತಿಷ್ಯಾಮೃತಸಾರ
19. ಸಿಂಗಿರಾಜ – (ಅ)ಮಲ ಬಸವಚರಿತ್ರೆ ಅಥವ ಸಿಂಗಿರಾಜ ಪುರಾಣ
20. ಕಂಚಿ ಶಂಕರಾರಾಧ್ಯ – ಸಂಸ್ಕೃತದಲ್ಲಿ ಬಸವ ಪುರಾಣ
21. ಲಿಂಗಕವಿ – ಕಬ್ಬಿಗರ ಕೈಪಿಡಿ.
22. ವಿರಕ್ತ ತೋಂಟದಾರ್ಯ – ಕನ್ನಡದಲ್ಲಿ ಸಿದ್ಧೇಶ್ವರ ಪುರಾಣ, ಮೊಗ್ಗೆ ಮಾಯಿ ದೇವರ ಶತಕತ್ರಯಕ್ಕೆ ವ್ಯಾಖ್ಯಾನ, ಸೋಮನಾಥ ಪುರಾಣ, ಸಂಸ್ಕೃತದಲ್ಲಿ ಕೈವಲ್ಯಸಾರಃ

23. ಮರಿತೋಂಟದಾರ್ಯ – ವೀರಶೈವಾನಂದ ಚಂದ್ರಿಕೆ, ಸಿದ್ಧಾಂತ ಶಿಖಾಮಣಿಗೆ ತತ್ವಪ್ರದೀಪಿಕೆಯೆಂಬ ವ್ಯಾಖ್ಯಾನ.
24. ತೋಂಟದಾರ್ಯ – ಷಟ್‌ಸ್ಥಲತಿಲಕ, ಷಟ್‌ಸ್ಥಲ ಚಂದ್ರಿಕೆ, ಸರ್ವಾಗಮಾಸ್ತರ ಸಂಗ್ರಹ, ವೀರಶೈವ ಪ್ರದೀಪಿಕೆ
25. ಚಾಮರಸ – ಪ್ರಭುಲಿಂಗಲೀಲೆ
26. ಈಶ್ವರ ಕವಿ – ಕವಿಜಿಹ್ವಾಬಂಧನ
27. ಪಿಡುಪರ್ತಿ ಸೋಮಯ್ಯ – ತೆಲುಗಿನಲ್ಲಿ ಪ್ರಭುಲಿಂಗಲೀಲೆ
28. ಶಿವಪ್ರಕಾಶ ದೇಶಿಕರು – ದ್ರಾವಿಡದಲ್ಲಿ ಅರ್ಥಾತ್ ತಮಿಳಿನಲ್ಲಿ ಪ್ರಭುಲಿಂಗ ಲೀಲೆ
29. ಅರವತ್ತಂಕಣ ಕಲ್ಲುಮಠದ ಗುರುದೇವ ಸ್ವಾಮಿಗಳು – ನುಗ್ಗೇಹಳ್ಳಿ ಪುರಾಣ, ನಾಗಭಕ್ತೈಯ್ಯನ ಕಾವ್ಯ
30. ಬೊಮ್ಮರಸ – ಸೌಂದರ ಪುರಾಣ, ರೇಣುಕ ಚರಿತ್ರೆ
31. ಬಸವಾಂಕ – ಕನ್ನಡದಲ್ಲಿ ಉದ್ಭಟದೇವ ಚರಿತ್ರೆ
32. ಸದಾಶಿವ ಯೋಗಿ – ಕನ್ನಡದಲ್ಲಿ ರಾಮನಾಥ ವಿಲಾಸ
33. ದೇವಕವಿ – ಸೊಬಗಿನ ಸೋನೆ
34. ಗುಬ್ಬಿ ಮಲ್ಲಣಾರ್ಯ – ಭಾವಚಿಂತಾರತ್ನ, ವೀರಶೈವಾಮೃತ ಪುರಾಣ
35. ಅದೃಶ್ಯಪ್ಪ – ಪ್ರೌಢರಾಯನ ಕಾವ್ಯ
36. ನಿಜಗುಣರು – ಕನ್ನಡದಲ್ಲಿ ವಿವೇಕ ಚಿಂತಾಮಣಿ, ಪರಮಾರ್ಥ ಗೀತೆ, ಕೈವಲ್ಯ ಪದ್ಧತಿ, ಪರಮಾನುಭವ ಬೋಧೆ, ಪುರಾತನ ತ್ರಿವಿಧಿ, ಪರಮಾರ್ಥ ಪ್ರಕಾಶಿಕೆ, ಅನುಭವಸಾರ, ತರ್ಕ ಚಿಂತಾಮಣಿ.
37. ಪಂಚವಣ್ಣಿಗೆಯ ಚಿಕ್ಕನಂಜೇಶ್ವರ – ರಾಘವಾಂಕನ ಕಾವ್ಯ
38. ಹಂಪೆ ವಿರೂಪಾಕ್ಷ ಪಂಡಿತ – ಚನ್ನಬಸವ ಪುರಾಣ
39. ಚನ್ನಬಸವ ಸ್ವಾಮಿಗಳು ಮಾಡಿದ್ದು – ಮುತ್ತಿನ ಕಂತೆ ಚರಪತಿ ವಚನ
40. ಎಳಂದೂರು ಷಡಕ್ಷರಿದೇವರು – ಕನ್ನಡದಲ್ಲಿ ರಾಜಶೇಖರ ವಿಳಾಸ, ಶಂಬರ ಶಂಕರ ವಿಳಾಸ, ವೃಷಭೇಂದ್ರ ವಿಜಯ. ಸಂಸ್ಕೃತದಲ್ಲಿ – ಭಕ್ತಾಧಿಕ್ಯ, ಶಿವಾಧಿಕ್ಯ, ಕವಿಕರ್ಣರಸಾಯನ
41. ನೀಲಕಂಠಾರ್ಯ ದೇವರು – ಪರವಾದಿ ಗಜಾಂಕುಶ ತಾರಾವಳಿ
42. ಗುರುಬಸವ ಕವಿ – ಷಟ್ಕಾವ್ಯ ಮತ್ತು ಮನೋವಿಜಯ
43. ಶಂಕರ ದೇವರು – ಗುರುಶಂಕರೇಶ್ವರ ಶತಕ
44. ಬಸವಲಿಂಗ ಕವಿ – ಕೊಟ್ಟೂರು ಬಸವೇಶ ಪುರಾಣ, ಶಿವಾಧಿಕ್ಯ ಪುರಾಣ
45. ಮೌನಪ್ಪ ಶಾಸ್ತ್ರಿ – ವೀರಶೈವಾಚಾರಕೌಸ್ತುಭ

46. ಸಿದ್ಧಕವಿ – ಸಿದ್ಧನೀತಿ
47. ನಿರ್ವಾಣಮಂತ್ರಿ – ಕ್ರಿಯಾಸಾರ ವ್ಯಾಖ್ಯಾನ
48. ಷಡಕ್ಷರ ಮಂತ್ರಿ – ವೀರಶೈವ ಧರ್ಮಶಿರೋಮಣಿ
49. ಬಸವಪ್ಪ ನಾಯಕರು – ಪಂಚಶ್ಲೋಕ ವ್ಯಾಖ್ಯಾನ
50. ಸೋಸಲೆ ರೇವಣಾರಾಧ್ಯ – ಚೋಳ ರೇಣುಕ ಸಂವಾದ ರೂಪ, ಶಿವಾಧಿಕ್ಯ ಶಿಖಾಮಣಿ.
51. ಸರ್ಪಭೂಷಣ ಸ್ವಾಮಿಗಳು – ಕೈವಲ್ಯ ಕಲ್ಪವಲ್ಲರಿ
52. ಆಸ್ಥಾನ ಕವಿ ಬಸವಪ್ಪ ಶಾಸ್ತ್ರಿಗಳು – ಸಾವಿತ್ರಿ ಚರಿತ್ರೆ, ಶೂರಸೇನ ಚರಿತ್ರೆ, ಭರ್ತೃಹರಿ ಸುಭಾಷಿತ, ಶಾಕುಂತಳ ನಾಟಕ, ಚಂಡಕೌಶಿಕ ನಾಟಕ, ರತ್ನಾವಳೀ ನಾಟಕ, ದಮಯಂತಿ ಸ್ವಯಂವರ, ಅಪೂರ್ಣ ರೇಣುಕ ವಿಜಯ, ಸಂಸ್ಕೃತದಲ್ಲಿ – ತ್ರಿಷಷ್ಠಿ ಗಣನುತಿ
53. ವೈ. ವೀರಸಂಗಪ್ಪನವರು – ಕರೆಸ್ಪಾಂಡೆನ್ಸ್ ಎಂಬ ಪತ್ರವ್ಯವಹಾರ ವೀರಶೈವ ಶಿವಪೂಜಾ ವಿಧಿ, ವೀರಶೈವ ದೀಕ್ಷಾವಿಧಿ, ವೀರಶೈವ ವಿವಾಹ ವಿಧಿ ಮೊದಲಾದ ಪ್ರಾಚೀನ ಗ್ರಂಥಗಳನ್ನು ಅಚ್ಚು ಹಾಕಿಸಿದರು.
54. ಪಿ.ಆರ್. ಕರಿಬಸವ ಶಾಸ್ತ್ರಿಗಳು ವೀರಶೈವ ಮತಪ್ರಕಾಶಿಕೆಯೆಂಬ ಪತ್ರ ವ್ಯವಹಾರ, ಸಂಸ್ಕೃತ ಬಸವಪುರಾಣಕ್ಕೆ ಟೀಕು, ಸಂಸ್ಕೃತದಲ್ಲಿ ವೀರಶೈವೋತ್ಕರ್ಷ ಸಂಗ್ರಹ, ವೀರಶೈವ ಕಂಠಾಭರಣ.
55. ಎನ್.ಆರ್. ಕರಿಬಸವ ಶಾಸ್ತ್ರಿಗಳು ವೃಷಭೇಂದ್ರ ವಿಜಯಕ್ಕೆ ಟೀಕು, ದೀಕ್ಷಾವಿಧಿಗೆ ಟೀಕು, ಬಸವರಾಜ ವಿಜಯ, ಚನ್ನಬಸವೇಶ ವಿಜಯ.

ಕಾಲ, ಕರ್ತೃಗಳು ಗೊತ್ತಿಲ್ಲದ ಗ್ರಂಥಗಳು ಎಂದು ಒಂದು ಪಟ್ಟಿಯನ್ನು ನೀಡಿದ್ದಾರೆ. ಶಿವಾದ್ವೈತ ಮಂಜರಿ, ರೇಣುಕಚರಿತ್ರೆ, ಅನಾದಿ ವೀರಶೈವ ಸಂಗ್ರಹ, ಶಿವಪ್ರಸಂಗ ರತ್ನಾಕರ, ಶಿವತತ್ವ ರತ್ನಾಕರ, ಸರ್ವೇಶ್ವರ ಭಾಷ್ಯ, ವೀರ ಮಾಹೇಶ್ವರಾಧಿಕ್ಯ, ವೀರಶೈವ ರತ್ನಾಕರ, ವೀರಶೈವ ಪ್ರಕಾಶಿಕೆ, ಶಿವಜ್ಞಾನಶೇಖರ, ಶಿವತತ್ತ್ವ ಚಿಂತಾಮಣಿ, ಪಂಡಿತಾರಾಧ್ಯ ಚರಿತ್ರೆ, ಮರುಳಸಿದ್ಧ ಚರಿತ್ರೆ, ರೇವಣಸಿದ್ಧ ಚರಿತ್ರೆ, ವೀರಶೈವ ಸಂಜೀವಿನಿ, ನಿರಾಭಾರ ಸಂಗ್ರಹ, ಶಾಂಭವಸಾರೋದ್ಧಾರ, ಶಿವತತ್ವ ತರ್ಕಚಂದ್ರಿಕೆ, ಶಿವಾದ್ವೈತ ಪ್ರದೀಪಿಕೆ, ಸಿದ್ಧಾಂತ ಶೇಖರ, ಕನ್ನಡದಲ್ಲಿ ಚತುರಾಚಾರ್ಯ ಪುರಾಣ, ಮಲ್ಲಿಕಾರ್ಜುನ ಶತಕ, ರೇವಣಸಿದ್ಧ ಪುರಾಣ, ನಿಜಲಿಂಗಶತಕ.

ಮಾಗಡಿ ಎಸ್. ವೀರಪ್ಪ ಶಾಸ್ತ್ರಿಗಳು 1914 ರಲ್ಲಿ 'ಅಷ್ಟಾವರಣ ವಿಚಾರದರ್ಪಣ' ಎಂಬ 3+128 ಪುಟಗಳ ಪ್ರಶ್ನೋತ್ತರ ರೂಪದ ಪುಸ್ತಕ ಪ್ರಕಟಿಸಿದ್ದಾರೆ. ಈ ಪುಸ್ತಕ ರಚನೆಗೆ ಮುದ್ರಿತ ಮತ್ತು ಮೂಲಹಸ್ತಪ್ರತಿಗಳನ್ನೇ ಪರಿಶೀಲಿಸಿ ಗ್ರಂಥರಚನೆ ಮಾಡಿದ್ದಾರೆ. ಸುದೈವ ಆ ಎಲ್ಲಾ ಕೃತಿಗಳ ಹೆಸರನ್ನು ತಿಳಿಸಿದ್ದಾರೆ. ಕ್ರಮವಾಗಿ ಸಿದ್ಧಾಂತ ಶಿಖಾಮಣಿ, ಕಾಮಿಕಾಗಮ, ಸ್ವಾಯಂಭುವಾಗಮ, ಕ್ರಿಯಾಸಾರ, ಸುಪ್ರಭೇದಾಗಮ, ಅನುಭವಸೂತ್ರ,

ವೀರಶೈವಧರ್ಮ ಶಿರೋಮಣಿ, ಸ್ಕಾಂದ ಪುರಾಣ, ವೀರಾಗಮ ಶಿವರಹಸ್ಯ, ಸೂಕ್ತಾವಳಿ, ವಾತುಲೋತ್ತರ, ಕಾಳಿಕಾಖಂಡ, ದೀಕ್ಷಾವಿಧಿ, ಶಂಕರಸಂಹಿತೆ, ಲಿಂಗಧಾರಣ ಚಂದ್ರಿಕೆ, ಲೈಂಗ್ಯ ಪುರಾಣ, ಆದಿತ್ಯ ಪುರಾಣ, ಪದ್ಮಪುರಾಣ, ಭಾರತ ದ್ರೋಣಪರ್ವ, ಕೂರ್ಮ ಪುರಾಣ, ವ್ಯಾಸಗೀತೆ, ಶಿವಧರ್ಮೋತ್ತರ, ಜಾಬಾಲೋಪನಿಷತ್, ಬ್ರಹ್ಮೋಪನಿಷತ್, ಜಾಬಾಲಶಾಖೆ, ಋಗ್ವೇದ, ತೈತ್ತಿರೀಯೋಪನಿಷತ್, ಶೈವ ಪುರಾಣ, ಯಜ್ಞವೈಭವ ಖಂಡ, ಮುಕ್ತಿಖಂಡ, ಬ್ರಹ್ಮೋತ್ತರ ಖಂಡ, ಶಿವಗೀತೆ, ಬೃಹತ್ಕಾಲೋತ್ತರ, ಬೋಧಾರ್ಯಸ್ಮೃತಿ.

ಮೈಸೂರು ನಗರದ ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ಮೈಸೂರು ನಗರದ ಮಲ್ಲಿಕಾರ್ಜುನಸ್ವಾಮಿ ಮಠದ ಸ್ವಾಮಿಗಳಾಗಿದ್ದರು. ಮೈಸೂರು ಅರಮನೆ ಗಜಶಾಲಾ (ಆನೆ ಕರೋಟಿ) ಬೀದಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ಮಠದ ಸಂಸ್ಥಾಪಕರಾಗಿದ್ದ ಶ್ರೀಗಳ ಪೂರ್ವಾಶ್ರಮದ ಹುಟ್ಟೂರು ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ತಾಳೀಕೋಟೆ ಹತ್ತಿರದ ಮೈಲೇಶ್ವರವೆಂಬ ಗ್ರಾಮ. ಶ್ರೀ ಶಿವಯೋಗಮಂದಿರದ ಸಂಸ್ಥಾಪಕರಾದ ಲಿಂ. ಹಾನಗಲ್ಲ ಶ್ರೀ ಕುಮಾರ ಮಹಾಂತ ಸ್ವಾಮಿಗಳವರಲ್ಲಿ ಅನೇಕ ವರ್ಷ ಶಿಲಾಮಡಿಯ ಸೇವೆಯಲ್ಲಿದ್ದು ಶ್ರೀಗಳವರಿಂದ ಷಟ್‌ಸ್ಥಲಾಚರಣೆಯನ್ನು ತಿಳಿದುದಲ್ಲದೆ ಹುಬ್ಬಳ್ಳಿಯ ವಿದ್ವಾಂಸರಾದ ಶ್ರೀ ಸಿದ್ಧರಾಮಪ್ಪ ಪಾವಟೆ, ಆಸ್ಥಾನ ವಿದ್ವಾನ್ ಪಂ. ಉಮಚಗಿ ಶಂಕರ ಶಾಸ್ತ್ರಿಗಳಲ್ಲಿಯೂ ಇದ್ದುಕೊಂಡು ನಿಜಗುಣ ಶಿವಯೋಗಿಗಳವರ ಶಾಸ್ತ್ರಗ್ರಂಥಗಳನ್ನು ವಚನಸಾಹಿತ್ಯ ಮತ್ತು ವೀರಶೈವ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿದವರು. ಇವರು ಅಧ್ಯಯನ ಮಾಡಿದ ವಚನ ಸಂಕಲನಗಳಲ್ಲಿ ಕೆಲವು ನಮಗೆ ಈಗ ನೋಡಲು ಲಭ್ಯವಿಲ್ಲ. ಅವುಗಳಲ್ಲಿ ಮುಖ್ಯವಾಗಿ 1. ಅಷ್ಟಾವರಣದ ಸಂಬಂಧ ವಚನ 2. ಚಿದ್ವಿಪಿಂಡ ವಚನ 3. ಬ್ರಹ್ಮಾದ್ವೈತ ಕಂಠಾಭರಣ 4. ಭಕ್ತಿಶಿಖಾಮಣಿ ವಚನ 5. ಭಿನ್ನಕ್ರಿಯಾಚಾರ ವಚನ 6. ವೀರಶೈವಾಧಿಕ್ಯ ಶಿಖಾಮಣಿ ವಚನ 7. ಶಿವಲಿಂಗ ಮಹಾತ್ಮೆ ವಚನ 8. ಷಟ್ಸ್ಥಲಾಡಂಬರ.

ಭಾರತ ದೇಶದ ಧಾರ್ಮಿಕ ಚರಿತ್ರೆಯಲ್ಲಿ ವೀರಶೈವ ಧರ್ಮ ಅಥವಾ ಲಿಂಗವಂತ ಧರ್ಮ ಅಥವಾ ಶಿವಾಚಾರ ಧರ್ಮಕ್ಕೆ ವಿಶೇಷವಾದ ಸ್ಥಾನ. ಇದರ ಮೂಲದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ, ನಡೆಯುತ್ತಾ ಇದೆ. ಯಾವ ಆಧುನಿಕ ಪರಿಕರವಿಲ್ಲದೆ ನಮ್ಮ ಪೂರ್ವಿಕರು ತಮ್ಮ ಇತಿಮಿತಿಗಳಲ್ಲಿ ವ್ಯವಸ್ಥಿತವಾದ ಅಧ್ಯಯನ ಮಾಡಿಕೊಂಡು ಬಂದಿದ್ದರು. ವೀರಶೈವ ಸ್ವಾಮಿಗಳು ಗುರುಪೀಠದವರಾಗಲಿ ಅಥವಾ ವಿರಕ್ತರಾಗಲಿ ಅಧ್ಯಯನ, ಅಧ್ಯಾಪನವನ್ನು ತಮ್ಮ ಪ್ರತಿನಿತ್ಯದ ಕಾಯಕವನ್ನಾಗಿ ಮಾಡಿಕೊಂಡಿದ್ದರು. ಈಗ ಲಭ್ಯವಿರುವ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಗ್ರಂಥಗಳನ್ನು ಒಂದು ಕಡೆ ಸಂಗ್ರಹಿಸಿ ವ್ಯವಸ್ಥಿತವಾದ ಅಧ್ಯಯನ ನಡೆಯಬೇಕು. ವೀರಶೈವ ಸಂಸ್ಕೃತ ಸಾಹಿತ್ಯ ಮುದ್ರಣವನ್ನು ಕಂಡಿರುವುದು ಶೇ 10ರಷ್ಟು ಮಾತ್ರ. ವೀರಶೈವ ಸಾಹಿತ್ಯ ಯಾವ ಭಾಷೆಯಲ್ಲಿಯೇ ಇರಲಿ ಅದು ಮುದ್ರಣವನ್ನು ಕಂಡು ಅಧ್ಯಯನಕ್ಕೆ ಒಳಪಡಬೇಕು.

ಈ ಪ್ರಬಂಧದಲ್ಲಿ ನಾನು ಒಂದು ಪಕ್ಷಿನೋಟವನ್ನು ಮಾತ್ರ ಕೊಟ್ಟಿದ್ದೇನೆ. ಗಮನಿಸಿರುವುದು ಬಹಳ ಕಡಿಮೆ. ಉಳಿದಿರುವುದು ಬಹಳ. ಭಾರತದ ಸಂಸ್ಕೃತಿಯ ಕುರುಹು ನಮ್ಮ ಧರ್ಮದಲ್ಲಿ ಉಳಿದುಕೊಂಡು ಬಂದಿದೆ. 'ಅರ್ಚನೆ', 'ಅರ್ಪಣೆ', 'ದಾಸೋಹ', 'ಆಶ್ರಿತ ಜನಸಂರಕ್ಷಣೆ', 'ಅಭಯ ಪ್ರದಾನ' ಇವು ನಮ್ಮ ಧರ್ಮದ ಪ್ರಮುಖ ತತ್ತ್ವಗಳು.

**ಆಕರ ಗ್ರಂಥಗಳು :**


1. ಹರದತ್ತ ಶಿವಾಚಾರ್ಯನ ಪಂಚಶ್ಲೋಕಿ : ಒಂದು ಪರಿಚಯ (484–487) ಡಾ. ವನಜಾ ಕುಲಕರ್ಣಿ 'ನಿರಂಜನ ಶ್ರೀ ಗುರುಮಲ್ಲೇಶ್ವರ ಸಂಸ್ಮರಣ ಶತಮಾನೋತ್ಸವ ಸಮಿತಿ, ದೇವನೂರು ಮಠ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಪ್ರಧಾನ ಸಂಪಾದಕರು, ಡಾ. ಬಿ.ನಂ. ಚಂದ್ರಯ್ಯ, 2000.
2. ಹರಿಹರ ತಾರತಮ್ಯಂ, (36–44), ಶಿವಸ್ತೋತ್ರ ಸಾಹಿತ್ಯ ಸಂಚಯ, ಸಂಪಾದಕರು, ಪ್ರೊ. ಸಿ. ಮಹಾದೇವಪ್ಪ, 2002, ಬೆಂಗಳೂರು ಸಂಶೋಧನ ಕೋಟಿ, 197, 5ನೇ ಮುಖ್ಯ ರಸ್ತೆ, ವೈಯಾಲಿಕಾವಲ್, ಬೆಂಗಳೂರು 560 003.
3. ನಾಗವರ್ಮನ ಕನ್ನಡ ಛಂದಸ್ಸು, ರೆ. ಎಫ್. ಕೆಟ್ಟಲ್, 1875, ಮರುಮುದ್ರಣ 1988, Asian Educational Services, New Delhi, Madras.
4. ನಾಗವರ್ಮ ಕೃತ 'ಕರ್ಣಾಟಕ ಭಾಷಾಭೂಷಣ', ಬಿ.ಎಲ್. ರೈಸ್. ಮೊದಲ ಮುದ್ರಣ 1884, ಮರುಮುದ್ರಣ, Asian Education Series, New Delhi, 1985.
5. ಹಿರಿಯ ವಿದ್ವಾಂಸ ಡಾ. ಎಂ. ಚಿದಾನಂದಮೂರ್ತಿಯವರು ನನ್ನ ಸ್ವಂತ ಅಧ್ಯಯನಕ್ಕೆ ನೀಡಿದ ಲಿಖಿತ ದಾಖಲೆ ಪತ್ರ.
6. ವೀರಶೈವ ಮಹಾಪುರುಷರು ಭಾಗ–1 ಲೇ. ಆಸ್ಥಾನ ವಿದ್ವಾನ್ ಪಂಡಿತರತ್ನಂ ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿ, ಶರಣ ಸಾಹಿತ್ಯ ಗ್ರಂಥಮಾಲಾ, 1953.
7. 'ಷಟ್‌ಸ್ಥಲ ವಿದ್ಯಾ', ಲೇ. ಎನ್.ಆರ್. ಕರಿಬಸವ ಶಾಸ್ತ್ರಿಗಳಿಳು, ಪ್ರ. ವೈ. ವಿರೂಪಾಕ್ಷಪ್ಪನವರು ಪ್ರಕಟಿಸಲ್ಪಟ್ಟಿತು. ದ್ವಿತೀಯ ಮುದ್ರಣ, 1923, ಮೈಸೂರು.
8. 'ವೀರಶೈವಮತ ವಿಷಯಸಾರ', 1906, ಲೇ ಬಿ.ಜೆ. ಬಸವಲಿಂಗಪ್ಪನವರು PRINTED AT THE STAR PRESS ಆದ್ಯ ಆಧುನಿಕ ವಚನಗಾರ ಜೀರಗೆ ಬಸವಲಿಂಗಪ್ಪನವರ ಕೃತಿಗಳು, ಸಂಪಾದಕರು, ಡಾ. ಟಿ.ಜಿ. ಪ್ರಭಾಶಂಕರ ಪ್ರೇಮಿ, ಡಾ. ಬಿ. ನಂಜುಂಡಸ್ವಾಮಿ, ಶರಣ ಪ್ರಕಾಶನ, ಪ್ರಭುಪ್ರಿಯ, 391, 6ನೇ ಮುಖ್ಯ ರಸ್ತೆ, ಮೂರನೇ ಹಂತ, ಬಸವೇಶ್ವರ ನಗರ, ಬೆಂಗಳೂರು 79
9. ಅಷ್ಟಾವರಣ ವಿಚಾರದರ್ಪಣ, 1914, ಮಾಗಡಿ, ಎಸ್. ವೀರಪ್ಪಶಾಸ್ತ್ರಿಗಳು, ಟವ್ರು ಮುದ್ರಾಕ್ಷರಶಾಲೆ, ಬೆಂಗಳೂರು
10. ಅನಾದಿ ವೀರಶೈವ ಸಮಾಜ ಅಥವಾ ಹಳಬ ಲಿಂಗವಂತ, 1950, ಲೇ. ಶ್ರೀ ಮಲ್ಲಿಕಾರ್ಜುನ ದೇಶೀಕೇಂದ್ರ ಸ್ವಾಮಿ, ಮಲ್ಲಿಕಾರ್ಜುನಸ್ವಾಮಿ ಮಠ, ಮೈಸೂರು.


□

# ಶರಣ ಸಂಸ್ಕೃತಿ – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

ಶರಣ ಸಂಸ್ಕೃತಿ ಅನೇಕ ಮೌಲ್ಯಗಳ ಸಂಕೀರ್ಣತೆಯಿಂದ ಕೂಡಿದೆ. ಅದು ಬದುಕನ್ನು ರೂಪಿಸುವಂತಹ ಉತ್ತಮ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದೆ ಮಾತ್ರವಲ್ಲ, ತನಗೆ ತಾನೇ ಮಹತ್ವದ ಮೌಲ್ಯವಾಗಿದೆ. ಒಂಬೈನೂರು ವರ್ಷಗಳು ಉರುಳಿದರೂ ಸಮಷ್ಟಿಯ ಹಿತವನ್ನು ಬಯಸುವ ಈ ಮೌಲ್ಯಗಳು ಇಂದಿಗೂ ಸಂಗತವಾಗಿದೆ ಹಾಗೂ ಪ್ರಯೋಜನಕಾರಿಯಾಗಿದೆ.

ಹನ್ನೆರಡನೇ ಶತಮಾನದಲ್ಲಿ ಶರಣರು ನಡೆಸಿದ ಸಮಾಜೋದ್ಧಾರ್ಮಿಕ ಚಳುವಳಿ ಒಮ್ಮೆಲೆ ಸ್ಫೋಟಗೊಳ್ಳಲಿಲ್ಲ. ಈ ಚಳುವಳಿಗೆ ಪೂರಕವಾಗುವಂತಹ ಬೀಜಗಳು ಕನಿಷ್ಠ ಪಕ್ಷ ಒಂದು ಶತಮಾನದಷ್ಟು ಹಿಂದೆಯೇ ಬಿತ್ತಲ್ಪಟ್ಟಿದ್ದವು. ಧಾರ್ಮಿಕ ಮತ್ತು ಮತೀಯ ಆಚರಣೆಗಳ ಹೆಸರಿನಲ್ಲಿ ಅಮಾನವೀಯ ಕೃತ್ಯಗಳು ನಡೆಯುತ್ತಿದ್ದುದರ ವಿರುದ್ಧ ಮೃದುಹೃದಯಿಗಳೂ; ವಿಶಾಲಮನಸ್ಕರೂ ಆದ ಅನೇಕರು ಬಂಡಾಯದ ಧ್ವನಿಯನ್ನು ಆಗಲೇ ಎತ್ತಿದ್ದರು. ಈ ಧ್ವನಿ ಅಥವಾ ಬಂಡಾಯ ಒಳಗೊಳಗೇ ಕುದಿಯುತ್ತಿದ್ದು ಅಂತರ್ಗಾಮಿನಿಯಾಗಿ ಪ್ರವಹಿಸುತ್ತಿತ್ತು. ಸೂಕ್ತ ವಾತಾವರಣ ಸಿಕ್ಕಾಗ ಅದು ಸ್ಫೋಟಗೊಂಡು ವೈಚಾರಿಕ ರೂಪವನ್ನು ತಳೆದು ಪ್ರಚಾರಗೊಂಡಿತು. ಚಳುವಳಿಗೆ ಒಂದು ತಾತ್ವಿಕ ಭೂಮಿಕೆ ದೊರೆತು ಅದು ತೀವ್ರ ಸ್ವರೂಪವನ್ನು ಪಡೆದುಕೊಂಡಿತು.

ಶರಣ ಸಂಸ್ಕೃತಿಯ ಬಹು ಮುಖ್ಯವಾದ ಆದರ್ಶ ಮೌಲ್ಯವೆಂದರೆ ಸಮಾನತೆ. ಮೂಲಭೂತವಾಗಿ ಸಮಾಜದಲ್ಲಿನ ಎಲ್ಲಾ ತರಹದ ಜನರನ್ನೂ ಸಮಾನರೆಂದು ಪರಿಗಣಿಸುವುದು ಮತ್ತು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದಾಗಿದೆ. ಶರಣ ಚಳುವಳಿಯ ಸಂದರ್ಭದಲ್ಲಿ ಇದ್ದ ವೈದಿಕ, ಜೈನ, ಬೌದ್ಧ ಮುಂತಾದ ಮತಗಳಲ್ಲಿ ವ್ಯಾಪಕವಾಗಿದ್ದ ಅಸಮಾನತೆಯ ವಿರುದ್ಧ ಧ್ವನಿ ಎತ್ತಿದ ಶರಣರು ಎಲ್ಲರಿಗೂ ಸಮಾನ ಅವಕಾಶದ ಭೂಮಿಕೆಯನ್ನು ಒದಗಿಸಿಕೊಟ್ಟಿದ್ದು ಒಂದು ಚಾರಿತ್ರಿಕ ಘಟನೆ.

ಶರಣ ಸಂಸ್ಕೃತಿ ಅನೇಕ ದೃಷ್ಟಿಯಿಂದ ಅದ್ವಿತೀಯವೆನಿಸಿದೆ. ಇದು ಸಮಷ್ಟಿ ಸಂಸ್ಕೃತಿ. ಸಾಮಾನ್ಯರು ವರ್ಗ, ವರ್ಣ ಮರೆತು ಪರಸ್ಪರ ಗೌರವಾದರಗಳಿಂದ ಚರ್ಚಿಸಿ ರೂಪಿಸಿದ ಸಂಸ್ಕೃತಿ; ಧಾರ್ಮಿಕ ವಿಷಯವನ್ನೊಳಗೊಂಡ ದೃಷ್ಟಿಯ ವ್ಯಕ್ತಿತ್ವವಿಕಸನಕ್ಕೆ ಅವಕಾಶ ನೀಡಿ ಇಡೀ ಸಮಾಜದ ಹಿತಕ್ಕೆ ಅನುವು ಮಾಡಿದ

ಸಂಸ್ಕೃತಿ. ಆಡುನುಡಿಯಲ್ಲಿ ಗೂಢಕ್ಕಿಂತ ಗೂಢವಾದ ವಿಷಯಗಳನ್ನು ಅನುಭವ ಆಲೋಚನೆಗಳನ್ನು ಅಭಿವ್ಯಕ್ತಿಗೊಳಿಸಿದ ಸಂಸ್ಕೃತಿ. ಅಲ್ಪದಲ್ಲಿ ಶಿಲ್ಪವನ್ನು ಕೆತ್ತಿದ ಸಂಸ್ಕೃತಿ. ಹನಿಯಲ್ಲಿ ಕಡಲನ್ನು ಹಿಡಿದಿಟ್ಟ ಸಂಸ್ಕೃತಿ. ಮಾತನ್ನೇ ಬೆಳಕಾಗಿಸಿ ಜ್ಯೋತಿರ್ಲಿಂಗ ವಾಗಿಸಿದುದು ಶರಣ ಸಂಸ್ಕೃತಿ.

ಶರಣರು ತಮ್ಮ ಸಂಸ್ಕೃತಿಯ ಮೂಲ ಆಶಯವಾದ ಸಮಾನತೆಯ ಪರಿಕಲ್ಪನೆ ಯನ್ನು ಅನುಷ್ಠಾನಕ್ಕೆ ತರುವಲ್ಲಿ ಅನುಸರಿಸಿದ ಮಾರ್ಗ ವಿಶಿಷ್ಟವಾದುದು. ಸಮಾನತೆ ಎಂಬುದು ಸಾಮಾಜಿಕ ಸಂದರ್ಭದಲ್ಲಿನ ಸ್ಥಿತಿಯಾದ್ದರಿಂದ ಸಮಾಜದಲ್ಲಿದ್ದ ವ್ಯಕ್ತಿಗಳ ನಡುವಣ ಸಂಬಂಧವನ್ನು ಅವರು ಖಚಿತಪಡಿಸಿಕೊಂಡರು. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ವ್ಯಕ್ತಿಯು ಪಡೆಯುವ ಸಮಾನಾವಕಾಶವು ಸಾಮಾಜಿಕ ಸಂದರ್ಭದಲ್ಲಿಯೇ ವ್ಯಕ್ತವಾಗಬೇಕಾಗಿರುವುದರಿಂದ ವ್ಯಕ್ತಿ ಸಮಾಜದ ಒಂದು ಭಾಗವಾಗಿ ನಿರ್ವಹಿಸುವ ಪಾತ್ರ ಹಾಗೂ ಸಮಾಜವು ವ್ಯಕ್ತಿಗೆ ನೀಡಬೇಕಾದ ಸುಭದ್ರತೆ ಇವುಗಳ ಬಗ್ಗೆ ಶರಣರಿಗೆ ಖಚಿತವಾದ ಕಲ್ಪನೆ ಇದ್ದಂತೆ ತೋರುತ್ತದೆ.[1]

ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದ್ದ ದೇವಾಲಯಗಳ ನಿರ್ಮಾಣ, ವಿಗ್ರಹ ಪ್ರತಿಷ್ಠಾಪನೆ, ಜೀರ್ಣೋದ್ಧಾರ ಕಾರ್ಯ ಮುಂತಾದವುಗಳ ವಿರುದ್ಧ ಶರಣರು ಬಂಡಾಯವೆದ್ದರು. 'ಅಂಗದ ಮೇಲೆ ಲಿಂಗವಿದ್ದು ಸ್ಥಾವರಕ್ಕೆ ಶರಣೆನ್ನಲಾಗದು' (ಚನ್ನಬಸವಣ್ಣ), 'ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ', 'ಹತ್ತು ಮತ್ತರ ಭೂಮಿ ಬತ್ತದ ಹಯನು ನಂದಾದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು, ಅವರ ನುಡಿಯ ಕೇಳಲಾಗದು ಮುಂತಾದ ಮಾತುಗಳ ಮೂಲಕ ಶರಣರು ತಮ್ಮ ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಶರಣರು ದೇವಾಲಯದ ನಿರ್ಮಾಣಕ್ಕೆ ಪ್ರತಿರೋಧವನ್ನು ವ್ಯಕ್ತಪಡಿಸಿದ್ದುದಕ್ಕೆ, ಆಗಿನ ಕಾಲದಲ್ಲಿ ದೇವಾಲಯಗಳು ಅನೈತಿಕತೆಯ ಕೇಂದ್ರಗಳಾಗಿ ಪರಿವರ್ತಿತವಾಗಿದ್ದುದು ಕಾರಣವಾಗಿರಬಹುದು ಅಥವಾ ಹಿಂದಿನ ಪದ್ಧತಿಗಳನ್ನು ತೀವ್ರವಾಗಿ ಪ್ರತಿಕ್ರಿಯಿಸುವ ಪ್ರಕ್ರಿಯೆ ಇದಾಗಿರಬಹುದು. ಗುಡಿಗಳಲ್ಲಿ ವಿಗ್ರಹಾರಾಧನೆ ಮಾಡುವ ಬದಲು ಬಸವಪೂರ್ವ ಯುಗದಿಂದಲೂ ಪ್ರಚಲಿತವಾಗಿದ್ದ ದೇಹದ ಮೇಲೆ ಇಷ್ಟಲಿಂಗವನ್ನು ಧರಿಸುವ ಪದ್ಧತಿಯನ್ನು ಶರಣರು ಅಳವಡಿಸಿಕೊಳ್ಳುವುದರ ಜೊತೆಗೆ ಸಮರ್ಥಿಸಿದರು. ಗುರುವಿನಿಂದ ಪಡೆದ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಬೇಕೆಂಬ ನಿಲುವನ್ನು ಅಕ್ಷರಶಃ ಪಾಲಿಸುವ ಮೂಲಕ ಅನುಷ್ಠಾನಕ್ಕೆ ತಂದರು. ಇದರಿಂದ ದೇವಾಲಯಗಳಿಗೆ ಹೋಗಿ ಪೂಜೆ ಮಾಡುವ ಪದ್ಧತಿಯನ್ನು ನಿರಾಕರಿಸಿದರು.

ಶರಣ ಸಂಸ್ಕೃತಿಯಲ್ಲಿ ಇಷ್ಟಲಿಂಗಕ್ಕೆ ವಿಶೇಷವಾದ ಮಹತ್ವವಿದೆ. ವಿಶ್ವದ ಮೇಲೆ ಜೀವಿಸುವ ಪ್ರತಿಯೊಂದು ಜೀವಿಗಳಲ್ಲಿಯೂ ಶಿವನಿದ್ದಾನೆ ಎಂಬ ಅಚಲವಾದ ನಂಬಿಕೆಯಿದ್ದ ಅವರು ಎಲ್ಲದರಲ್ಲಿಯೂ ಶಿವನಿಷ್ಠೆಯನ್ನು ತೋರಿದರು. ಜೇಡರ

ದಾಸಿಮಯ್ಯ ಶಿವನ ಸ್ವರೂಪವನ್ನು ಕುರಿತು ಹೇಳಿರುವ ಈ ವಚನ ಶಿವನ ಇರುವಿಕೆಯನ್ನು ಹೀಗೆ ಸ್ಪಷ್ಟಪಡಿಸುತ್ತದೆ.

ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ
ಕಾಲು ಮೀಸಲು ಶಿವನ, ನಾಲಿಗೆ ಮೀಸಲು ಶಿವನ
ಕಿವಿ ಮೀಸಲು ಶಿವನ, ನಾಸಿಕ ಮೀಸಲು ಶಿವನ
ತನುಮನವೆಲ್ಲಾ ಮೀಸಲು ಶಿವನ
ಈ ಮೀಸಲು ಬೇಸರವಾಗದಂತಿರ್ದಡೆ
ಅವನೇ ಜಗದೀಶ ಕಾಣಾ ರಾಮನಾಥ

ಎಂದು ತನ್ನ ಸರ್ವೇಂದ್ರಿಯಗಳನ್ನೂ ಶಿವನಿಗಾಗಿ ಮೀಸಲಿಟ್ಟು, ಜಗದೀಶನೇ ತಾನಾಗಿ ನಿಲ್ಲುವ ಉತ್ಕಟೇಚ್ಛೆಯನ್ನು ತೋರುತ್ತಾನೆ. ಇಲ್ಲಿ ತುಂಬಿದ ಉತ್ಸಾಹ, ಭಾವೋಲ್ಲಾಸ, ರೂಪಕ ನಿರ್ಮಾಣಶಕ್ತಿ ಅಸದೃಶವಾದುದು.

ನಮ್ಮ ಜೀವನದ ಆಗುಹೋಗುಗಳಿಗೆಲ್ಲ ಶಿವನೇ ಕಾರಣ ಎನ್ನುವ ದಾಸಿಮಯ್ಯ ಮತ್ತೊಂದು ವಚನದಲ್ಲಿ ಹೀಗೆ ಸ್ಪಷ್ಟಪಡಿಸಿದ್ದಾನೆ.

ನೀನೀಶನೀಯದೆ ಮಾನೀಶನೀವನೆ,
ನೀನೀಸುವ ಕಾರಣ ಮಾನೀಶನೀವನು
ಆ ಮಾನೀಶನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೇ ಶರಣೆಂಬೆನಯ್ಯ ರಾಮನಾಥ

ಒಬ್ಬ ಸಾಮಾನ್ಯ ಮನುಷ್ಯನಿಂದ ಏನನ್ನು ತಾನೆ ಕೊಡಲು ಸಾಧ್ಯ? ಶಿವ ಕೊಟ್ಟುದನ್ನೇ ಕೊಟ್ಟು, ತಾನೇ ಕೊಟ್ಟುದೆಂದು ಆತ ಜಂಬಪಟ್ಟುಕೊಳ್ಳುತ್ತಾನೆ. ಒಂದು ವೇಳೆ ಅವನೇ ಕೊಟ್ಟಿದ್ದರೂ ಕೊಡಲು ಪ್ರೇರಣೆ ನೀಡಿದವನು ಶಿವನೇ. ಆದ್ದರಿಂದ ಒಳಗೆ ಅಡಗಿ ಕುಳಿತು ನೀಡಲು ಪ್ರೇರಣೆ ನೀಡಿದ ಶಿವನಿಗೆ ಭಕ್ತಿಯಿಂದ ಮಣಿಯುತ್ತೇನೆ ಎನ್ನುತ್ತಾನೆ ದಾಸಿಮಯ್ಯ.

ಶರಣ ಸಂಸ್ಕೃತಿಯಲ್ಲಿ ಕಾಣುವ ಮತ್ತೊಂದು ಮುಖ್ಯ ವಿಚಾರ ಸಮತಾವಾದ. ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬ ವಿಶಾಲವಾದ ಭಾವನೆ ಆಗಿನ ಕಾಲದಲ್ಲಿ ವಿಶೇಷವಾಗಿ ಕೆಳವರ್ಗದವರನ್ನು ಆಕರ್ಷಿಸಿತು. ಶರಣರ ದೃಷ್ಟಿಯಲ್ಲಿ ಬೀಸುವ ಗಾಳಿ ಒಂದೇ, ಬೆಳಕು ನೀಡುವ ಸೂರ್ಯ ಒಬ್ಬನೇ. ನಾವೆಲ್ಲರೂ ವಾಸಿಸುವ ಭೂಮಿ ಒಂದೇ ಆಗಿರುವಾಗ ಮನುಷ್ಯ ಮನುಷ್ಯರ ನಡುವೆ ಭೇದಭಾವವೇಕೆ ಎಂಬ ಪ್ರಶ್ನೆ ಶರಣರದು. ಶ್ರೀಮಂತ–ಬಡವ, ಸ್ತ್ರೀ–ಪುರುಷ, ಸುಶಿಕ್ಷಿತ–ಅಶಿಕ್ಷಿತ ಎಂಬ ತಾರತಮ್ಯವೇಕೆ? ಮಾನವರೆಲ್ಲ ಒಂದೇ, ಎಲ್ಲರೂ ಸಮಾನರು ಎಂದು ನಂಬಿ ಅದರಂತೆ ನಡೆದವರು, ಬಸವಾದಿ ಶರಣರು. ಬಸವಣ್ಣನವರ ಸಮತಾವಾದ ಶರಣ

ಸಂಸ್ಕೃತಿಯ ತಳಹದಿಯನ್ನು ಭದ್ರಗೊಳಿಸಿತು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ವಿಶಾಲ ಭಾವನೆಯಿಂದ ಶರಣ ಸಂಸ್ಕೃತಿಗೆ ನಾಂದಿ ಹಾಡಿದರು. ಅಂಗದ ಮೇಲೆ ಲಿಂಗ ಧರಿಸಿದವರೆಲ್ಲ ಒಂದೇ ಎಂದು ನುಡಿದರು. ನುಡಿದುದು ಮಾತ್ರವಲ್ಲ, ಅದರಂತೆ ನಡೆದರೂ ಕೂಡ.

ಶರಣ ಸಂಸ್ಕೃತಿ ನಿಂತಿರುವುದೇ ಆಚಾರದ ಅಸ್ತಿವಾರದ ಮೇಲೆ. ಆಚಾರದ ಮೊದಲ ಹೆಜ್ಜೆ ನಡೆನುಡಿಗಳು ಒಂದಾಗಿರುವುದು. ಇದನ್ನೇ ಬಸವಣ್ಣನವರು–

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಮೆಚ್ಚ
ನಮ್ಮ ಕೂಡಲಸಂಗಮದೇವ

ಎಂಬ ವಚನದಲ್ಲಿ ನಿರೂಪಿಸಿರುವುದು. ನಡೆನುಡಿಗಳು ಒಂದಾದ ನೆಲೆಯಿಂದ ವ್ಯಕ್ತಿ ಸಾಮಾಜಿಕವಾಗಿ ನಂಬಿಕೆಗೆ ಅರ್ಹನಾಗುವುದಷ್ಟೇ ಅಲ್ಲದೆ, ತನ್ನ ವ್ಯಕ್ತಿತ್ವದ ಪರಿಶುದ್ಧತೆಯಿಂದಾಗಿ ಸಮಾಜದ ಪರಿಶುದ್ಧತೆಗೂ ಕಾರಣನಾಗುತ್ತಾನೆ.[2]

ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬ ಬಸವಣ್ಣ ಹಾಗೂ ಮಾದಾರ ಚನ್ನಯ್ಯನ ವಚನೋಕ್ತಿಗಳು ಇದನ್ನೇ ಗುರಿಯಾಗಿಟ್ಟುಕೊಂಡಿವೆ. 'ಆಚಾರವಿಲ್ಲದ ಶರಣಂಗೆ ಅಂಗವಿಲ್ಲ' ಎಂಬ ಮಾತನ್ನು ಗಮನಿಸಬೇಕು.

ಶರಣರು ವೈಚಾರಿಕ ಪ್ರಖರತೆ ಉಳ್ಳವರು. ಶರಣ ದರ್ಶನದ ಮೂರು ಶಿಖರಗಳಾಗಿರುವ ಗುರು, ಲಿಂಗ, ಜಂಗಮ ತತ್ತ್ವಗಳನ್ನು ಕಾಯಕತತ್ತ್ವಕ್ಕೆ ಮಣಿಯುವಂತೆ ಮಾಡಿರುವುದನ್ನು ಆಯ್ದಕ್ಕಿ ಮಾರಯ್ಯನ ವಚನ ವಿಶದೀಕರಿಸುತ್ತದೆ.

ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು.

ಈ ವಚನದಲ್ಲಿ ಶರಣರ ಕಾಯಕ ತತ್ತ್ವ ವ್ಯಾಪಿಸುವ ಕ್ಷೇತ್ರದ ಮಹತ್ವ ಇದೆ. ಕಾಯಕ ಎಂಬುದು ಉತ್ಪಾದಕ ಶಕ್ತಿಗೆ ಎಷ್ಟು ಕಾರಣವೋ, ಅಷ್ಟೇ ದಾಸೋಹ ತತ್ತ್ವ ಮುಖ್ಯವಾಗಿ ಉತ್ಪಾದಿಸಿದ್ದನ್ನು ಹಂಚಿಕೊಂಡು ಬದುಕುವ, ಹಾಗೆ ಬದುಕುವ; ಬದುಕನ್ನು ದೇವರ ಪ್ರಸಾದವೆಂಬ ಅರ್ಪಣಾಭಾವದಿಂದ ಬದುಕುವುದರಲ್ಲಿನ ಆನಂದವನ್ನು ಧ್ವನಿಸುತ್ತದೆ. ಆಯ್ದಕ್ಕಿ ಮಾರಯ್ಯ ಹೇಳಿದಂತೆ ಕಾಯಕದಲ್ಲಿ ನಿರತನಾದರೆ ಲಿಂಗಪೂಜೆಯನ್ನಾದರೂ ಮರೆಯಬೇಕು ಎಂಬ ಮಾತಿನ ಅರ್ಥವನ್ನು ನಾವು ಈ ರೀತಿ ಗ್ರಹಿಸಬಹುದೆನಿಸುತ್ತದೆ. ಒಂದೆಡೆ ಕುಳಿತು ಕೈಯಲ್ಲಿ ಇಷ್ಟಲಿಂಗವನ್ನಿಟ್ಟುಕೊಂಡು

ಪೂಜಿಸುವ ವಿಚಾರ ಒಂದೆಡೆಯಾದರೆ ಮತ್ತೊಂದು, ಕಾಯಕದಲ್ಲಿ ನಿರತನಾಗಿರುವಾಗ ಸದಾ ಮನಸ್ಸಿನಲ್ಲಿ ಶಿವನ ಧ್ಯಾನವನ್ನು ಮಾಡುತ್ತಿದ್ದರೆ ಲಿಂಗಪೂಜೆಯನ್ನು ಮಾಡಿದಂತೆಯೇ ಎಂಬ ಅರ್ಥವನ್ನೂ ಇಟ್ಟುಕೊಳ್ಳಬಹುದಾಗಿದೆ.

ಮತ್ತೊಬ್ಬ ಶರಣ ನುಲಿಯ ಚಂದಯ್ಯನು ತನ್ನ ವಚನದಲ್ಲಿ –

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದವೇ ವೇಷದ ಪಾಶ ಹರಿಯುವುದು
ಗುರುವಾದಡೂ ಚರಸೇವೆಯ ಮಾಡಬೇಕು
ಲಿಂಗವಾದಡೂ ಚರಸೇವೆಯ ಮಾಡಬೇಕು
ಜಂಗಮವಾದಡೂ ಚರಸೇವೆಯ ಮಾಡಬೇಕು
ಚನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು

ಈ ವಚನವು ಅಷ್ಟಾವರಣಗಳ ಮಹತ್ವವನ್ನು ಸಮರ್ಥವಾಗಿ ವ್ಯಾಖ್ಯಾನಿಸುತ್ತದೆ. ಶರಣ ಸಂಸ್ಕೃತಿ ಕಾಯಕದ ದರ್ಶನವನ್ನು ರೂಪಿಸುತ್ತದೆ. ಇದರ ಇನ್ನೊಂದು ಸಾಮಾಜಿಕ ಜವಾಬ್ದಾರಿಯಾಗಿ ದಾಸೋಹ ತತ್ತ್ವ ಅರಳಿಕೊಳ್ಳುತ್ತದೆ. ಶರಣ ಸಂಸ್ಕೃತಿ ಒಂದೊಂದೇ ಹಂತವನ್ನು ಮೇಲೇರುತ್ತಾ ಶಿವಪದ ಸಂಪಾದನೆಯಲ್ಲಿ ಪರ್ಯವಸಾನವಾಗುತ್ತದೆ.[3]

ಶರಣ ಸಂಸ್ಕೃತಿ ಈ ಹಂತದಲ್ಲಿ ಮಾನವ ಜೀವನವನ್ನು ಒಂದು ಸುಂದರವಾದ, ಸಾರ್ಥಕವಾದ ದಿವ್ಯ ಜೀವನವಾಗಿ ಪರಿವರ್ತಿಸುತ್ತದೆ. ಅಂಗವಾದದ್ದು ಲಿಂಗವಾಗುವುದು, ಜೀವವಾದದ್ದು ದೇವವಾಗುವುದು ಇಲ್ಲಿಯ ಗುರಿ. ಅದಕ್ಕಾಗಿಯೇ ಶರಣರು ಷಟ್‌ಸ್ಥಲ ಮಾರ್ಗವನ್ನು ರೂಪಿಸಿದರು. ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎನ್ನುವ ಈ ಆರು ಹಂತಗಳನ್ನು ಜೀವದ ಆರೋಹಣ ಮೆಟ್ಟಿಲುಗಳೆಂದು ಕರೆದರು. ಅನುಭವಿಯಾದವನಿಗೆ ಅಖಂಡ ವಿಶ್ವವೇ ಶಿವಮಯವಾಗುವುದಲ್ಲದೆ, ಆಚಾರಾಂಗವಾಗಿರುವ ಅನುಭಾವದ ಭಾಗ್ಯವೂ ಪ್ರಾಪ್ತವಾಗುತ್ತದೆ. ಮನಸ್ಸು ಮಾಗುವುದರಿಂದ ಕಣ್ಣು ಆಕಾಶದ ವಿಸ್ತಾರಕ್ಕೆ, ವಿನ್ಯಾಸಕ್ಕೆ ಹಿಗ್ಗುವುದರಿಂದ ತನ್ನತನದ ಪರಿಮಿತಿಯಿಂದ ಮುಕ್ತವಾಗಿ ಅನಂತಶಕ್ತಿಯಲ್ಲಿ ಒಂದಾಗುವ ಸಾಧ್ಯತೆ ಹೆಚ್ಚಾಗುತ್ತದೆ.

ಶರಣ ಸಂಸ್ಕೃತಿಯಲ್ಲಿ ಅನುಭಾವ ಎಂಬುದು ಶಿವಧ್ಯಾನದಲ್ಲಿ ಲೀನವಾಗಿ ಹೋಗುವ ಸಮಾಜಮುಖಿ ದೃಷ್ಟಿಯಲ್ಲ. ಅದು ಕಾಯಕಮುಖಿವಾಗುವ ಮೂಲಕವೇ ಜೀವನ್ಮುಖಿಯಾಗುವುದು. ಆದ್ದರಿಂದಲೇ ಹೊರಗೆಂಬುದೇ ಮರ್ತ್ಯಲೋಕ, ಒಳಗೆಂಬುದೇ ದೇವಲೋಕ ಎನ್ನುತ್ತದೆ. ಕೈಲಾಸಕ್ಕೆ ಹೋಗಬೇಕೆನ್ನುವವರಿಗೆ ಅಲ್ಲಿ ಇಲ್ಲಿ ಎಂಬ ಉಭಯವೇಕೆ ಎಂದು ಪ್ರಶ್ನಿಸುತ್ತದೆ. ಇಲ್ಲಿ ಕಾಯಕದಲ್ಲಿಯೇ ಕೈಲಾಸವನ್ನು ಕಾಣುವ ದರ್ಶನದಿಂದ ದೀಪ್ತವಾಗುತ್ತದೆ.[4]

ಶರಣ ಸಂಸ್ಕೃತಿಯ ಬೇರು ಆಚಾರ, ಸದಾಚಾರ. ಆದರೆ ಅದು ವಿಚಾರವನ್ನು ನಿರಾಕರಿಸುವುದಿಲ್ಲ. ಅದು ಜೀವನ್ಮುಖವಾದುದು, ಲೋಕ ಮುಖವಾದುದು. ಅದಕ್ಕಾಗಿಯೇ ಅಲ್ಲಮಪ್ರಭು 'ಸೋಹಮೆಂದು ದಾಸೋಹವಾಗದಿರೆ ಮೆಚ್ಚ ಗುಹೇಶ್ವರ' ಎಂದಿದ್ದಾನೆ. ಶರಣ ಸಂಸ್ಕೃತಿಯ ನೀತಿ ನೆಲೆಗಟ್ಟುಗಳು ಅನುಕ್ರಮವಾಗಿ ಆಚರಣೆಗಳು ಹಾಗೂ ದಾರ್ಶನಿಕ ದೃಷ್ಟಿಯ ನೆಲೆಯಲ್ಲಿ ಕ್ರಿಯಾಶೀಲವಾಗಿರುವುದನ್ನು ಕಾಣಬಹುದು. ಭಕ್ತಿಯ ಮಂತ್ರದಂಡದ ಮೂಲಕವೇ ಶರಣರು ದಯೆಯನ್ನು ಧರ್ಮದ ಮೂಲವಾಗಿಸಿಕೊಂಡರು; ಹೊಸ ಧರ್ಮದ ಹೊಸ ಬದುಕಿನ ತಂಗಾಳಿಯಲ್ಲಿ ಉಸಿರಾಡಿದರು. ದೇವಶ್ರದ್ಧೆಯ ಲೋಕ ಅದು. ಜೊತೆಗೆ ಅರಸೊತ್ತಿಗೆಯ ಕಾಲ. ಇಷ್ಟಾದರೂ ಶರಣರು ರೂಪಿಸಿದ ಜಾತಿದೂರವೂ ಲಿಂಗಭೇದವಿರಹಿತವೂ ಮಾನವ ಘನತೆಯನ್ನು ಎತ್ತಿಹಿಡಿದುದೂ ಆದ ಆ ಚಳುವಳಿ ಅಂದಿನ ಬದುಕಿನ ಬೇರುಗಳನ್ನಲ್ಲಾಡಿಸಿ ಹೊಸ ಬದುಕನ್ನು, ಹೊಸ ಸಂಸ್ಕೃತಿಯನ್ನು ರೂಪಿಸಿತು.

ಶರಣ ಸಂಸ್ಕೃತಿ ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣವೆನಿಸಿದೆ. ಇದು ಸರ್ವರ ಹಿತವನ್ನು ಬಯಸುವ ಸಮಷ್ಟಿ ಸಂಸ್ಕೃತಿ. ಸಾಮಾನ್ಯರು ವರ್ಣ, ವರ್ಗಗಳನ್ನಯ ನಿರಾಕರಿಸಿ ಮರೆತು ಪರಸ್ಪರ ಗೌರವಾದರಗಳಿಂದ ಚರ್ಚಿಸಿ ರೂಪಿಸಿದ ಸಂಸ್ಕೃತಿ. ಧಾರ್ಮಿಕ, ಲೌಕಿಕ ವಿಷಯಗಳನ್ನು ಒಳಗೊಂಡ ವ್ಯಕ್ತಿತ್ವವಿಕಸನಕ್ಕೆ ಅವಕಾಶ ನೀಡಿ ಸಮುದಾಯದ ಹಿತಕ್ಕೆ ಅನುವು ಮಾಡಿದ ಸಂಸ್ಕೃತಿ.

ವಚನ ಸಾಹಿತ್ಯ ನೂತನವಾದುದು ಹಾಗೂ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತಹದು. ವಚನಕಾರರಾದ ಶರಣರು ಸಾಹಿತ್ಯಚರಿತ್ರೆಗೆ ಹೊಸ ದಿಕ್ಕು ಮೂಡಿಸಿದರು. ಧರ್ಮದ ಆಚರಣೆಗೆ ಬದ್ಧರಾದರು. ಸಾಮಾಜಿಕ ಬದುಕಿಗೆ ತೀವ್ರವಾಗಿ ಸ್ಪಂದಿಸಿದರು. ಧರ್ಮಕ್ಕೆ ಒಂದು ವಿಶಿಷ್ಟ ಚೌಕಟ್ಟನ್ನು ನಿರ್ಮಿಸಿಕೊಟ್ಟರು. ಆದರೆ ಅದರಲ್ಲಿ ಅವರು ನೈತಿಕ ನಿಷ್ಠೆಗೆ ನೀಡಿದ ಮಹತ್ವ ಬಹುದೊಡ್ಡದು. ಸ್ವಾಭಿಮಾನದ ಬದುಕು, ಸಮಾನತೆ, ಮಾನವೀಯತೆ, ಆತ್ಮವಿಶ್ವಾಸವನ್ನು ಒಡಮೂಡಿಸಿ ಅಭಿಮಾನದ ಬದುಕಿಗೆ ಅರ್ಥಪೂರ್ಣವಾದ ಸ್ಥಾನ ದೊರಕಿಸಿಕೊಟ್ಟವರು ಶಿವಶರಣರು.

ನುಡಿದಂತೆ ನಡೆಯುವುದು ಶರಣ ಸಂಸ್ಕೃತಿ. ಬಸವಣ್ಣನವರು ತಮ್ಮ ವಚನದಲ್ಲಿ ಈ ವಿಷಯವಾಗಿ ಕುರಿತು ಹೀಗೆ ಹೇಳಿದ್ದಾರೆ.

ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ
ನಡೆಯೊಳಗೆ ನುಡಿಯ ಪೂರೈಸುವೆ
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ

ನುಡಿದಂತೆ ನಡೆಯುವುದು ತಂತಿಯ ಮೇಲೆ ನಡೆಯುವಷ್ಟೇ ಕಷ್ಟ, ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಎಂಬುದನ್ನು ಶರಣರು ಅರಿತಿದ್ದರು. ಮಾತಿಗೆ ಅವರು ತುಂಬ ಮಹತ್ವ ಕೊಟ್ಟಿದ್ದರು. ನುಡಿದಂತೆ ನಡೆಯುವುದು ಕಷ್ಟವಾದರೂ ಜನರು ಅದನ್ನು ಆಚರಣೆಯಲ್ಲಿ ತಂದು ಸಮಾಜದಲ್ಲಿ ಗೌರವವನ್ನು ಪಡೆದರು. ಅವರು ನಂಬಿದ್ದ ನಿಷ್ಠೆ, ಸದ್ಭಕ್ತಿ, ನೈತಿಕ ನಿಲುವು ಅವರ ಬದುಕಿನ ಅವಿಭಾಜ್ಯವಾಗಿತ್ತು.

ಜಾಗತಿಕ ಮಟ್ಟದಲ್ಲಿ ಸರ್ವಧರ್ಮಗಳ ಮೂಲ ಆಶಯ ಭದ್ರವಾದ ನೈತಿಕ ನೆಲೆಗಟ್ಟು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ ಮೊದಲಾದ ಸದ್ಗುಣಗಳನ್ನು ಬಹುಶಃ ಜಗತ್ತಿನ ಎಲ್ಲ ಧರ್ಮಗಳೂ ಒಂದಲ್ಲ ಒಂದು ರೀತಿಯಲ್ಲಿ, ರೂಪದಲ್ಲಿ ಪ್ರತಿಪಾದಿಸಿಕೊಂಡು ಬಂದಿವೆ. ಭಗವದ್ಗೀತೆಯ ದೈವಿ ಸಂಪತ್ತಿನಿಂದ ಕೂಡಿದವನ ಗುಣಗಳನ್ನು ಪರಿಚಯಿಸುವಾಗ ವೈದಿಕ ಜೀವನದ ಸುಂದರ ಚಿತ್ರವನ್ನು ಮುಂದಿಡುತ್ತದೆ.

ಶರಣ ಧರ್ಮ ಆಚರಣೆಯಲ್ಲಿ ನೀತಿಗೆ ತುಂಬಾ ವಿಶಿಷ್ಟವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ನೈತಿಕ ನಿಷ್ಠೆ ಇಲ್ಲದ ಧಾರ್ಮಿಕತೆ ತುಂಬಾ ಅಪಾಯಕಾರಿ ಎಂಬುದು ಅವರ ನಂಬಿಕೆ. ಕೆಲವು ಶಾಶ್ವತ ಮೌಲ್ಯಗಳನ್ನು ಅವಲಂಬಿಸಿ ಜೀವನದಲ್ಲಿ ಅಚಲವಾದ ಗುರಿ ಕಂಡುಕೊಳ್ಳುವ ಪ್ರಯತ್ನ ಧರ್ಮ ಮತ್ತು ನೀತಿಗೆ ಸಂಬಂಧವನ್ನು ಕಲ್ಪಿಸಿವೆ.

ಈ ಹಿನ್ನೆಲೆಯಲ್ಲಿ ಧರ್ಮ ಮತ್ತು ನೀತಿಗಳು ಪ್ರತ್ಯೇಕಿಸಲಾಗದಂತೆ ಪರಸ್ಪರ ಹೊಂದಿಕೊಂಡಿವೆ. ಇದನ್ನು ಶಿವ ಶಿವೆಯರ ಅವಿನಾಭಾವ ಸಂಬಂಧಕ್ಕೆ ಹೋಲಿಸಬಹುದು. ಈ ನಿಲುವು ಶರಣರಲ್ಲಿ 'ಆಚಾರ' ಎಂದು ಕರೆಸಿಕೊಂಡಿದೆ. ಇದು ಕೇವಲ ನಿಯಮಗಳ ಪಾಲನೆಗಾಗಿ ಅಲ್ಲದೆ ಬಹಳ ವ್ಯಾಪಕವಾದ ಅರ್ಥದಲ್ಲಿ ಬಳಕೆಗೊಂಡಿದೆ. ಅಂಗಕ್ರಿಯೆಗಳು ಲಿಂಗಕ್ರಿಯೆಗಳಾಗಬೇಕು, ಅಂಗಗುಣಗಳು ಲಿಂಗ ಗುಣಗಳಾಗಿ ಪರಿವರ್ತನೆಗೊಳ್ಳಬೇಕು. ಇವೇ ನಿಜವಾದ ಆಚಾರ. ಇಹಪರಗಳ ಸುಂದರ ಸಮನ್ವಯ. ಶರಣರ ಆಚಾರ ಉಪನಿಷತ್ತಿನ ಶಾಶ್ವತ ಮೌಲ್ಯವನ್ನೇ ಎತ್ತಿ ಹಿಡಿದಿದೆ.[5] ಇಲ್ಲಿ ಆಚಾರವೆಂದರೆ ಶುಷ್ಕ ನೀತಿ ನಿಯಮಗಳ ಆಚರಣೆಯಲ್ಲ. ಅಂಗಕ್ರಿಯೆಗಳನ್ನು ಲಿಂಗಕ್ರಿಯೆಗಳನ್ನಾಗಿ ಪರಿವರ್ತಿಸುವ ಕ್ರಿಯಾ ಕಲಾಪ. ಅಂತರಂಗದ ಅರಿವು ಮತ್ತು ಅರಿವಿನ ಆಚರಣೆ ಎರಡರಿಂದ ಇದು ಸಿದ್ಧಿಸುವುದು.

(ಮುಂದುವರಿಯುವುದು)

# ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು

**ರಂಗನಾಥ್ ಮೈಸೂರು**

ಗುರುಕರುಣೆಯೆಂಬುದು ಸುಲಭದ ಮಾತೇನಯ್ಯಾ
ಮೈ ಸವೆಯಬೇಕು, ಮನ ಮಾಗಬೇಕು
ಸಂಬಂಧಗಳ ಸುಳಿ ಬಿಚ್ಚಿಕೊಳ್ಳಬೇಕು
ನಿತ್ಯ ನಂಬಿಕೆಯಿಟ್ಟವನಿಗೆ ಒಲಿವೆಯಯ್ಯಾ ನೀ
ಕಂದನ ಕೂಗಿಗೆ ಓಡಿಬರುವ ತಾಯಂತೆ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಎನ್ನಹಂಕಾರವ ಕಳೆಯಯ್ಯಾ
ಮನವ ವಿನೀತವಾಗಿಸಯ್ಯಾ
ಎದುರಾದವರಿಗೆ ತಲೆಬಾಗಿ
ಕೈಮುಗಿದು ಶರಣು ಶರಣೆನ್ನುವ
ಮನವ ನೀಡಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ದಾನ ನೀಡಲು ನಾನಾರು?
ಬೇಡಲು ಅವನಾರು?
ಪಡೆದುದೆಲ್ಲವೂ ನಿನ್ನದೇ ಪ್ರಸಾದ
ನಾನು ನಾನೆಂಬ ಬಿಂಕವದೇಕೆ?
ಆಗೊಮ್ಮೆ ಈಗೊಮ್ಮೆ, ಅಲ್ಲೊಮ್ಮೆ ಇಲ್ಲೊಮ್ಮೆ
ಸುಳಿದು ಬೆಚ್ಚಿ ಬೀಳಿಸುವ ಎನ್ನಹಂಕಾರದ ಶಿಲೆಯ
ನುಚ್ಚುನೂರಾಗಿಸಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಎತ್ತಲೋ ಹೊರಟ ಹಾಯಿದೋಣಿಗೆ
ಹರಿಗೋಲಿಲ್ಲ, ಅಂಬಿಗನೂ ಮೊದಲಿಲ್ಲ

ಆಳ ಸಾಗರದಿ ಅತ್ತಿತ್ತ ಅಲುಗಾಡುತಿದೆ
ಮುಳುಗುವ ಮುನ್ನ ಮೇಲೆತ್ತಿ ಕಾಯ್ದು
ಮುಗುಳ್ನಗುವ ಅಂಬಿಗನಾಗಯ್ಯ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಹೇ ಗುರುವೆ
ಒಂದೊಮ್ಮೆ ನಿಂತಿದ್ದೆ ನಿಮ್ಮ ಬಳಿಯೆ
ಕರಗಿತ್ತು ನನ್ನೆದೆಯ ಅಹಂಭಾವ
ತನು ನಡುಗಿತ್ತು ಕೊಂಚ ಹೊತ್ತು
ಎತ್ತರದ ಗಿರಿಯೆದುರು ಪುಟ್ಟ ಗುಡ್ಡ
ನಾಚಿ ನಿಂತಂತೆ ತಲೆಬಾಗಿ ಮೌನವಾದೆ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಬದುಕು ಬಸವಳಿದಾಗಲೆಲ್ಲ ನಿಮ್ಮ ನೆನಪು
ತನು ಸೋತು ಮನ ಮೌನವಾದಾಗ ನಿಮ್ಮ ನೆನಪು
ಸುತ್ತ ಕತ್ತಲೆಯಾವರಿಸಿ ಎತ್ತಲೂ ದಾರಿ ಕಾಣದಾದಾಗ
ಹಚ್ಚಿಟ್ಟ ಹಣತೆಯ ಬೆಳಕಿನ ಹಾದಿಯೆಮಗೆ ನೀವು
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಮೂಕ ಮಹಾವಾಗ್ಮಿಯಾದಂತೆ
ಹೆಳವ ಹಿಮಾಲಯವ ಹತ್ತಿದಂತೆ
ಸಾಧಿಸುವ ಛಲವಿರಲು
ಗುರುಕರುಣೆ ಜೊತೆಗಿರಲು
ಸಾಧನೆಗೆ ಸೀಮೆಯುಂಟೆ ಹೇಳಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಗುರುವೇ
ನಿಮ್ಮ ಕಣ್ಣ ಪ್ರಭೆಗೆ ನಕ್ಷತ್ರ ನಾಚುತ್ತದೆ
ಸಮಯಪ್ರಜ್ಞೆಗೆ ಗಡಿಯಾರ ಮೌನವಾಗುತ್ತದೆ
ಮುಗುಳ್ನಗೆಗೆ ಬೆಳದಿಂಗಳೂ ತಣ್ಣಗಾಗುತ್ತದೆ
ಎತ್ತರದ ವ್ಯಕ್ತಿತ್ವಕ್ಕೆ ಹಿಮಾಲಯ ತಲೆಬಾಗಿ ನಿಲ್ಲುತ್ತದೆ

ಮಹಿಮೆ ಬಣ್ಣಿಸಲು ನಾಲಿಗೆ ಸೋಲುತ್ತದೆ ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ನೂರು ಪುಷ್ಪಗಳಿಂದ ಅರ್ಚಿಸಲಾರೆ
ವೇದಮಂತ್ರಗಳಿಂದ ಪೂಜಿಸಲಾರೆ
ಆಭರಣಗಳಿಂದ ಅಲಂಕರಿಸಲಾರೆ
ಭಾವದಲಿ, ಬದುಕಿನಲಿ ಬಡವ ನಾನಯ್ಯ
ಬರಿದೆ ನಿನ್ನಡಿಗೆ ಶಿರಬಾಗಿ ನಮಿಸುವೆ
ಹರಸಿ ಸಲಹಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಹಿಂದೆಲ್ಲ ಇರುತ್ತಿತ್ತು ರಾಜರಾಶ್ರಯವು
ವಟವೃಕ್ಷವೊಂದರ ಆಸರೆಯಂತೆ
ಬೆಳೆದರದೆಷ್ಟು  ಕವಿ ಕಲಾವಿದರು ಅರಮನೆ
ಗುರುಮನೆಯ ಕಾರುಣ್ಯಸಿಂಧುವಿನಲಿ
ನಿಮ್ಮಾಶೀರ್ವಾದದ ನಿತ್ಯನೆರಳಿನಲ್ಲಿ
ಅರಳಿತ್ತಲ್ಲಯ್ಯ ಕಲೆ ಸಾಹಿತ್ಯ ಸಂಸ್ಕೃತಿ
ಭಾವಾತ್ಮದುನ್ನತಿಗೆ ನಿಮ್ಮ ನಿತ್ಯ ದಾಸೋಹ ಕಾಣಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ತಿರುಗುವ ಬುಗುರಿ ನಾನು
ಆಡಿಸುವ ಚಾಟಿ ಎಲ್ಲಿದೆಯೋ
ಅರಿತವರಾರಯ್ಯ
ಅವನು ಮೆಲ್ಲಗೆಂದರೆ ಮೆಲ್ಲಗೆ
ರಭಸವೆಂದರೆ ರಭಸ
ಬದುಕ ಹಾದಿಯ ನಿರ್ಧರಿಸುವವನೊಬ್ಬ
ಮೇಲಿರಲು ಮನಕೆ ಆತಂಕವೇಕೋ ಕಾಣೆ
ತಿಳಿಸಿ ಹೇಳಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಭುವಿ ಕಂಪಿಸಿದಾಗ, ಸಾವು ಸೆರಗೆಳೆದಾಗ
ಇದ್ದುದೆಲ್ಲವ ಕಳೆದುಕೊಂಡ ಜನರಿಗೆ

ಸೂರು ಕಟ್ಟಲು ಪ್ರೇರಣೆಯಾಗಿ,
ನೆಮ್ಮದಿಯ ನೆಲೆ ಒದಗಿಸಿದ ಹೇ ಗುರುವೇ
ನಿನ್ನ ಕರುಣೆಗೆ ಎಣೆಯುಂಟೆ ಹೇಳಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಬರೆದವನು ನಾನೆಂಬ ಬಿಂಕ ನನಗಿಲ್ಲ
ಮೆಚ್ಚುಗೆಯ ಮಾತಿಗೆ ಮನಸೋಲಲಿಲ್ಲ
ಮತ್ತೆ ಟೀಕೆ ಟಿಪ್ಪಣಿಗೆ ಕಿವಿಗೊಡಲೇ ಇಲ್ಲ
ಗಟ್ಟಿತನವಿದ್ದರೆ ಉಳಿಯಲಿ ಒಂದಿಷ್ಟು ಕಾಲ
ಟೊಳ್ಳಾಗಿದ್ದರೆ ಹಾರಿಹೋಗಲಿ ಚಿಂತೆಯಿಲ್ಲ
ನಿಮ್ಮ ಕರುಣೆ ಮಾತ್ರ ನಿತ್ಯ ಜೊತೆಗಿರಲಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಅಂತರಂಗದ ದನಿಗೆ
ಅಕ್ಷರದ ರೂಪವಿತ್ತಿರುವೆ
ತಪ್ಪೆಷ್ಟೋ ನೆಪ್ಪೆಷ್ಟೋ
ಅರಿಯದೆಯೇ ಅಳುಕಿರುವೆ
ಬರೆವ ಲೇಖನಿಗೆ, ಹೊಳೆವ ಭಾವಕ್ಕೆ
ಹರಸಿ ಹೊನ್ನಾಗಿಸಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

ಬರೆಯಬೇಕೆಂದಾಗಲೆಲ್ಲ ಬರೆದ
ಕವಿತೆ, ಕತೆ, ವಚನ, ಗೀತೆ
ಕೆಲವೊಮ್ಮೆ ಹೇಳದೆಯೇ ಬಂದು
ಕಣ್ಣೆದುರು ನಿಂದು ನಮ್ಮ
ಸಾಕ್ಷಾತ್ಕರಿಸು ಸಹೃದಯರ ಮುಂದೆ
ಎಂದ ಪರಿ ಕಂಡು ಬೆರಗಾದೆನಯ್ಯಾ
ಶ್ರೀ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಶ್ರೀ ನಿಜಗುಣರು ಅಪರೂಪದ ಸಂತಶ್ರೇಷ್ಠರು

"ಶ್ರೀ ನಿಜಗುಣ ಶಿವಯೋಗಿಗಗಳವರು ಸಂತಶ್ರೇಷ್ಠರು" ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 2ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಶ್ರೀ ನಿಜಗುಣ ಶಿವಯೋಗಿಗಳವರ 'ಅನುಭವಸಾರ' ಕೃತಿಯ ಬಗೆಗೆ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ತಿಳಿಸಿದರು. 'ಅನುಭವಸಾರ' ಭಗವಂತನಲ್ಲಿ ಲೀನವಾಗಲು ಮೋಕ್ಷಮಾರ್ಗವನ್ನು ಬೋಧಿಸುವ ಉತ್ತಮ ಗ್ರಂಥ. ಮನುಷ್ಯ ಎಲ್ಲಿಂದ ಬಂದಿರುವನೋ ಅಲ್ಲಿಗೇ ಹೋಗಬೇಕು. ಮಳೆಯ ನೀರು ಭೂಮಿಯ ಮೇಲೆ ಬಿದ್ದರೂ ಆ ನೀರಿನ ಗುರಿ ಮಾತ್ರ ಸಮುದ್ರ ಸೇರುವುದೇ ಆಗಿರುತ್ತದೆ. ಹಾಗೆ ಮನುಷ್ಯ ಅಹಂಕಾರವನ್ನು ತೊರೆದು ಮೋಕ್ಷ ಸಂಪಾದಿಸಬೇಕು. ಲೌಕಿಕ ಮತ್ತು ಅಲೌಕಿಕ ಮಾರ್ಗವನ್ನು ಸಮನಾಗಿ ಕಾಣುವುದೇ ಸಮಸ್ಥಿತಿ ಎಂದು ಶ್ರೀ ನಿಜಗುಣರು ಹೇಳಿದ್ದಾರೆ. ಅಧ್ಯಯನ ಶಿಬಿರದಲ್ಲಿ ಕೇಳಿದ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಚಿತ್ತದಿಂದ ಬದುಕಬೇಕು ಎಂದು ನುಡಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಸಿದ್ಧೇಶ್ವರ ಮಹಾಸ್ವಾಮಿಗಳವರು ಅನುಭಾವಿಗಳ ಸಂಗದಿಂದ ಮನಸ್ಸು ಶುದ್ಧಿಯಾಗುತ್ತದೆ. ಭಾರತದ ಸನಾತನ ಧರ್ಮ ಶ್ರೇಷ್ಠವಾದುದು. ಸಾಧು, ಸಂತರ ಪಾದಸ್ಪರ್ಶದಿಂದ ನಮ್ಮ ನೆಲ ಪಾವನವಾಗಿದೆ. ವಿದೇಶೀಯರು ನಮ್ಮ ದೇಶದಿಂದ ಸಂಪತ್ತನ್ನು ಲೂಟಿ ಮಾಡಿದರೂ ಆಧ್ಯಾತ್ಮಿಕ ಸಂಪತ್ತನ್ನು ನಾಶಪಡಿಸಲು ಸಾಧ್ಯವಾಗಲಿಲ್ಲ, ದೇಶದ ಯುವಜನತೆ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯಲು ಮುಂದಾಗಬೇಕು ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿಯವರು ನಿಜಗುಣರು ತಮ್ಮ ಸಾಧನೆಯ ಮೂಲಕ ಸಮಾಜಕ್ಕೆ ಮಾರ್ಗದರ್ಶನ ಮಾಡಿದರು.

ವೈಜ್ಞಾನಿಕವಾಗಿ ಹಸಿರು ಕ್ರಾಂತಿಯೂ ಆಗಿದೆ. ಈಗ ಆಧ್ಯಾತ್ಮಿಕ ಕ್ರಾಂತಿಯಾಗಬೇಕಿದೆ. ನಂಬಿಕೆಯೇ ದೇವರು, ಪರೋಪಕಾರದಿಂದ ಪುಣ್ಯ ಲಭಿಸುತ್ತದೆ. ಪುಣ್ಯ ಸಂಪಾದನೆಯಿಂದ ಸ್ವರ್ಗ ಪ್ರಾಪ್ತಿಯಾಗುತ್ತದೆ. ಭಕ್ತಿ ಪಂಥಗಳು ಜನಸಾಮಾನ್ಯರಲ್ಲಿ ಆಧ್ಯಾತ್ಮಿಕತೆಯನ್ನು ಜಾಗೃತಗೊಳಿಸಿವೆ. ಇದರಿಂದ ನಮ್ಮ ಸಂಸ್ಕೃತಿ ಉಳಿದಿದೆ ಎಂದು ತಿಳಿಸಿದರು.

ವಿದ್ವಾನ್ ಶ್ರೀ ಜಗದೀಶ್ ಶರ್ಮಾ ಸಂಪರವರು ಕಲಿಕೆ ಮತ್ತು ಅರಿವಿಗೆ ಯಾವುದೇ ವಯೋಮಿತಿ ಇರುವುದಿಲ್ಲ, ಶಿಷ್ಯರ ಸಂಶಯಗಳನ್ನು ತಿಳಿಗೊಳಿಸುವುದೇ ಗುರುವಿನ ಕೆಲಸ. ಭಾರತದ ಆತ್ಮವು ಆಧ್ಯಾತ್ಮವಾಗಿದೆ. ಬೇರೆ ದೇಶಗಳು ಭೋಗಭೂಮಿಗಳಾಗಿ ಗುರುತಿಸಿಕೊಂಡರೆ ನಮ್ಮ ದೇಶವು ಯೋಗಭೂಮಿಯಾಗಿದೆ. ದೇಶದ ಶಕ್ತಿಯೇ ಸಂತರಾಗಿದ್ದಾರೆ. ಸ್ವಾರ್ಥವನ್ನು ಬಿಟ್ಟು ನಿಸ್ವಾರ್ಥದಿಂದ ರಾಷ್ಟ್ರ ನಿರ್ಮಿಸಬೇಕು ಎಂದು ನುಡಿದರು.

ನಿವೃತ್ತ ಐಎಎಸ್ ಅಧಿಕಾರಿಗಳು ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಶ್ರೀ ನಿಜಗುಣರು ನಾಡು ಕಂಡ ಅಪ್ರತಿಮ ದಾರ್ಶನಿಕರು. ಭಗವದ್ಗೀತೆ, ಉಪನಿಷತ್ತು ಹಾಗೂ ವೇದಾಂತ ಚಿಂತನೆಗಳನ್ನು ಆಡುಭಾಷೆಯಲ್ಲಿ ಜನರಿಗೆ ನೀಡಿದ್ದಾರೆ. ಅವರ ಕೃತಿಗಳಾದ ವಿವೇಕ ಚಿಂತಾಮಣಿ, ಕೈವಲ್ಯ ಪದ್ಧತಿ, ಪರಮಾರ್ಥ ಪ್ರಕಾಶಿಕೆ, ಅನುಭವಸಾರ, ಪರಮಾನುಭವಬೋಧೆ, ಪರಮಾರ್ಥಗೀತೆ, 63 ಪುರಾತನರ ತ್ರಿವಿದಿ ಮುಂತಾದ ಗ್ರಂಥಗಳ ಮೂಲಕ ಬದುಕಿನ ಮೌಲ್ಯಗಳನ್ನು ತಿಳಿಸಿ, ಮೋಕ್ಷಸಾಧನೆಯ ಮಾರ್ಗವನ್ನು ತೋರಿಸಿದ್ದಾರೆ. 'ಅನುಭವಸಾರ'ವು ಆಧ್ಯಾತ್ಮಿಕ ಸಾಧನೆಗೆ ದಾರಿದೀಪವಾಗಿದೆ ಎಂದು ನುಡಿದರು.

ಶ್ರೀ ಶಂಕರ್ ದೇವನೂರುರವರು ಹತ್ತೂರು ನೋಡುವ ಬದಲು ಸುತ್ತೂರು ನೋಡು ಎಂಬ ಉಕ್ತಿಯಂತೆ ಶ್ರೀಕ್ಷೇತ್ರದ ನೆಲ, ಜಲ ಎಲ್ಲವೂ ಪವಿತ್ರವಾಗಿದೆ. ಶ್ರೀಮಠವು ಸಮಾಜಕ್ಕೆ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಕೊಡುಗೆಗಳನ್ನು ನೀಡುತ್ತಿದೆ. ಇಂಥಹ ಸತ್ಸಂಗದಲ್ಲಿ ನಾವು ಬೆರೆತು ನಮ್ಮ ಬದುಕಿನ ಕತ್ತಲೆಯನ್ನು ಕಳೆಯಬೇಕು ಎಂದು ತಿಳಿಸಿದರು.

ಡಾ. ಕೆ. ಅನಂತರಾಮುರವರು ಪರಮಾತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಬ್ರಹ್ಮಜ್ಞಾನಿಯಾದವನು ಅಂತರಂಗದ ಆನಂದವನ್ನು ಅನುಭವಿಸುತ್ತಾನೆ. ಅವನಿಗೆ ಜೀವನದ ಕಟ್ಟುಪಾಡುಗಳಿಲ್ಲ, ಹುಟ್ಟು ಸಾವುಗಳಿಲ್ಲ, ಗುರುವಿನ ಕರುಣೆಯಿಂದ ಬದುಕಿನ ಕತ್ತಲೆ ಕಳೆದು ಚೈತನ್ಯದ ಬೆಳಕು ಮೂಡುವುದು ಎಂದು ಏಳು ಮತ್ತು ಎಂಟನೇ ಸಂಧಿಯ ವಿಷಯ ಮಂಡಿಸುತ್ತಾ ತಿಳಿಸಿದರು.

ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಅಜಯಾನಂದ ಸ್ವಾಮಿಗಳು, ಮಾತೋಶ್ರೀ ಕಾವ್ಯರವರು, ಮಾತೋಶ್ರೀ ಸರಸ್ವತಿ, ಶ್ರೀ ಸೋಮಶೇಖರ್ ಬಿ ಮಗದುಂ, ಶ್ರೀ ಕಾಶಿನಾಥ್, ಶ್ರೀಮತಿ ಅರುಣಾ ಶಿರಗುಪ್ಪಿ ಹಾಗೂ ಕು. ಸಿಂಚನಾರವರುಗಳು ಶಿಬಿರದ ಕುರಿತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಶರಣೆ ಸುಗುಣಾ ತಾಯಿಯವರು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಕೆ.ಪಿ. ಬಸವರಾಜುರವರು ಶಿಬಿರದ ವರದಿ ಮಂಡಿಸಿದರು. ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿದರು. ಶ್ರೀ ಜಿ.ಎನ್. ಮಂಜುನಾಥ್ ವಂದಿಸಿದರು. ಶ್ರೀ ಚನ್ನಬಸವ ಸ್ವಾಮಿಗಳು ಕಾರ್ಯಕ್ರಮ ನಿರೂಪಿಸಿದರು.

ಶಿಬಿರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳು, ಮಹಾರಾಷ್ಟ್ರದ ಸೊಲ್ಲಾಪುರ, ತೆಲಂಗಾಣದ ಹೈದರಾಬಾದ್ ಹಾಗೂ ಇತರ ಕಡೆಯ 150ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

**ದೊಂಬಕಾಳೇಶ್ವರ ತಮಿಳು–ಕನ್ನಡ ಭಕ್ತರ ಭಾವೈಕ್ಯತೆಯ ಸಂಕೇತ**

ಹೊಂಗನೂರು ಗ್ರಾಮದಲ್ಲಿರುವ ದೊಂಬಕಾಳೇಶ್ವರ ದೇವಸ್ಥಾನ ತಮಿಳುನಾಡು ಹಾಗೂ ಕರ್ನಾಟಕದಲ್ಲಿರುವ ಭಕ್ತರನ್ನು ಒಂದುಗೂಡಿಸಿ ಅವರಲ್ಲಿ ಸಹೋದರತೆ ಹಾಗೂ ಉತ್ತಮ ಬಾಂಧವ್ಯವನ್ನು ಬೆಸೆದು ಆಧ್ಯಾತ್ಮಿಕತೆಯನ್ನು ವೃದ್ಧಿಸಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 6ರಂದು ಚಾಮರಾಜನಗರ ತಾಲ್ಲೂಕು ಹೊಂಗನೂರಿನಲ್ಲಿ ಶ್ರೀ ದೊಂಬಕಾಳೇಶ್ವರಸ್ವಾಮಿ, ಶ್ರೀ ಗೂಳೇಶ್ವರಸ್ವಾಮಿ ಮತ್ತು ಶ್ರೀ ವೀರಮಾಸ್ತಿ ಕೆಂಪಮ್ಮನವರ ದೇವಸ್ಥಾನಗಳ ನೂತನ ಕಟ್ಟಡದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ತಮಿಳುನಾಡು, ಮಂಡ್ಯ ಜಿಲ್ಲೆಯ ಮಳವಳ್ಳಿ ಹಾಗೂ ಚಾಮರಾಜನಗರ ಜಿಲ್ಲೆಯ ಭಕ್ತರು ಸೇರಿ ಹೊಂಗನೂರು ಗ್ರಾಮದಲ್ಲಿ ಭವ್ಯ ಮಂದಿರ ನಿರ್ಮಾಣ ಮಾಡಿದ್ದಾರೆ. ತಮಿಳುನಾಡು ಭಕ್ತರು ಕರ್ನಾಟಕದಲ್ಲಿ ದೇವಸ್ಥಾನ ನಿರ್ಮಾಣ ಮಾಡಿರುವುದು ಭಾವೈಕ್ಯತೆ ಹಾಗೂ ಸಾಮರಸ್ಯದ ಸಂಕೇತವಾಗಿದೆ. ಶ್ರೀ ದೊಂಬಕಾಳೇಶ್ವರಸ್ವಾಮಿಯು ಎಲ್ಲರ ಆಶೋತ್ತರಗಳನ್ನು ಈಡೇರಿಸಿ ನೆಮ್ಮದಿಯ ಜೀವನವನ್ನು ಕರುಣಿಸಲಿ ಎಂದು ಹಾರೈಸಿದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿ, ಮಾಜಿ ಉಪಸಭಾಪತಿಗಳಾದ ಡಾ. ಮರಿತಿಬ್ಬೇಗೌಡ, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಶ್ರೀ ಚಂದ್ರು, ಶ್ರೀ ಎಂ.ಎಸ್. ರಮೇಶ್, ಶ್ರೀ ಕೆ. ಚಂದ್ರಶೇಖರ್, ಶ್ರೀ ಶಿವಮೂರ್ತಿ ಕೀಲಾರ, ಡಾ. ಶೆಲ್ವ ಪಿಳ್ಳೈ ಅಯ್ಯಂಗಾರ್, ಶ್ರೀ ಆರ್ಮುಗಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು.

**ಸೇವಾ ಮನೋಭಾವವಿದ್ದಾಗ ಸಮಾಜದ ಗೌರವಕ್ಕೆ ಪಾತ್ರ**

ವೈದ್ಯವೃತ್ತಿ ಬಹಳ ಪವಿತ್ರವಾದದ್ದು, ಸೇವಾ ಮನೋಭಾವನೆಯಿಂದ ಕಾರ್ಯ ನಿರ್ವಹಿಸಿದಾಗ ಸಮಾಜದ ಗೌರವಕ್ಕೆ ಪಾತ್ರರಾಗಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 7ರಂದು ಮಂಡ್ಯದಲ್ಲಿ ಭಾರತೀಯ ವೈದ್ಯಕೀಯ ಸಂಘ ಮತ್ತು ಮೆಡಿಕಾನ್ ಟ್ರಸ್ಟ್‌ನಿಂದ ನಿರ್ಮಿಸಿರುವ ನೂತನ ಕಟ್ಟಡ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯ ಒತ್ತಾಯದಿಂದ ಯಾವುದೇ

ವೃತ್ತಿಯನ್ನು ಮಾಡಬಾರದು. ಆತನಿಗೆ ಸ್ವಂತ ಪ್ರಯತ್ನ, ಆಸಕ್ತಿ, ಶ್ರದ್ಧೆ ಇರಬೇಕು. ಏನು ಕಲಿಯಬೇಕು ಅನಿಸುತ್ತದೆಯೊ ಅದನ್ನೇ ಕಲಿಯಬೇಕು. ಎಷ್ಟೋ ಸಂದರ್ಭದಲ್ಲಿ ವೈದ್ಯರ ಮಕ್ಕಳೇ ವೈದ್ಯರಾಗಲು ಇಚ್ಛಿಸುವುದಿಲ್ಲ, ಅವರು ಎಂಜಿನಿಯರ್‌ಗಳಾಗಿರುತ್ತಾರೆ. ವೈದ್ಯರಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿರುವವರು ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಕೆಲಸ ಮಾಡುತ್ತಿರುತ್ತಾರೆ. ಹಾಗಾಗಿ ವೈದ್ಯವೃತ್ತಿ ಅತ್ಯಂತ ಪವಿತ್ರವಾದದ್ದು ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಜಗದ್ಗುರುಗಳು ಮತ್ತು ಸಿದ್ಧಗಂಗಾ ಶ್ರೀಗಳು ಆಶೀರ್ವಚನ ನೀಡಿದರು. ಭಾರತೀಯ ವೈದ್ಯಕೀಯ ಸಂಘದ ರಾಜ್ಯಾಧ್ಯಕ್ಷರಾದ ಡಾ. ಎ.ವಿ. ಚಿನಿವಾಲರ, ಮಿಮ್ಸ್ ನಿರ್ದೇಶಕರಾದ ಡಾ. ನರಸಿಂಹಸ್ವಾಮಿ, ಐಎಂಎ ಜಿಲ್ಲಾಧ್ಯಕ್ಷರಾದ ಡಾ. ಟಿ.ಎನ್. ಮರಿಗೌಡ, ಜಿಲ್ಲಾ ಆರೋಗ್ಯಾಧಿಕಾರಿಗಳಾದ ಡಾ. ಕೆ. ಮೋಹನ್ ಉಪಸ್ಥಿತರಿದ್ದರು. ಡಾ. ವಿ.ಎಲ್. ನಂದೀಶ್ ಸ್ವಾಗತಿಸಿದರು. ಡಾ. ಪಿ.ಎಂ. ಜಗದೀಶ್‌ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕು. ಹೆಚ್.ಆರ್. ನಿಧಿ, ಡಾ. ಎಂ. ವಿನಯ್ ಪ್ರಾರ್ಥಿಸಿದರು. ಡಾ. ಎಂ.ಎಸ್. ಸಿದ್ದೇಗೌಡ ವಂದಿಸಿದರು. ಡಾ. ಪ್ರದೀಪ್‌ಕುಮಾರ್ ಹೆಬ್ರಿ ಹಾಗೂ ಶ್ರೀಮತಿ ಶ್ವೇತಾರವರುಗಳು ಕಾರ್ಯಕ್ರಮ ನಿರೂಪಿಸಿದರು.

**ವಿದ್ವಾನ್ ಸರ್ವತ್ರ ಪೂಜ್ಯತೇ**

ವಿದ್ವಾನ್ ಸರ್ವತ್ರ ಪೂಜ್ಯತೇ ಎಂಬ ಉಕ್ತಿಯಂತೆ ಜ್ಞಾನಿಯಾದವನಿಗೆ ಎಲ್ಲೆಡೆಯೂ ಗೌರವ ದೊರೆಯುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 9ರಂದು ನಂಜನಗೂಡು ತಾಲ್ಲೂಕು ಸಂಗಮದಲ್ಲಿ ಶ್ರೀ ಸದ್ಗುರು ಮಹಾದೇವ ತಾತ ಪ್ರಾಥಮಿಕ ಶಾಲೆ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇದು ಸ್ಪರ್ಧಾತ್ಮಕ ಯುಗವಾಗಿದೆ. ಜ್ಞಾನ ಸಂಪಾದನೆ ಮಾಡಿದರೆ ಮಾತ್ರ ಸ್ಥಾನಮಾನಗಳು ದೊರೆಯುತ್ತವೆ. ಮನುಷ್ಯನ ಅನೇಕ ಸಮಸ್ಯೆಗಳಿಗೆ ಇಂದಿನ ತಂತ್ರಜ್ಞಾನ ಪರಿಹಾರವಾಗಿದೆ. ಅರಿವು ಪಡೆಯಲು ಮತ್ತು ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳುವುದಕ್ಕಾಗಿ ಜ್ಞಾನ ಸಂಪಾದನೆ ಮಾಡಬೇಕು. ಮಹಾದೇವ ತಾತನವರು ಸೂಕ್ಷ್ಮ ಪ್ರಜ್ಞಾವಂತರಾಗಿದ್ದರು. ಉತ್ತಮ ವಾಕ್ ಸಿದ್ಧಿಯನ್ನು ಹೊಂದಿದ್ದರು. ಅವರದು ವಿಶೇಷವಾದ ವ್ಯಕ್ತಿತ್ವವಾಗಿತ್ತು. ಶಾಲೆಯ ಜೊತೆಗೆ ವಿದ್ಯಾರ್ಥಿನಿಲಯವನ್ನೂ ಪ್ರಾರಂಭಿಸಿದರು. ಆಧ್ಯಾತ್ಮಿಕವಾಗಿ ಉತ್ತಮ ವಾತಾವರಣ ದಲ್ಲಿರುವ ಇಲ್ಲಿನ ಶಿಕ್ಷಣ ಸಂಸ್ಥೆ ಇನ್ನೂ ಹೆಚ್ಚಿನ ಯಶಸ್ಸನ್ನು ಸಾಧಿಸಿ ಅನೇಕ ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿ ಎಂದು ಹೇಳಿದರು.

ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಇಲ್ಲಿನ ಭಕ್ತ ಮಂಡಳಿಯವರು ಸುಸಜ್ಜಿತವಾದ ಶಾಲಾ ಕಟ್ಟಡವನ್ನು ನಿರ್ಮಿಸಿದ್ದಾರೆ. ದೇಶದಲ್ಲಿ ನಾಗರಿಕತೆ ಮತ್ತು ದೇಶಭಕ್ತಿ ಬೆಳೆಯಲು ಪ್ರಾಥಮಿಕ ಹಂತದ ಶಿಕ್ಷಣದಿಂದ ಸಾಧ್ಯ. ಮಕ್ಕಳಿಗೆ ಸತ್ಯಮಾರ್ಗ ಹಾಗೂ ಸಂಸ್ಕಾರವಂತ ವಿಷಯಗಳನ್ನು ಕಲಿಸಬೇಕು ಎಂದು ತಿಳಿಸಿದರು.

ಹಂಪಸಾಗರದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಮಹದೇವ ತಾತನವರು ಭಾರತೀಯ ಸಂತ ಪರಂಪರೆಯ ಮಹನೀಯರು ಹಾಗೂ ನಿರಾಭಾರಿ ಶ್ರೀಗಳು. ನಮ್ಮ ಅರಿವು ನಮಗೆ ಇರಬೇಕು. ಪೋಷಕರು ಮಕ್ಕಳಿಗೆ ಸಂಸ್ಕಾರವನ್ನು ಕೊಡಬೇಕು. ಸಮಾಜದಲ್ಲಿ ಸಕಾರಾತ್ಮಕವಾಗಿ ಬದಲಾವಣೆಯಾದರೆ ಜಗತ್ತು ಸುಭಿಕ್ಷವಾಗಿರುತ್ತದೆ ಎಂದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರು ಶ್ರೀ ಮಹದೇವ ತಾತನವರು ಉತ್ತರ ಕರ್ನಾಟಕದಿಂದ ಬಂದು ಇಲ್ಲಿ ನೆಲೆಸಿದರು. ಅವರ ದೈವೀಶಕ್ತಿಯನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ. ಇಲ್ಲಿನ ಭಕ್ತರು ಅವರ ಬಗ್ಗೆ ಅಪಾರವಾದ ನಂಬಿಕೆಯನ್ನು ಇಟ್ಟಿಕೊಂಡಿದ್ದಾರೆ ಎಂದರು.

ದೇವನೂರು, ಬರಡನಪುರ, ಮಾದಹಳ್ಳಿ ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಹೆಚ್.ಎಂ. ಗಣೇಶ ಪ್ರಸಾದ್, ಶ್ರೀ ಅನಿಲ್ ಚಿಕ್ಕಮಾದು, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಕೆಂಪಣ್ಣ ಮಾತನಾಡಿದರು. ಹಂಚೀಪುರ, ಹುಲ್ಲಹಳ್ಳಿ, ದಡದಹಳ್ಳಿ, ಸಂಗಮ, ಪುರ, ಕಂತೇಮಹದೇಶ್ವರಬೆಟ್ಟ, ಶಿರಮಳ್ಳಿ, ಮಾದಾಪುರ, ಸೂರಹಳ್ಳಿ, ಹೊನ್ನಲಗೆರೆ ಮತ್ತು ಕಸುವಿನಹಳ್ಳಿ ಮಠಗಳ ಶ್ರೀಗಳು ಉಪಸ್ಥಿತರಿದ್ದರು. ಚುಂಚನಹಳ್ಳಿ ಶ್ರೀಗಳು ಪ್ರಾರ್ಥಿಸಿದರು. ಶ್ರೀ ಮಲ್ಲಿಕಾರ್ಜುನಪ್ಪ ಸ್ವಾಗತಿಸಿದರು. ಶ್ರೀ ಕೆಂಡಗಣ್ಣಪ್ಪ ಕಾರ್ಯಕ್ರಮ ನಿರೂಪಿಸಿದರು.

**ಸಾಂಸ್ಕೃತಿಕ ಕ್ರಿಯಾಚರಣೆಯಿಂದ ಶಾಂತಿ ಪ್ರಾಪ್ತಿ**

ಆಧ್ಯಾತ್ಮಿಕ, ಧಾರ್ಮಿಕ ಆಚರಣೆಗಳೊಂದಿಗೆ ಸಾಂಸ್ಕೃತಿಕ ಕ್ರಿಯೆ ಮತ್ತು ಚಟುವಟಿಕೆಗಳಿಂದ ಮನಸ್ಸಿಗೆ ನೆಮ್ಮದಿ ಶಾಂತಿಯು ಪ್ರಾಪ್ತಿಯಾಗಲಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 11ರಂದು ರಾಯಚೂರಿನಲ್ಲಿ ಮುನ್ನೂರು ಕಾಪು ಸಮಾಜದ ವತಿಯಿಂದ ಆಯೋಜಿಸಿದ್ದ ಮುಂಗಾರು ಸಾಂಸ್ಕೃತಿಕ ಬೆಳ್ಳಿಹಬ್ಬದ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಹೊರಗಿನ ಸಂಪತ್ತನ್ನು ಹಣದಿಂದ ಗಳಿಸಬಹುದು, ಆದರೆ ಒಳಗಿನ ಸಂಪತ್ತನ್ನು ಧಾರ್ಮಿಕ ಆಚರಣೆ, ಕಲೆ, ಸಂಗೀತ, ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ತೊಡಗಿಸಿಕೊಳ್ಳುವುದರಿಂದ ಪಡೆದುಕೊಳ್ಳಬಹುದಾಗಿದೆ. ಅಂತಹ ಪ್ರಯತ್ನವನ್ನು ರಾಯಚೂರಿನಲ್ಲಿ ಮುನ್ನೂರು ಕಾಪು ಸಮಾಜ ಮಾಡುತ್ತಾ ಬರುತ್ತಿದೆ. ಜಾನಪದ ಕೃಷಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಅದ್ದೂರಿಯಾದ ಕಾರ್ಯಕ್ರಮ ಆಯೋಜನೆ ಮಾಡುವುದರ ಮೂಲಕ ಶ್ರೀ ಎ. ಪಾಪರೆಡ್ಡಿಯವರ ನೇತೃತ್ವದ ಕಾಪು ಸಮಾಜ ಇತರರಿಗೆ ಮಾದರಿಯಾಗಿದೆ. ದೇಶದಲ್ಲಿ ರೈತರು ಪ್ರಾಮಾಣಿಕವಾಗಿ ಕೆಲಸ ಮಾಡುವ ವ್ಯಕ್ತಿಗಳು. ಕೃಷಿ ಮತ್ತು ರೈತ ಉಳಿದರೆ ಮಾತ್ರ ಈ ದೇಶ ಬಲಿಷ್ಠ ರಾಷ್ಟ್ರವಾಗಲು ಸಾಧ್ಯ ಎಂದು ಹೇಳಿದರು.

ಕಾಶಿ ಜಗದ್ಗುರು ಶ್ರೀ ಜ್ಞಾನಸಿಂಹಾಸನ ಪೀಠದ ಡಾ. ಶ್ರೀ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಲೇಸು ಎನ್ನುವ ನಾಣ್ಣುಡಿ ಎಂದೆಂದಿಗೂ ಪ್ರಸ್ತುತವಾದುದು. ಕೃಷಿಯ ಮಹತ್ವವನ್ನು ಯುವಪೀಳಿಗೆ ಅರಿಯಬೇಕಾಗಿದೆ. ಭಾರತ ಕೃಷಿಪ್ರಧಾನ ದೇಶವಾಗಿದೆ. ಇಲ್ಲಿನ ರೈತರು ಕೃಷಿಯನ್ನು ನಂಬಿಕೊಂಡು ದುಡಿಯುತ್ತಾ ದೇಶ ಸೇವೆಯನ್ನು ಮಾಡುತ್ತಿದ್ದಾರೆ. ಯಾವುದೇ ಇತರ ಕ್ಷೇತ್ರಗಳು ಇಲ್ಲದೆ ಮನುಷ್ಯ ಬದುಕಬಹುದು, ಆದರೆ ಕೃಷಿ ವಲಯವಿಲ್ಲದೆ ಇದ್ದರೆ ಜೀವಿಸಲು ಕಷ್ಟವಾಗುತ್ತದೆ ಎಂದು ತಿಳಿಸಿದರು.

ಗಬ್ಬೂರು, ಎಲೆಬಿಚ್ಚಾಲಿ, ಸೋಮವಾರಪೇಟೆ ಹಿರೇಮಠ, ಸುಲ್ತಾನಪುರ, ಚಿಕ್ಕಸೂಗೂರು, ಇಂಗಳೇಶ್ವರ ಮಠಗಳ ಶ್ರೀಗಳು, ಶಾಸಕರಾದ ಡಾ. ಶಿವರಾಜ ಪಾಟೀಲ್, ಶ್ರೀ ಎ. ವಸಂತಕುಮಾರ್, ಮಾಜಿ ಶಾಸಕರಾದ ಶ್ರೀ ಎ. ಪಾಪಾರೆಡ್ಡಿ, ಶ್ರೀ ಬೆಲ್ಲಂ ನರಸರೆಡ್ಡಿ ಮೊದಲಾದವರುಗಳು ಉಪಸ್ಥಿತರಿದ್ದರು.

### ಭಗವಂತ ಅಂತರಗದಲ್ಲಿ ನೆಲೆಸಿದ್ದಾನೆ

ಭಗವಂತ ಮನುಷ್ಯನ ಅಂತರಗದಲ್ಲಿಯೇ ನೆಲೆಸಿದ್ದಾನೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 14ರಂದು ಹಾಸನ ಜಿಲ್ಲೆ ಶ್ರೀ ಪುಷ್ಪಗಿರಿ ಮಹಾಸಂಸ್ಥಾನ ಮಠದ ಶ್ರೀ ಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ 21ನೇ ವರ್ಷದ ಪುಣ್ಯಸಂಸ್ಮರಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ನಿರಂತರ ಬದಲಾವಣೆಯೇ ಶಾಶ್ವತ. ಭಗವಂತನ ಕೃಪೆ ಯಾವಾಗ ಯಾರ ಮೇಲಿರುತ್ತದೆ ಎಂಬುದು ತಿಳಿಯಲಾಗದು. ಭಗವಂತ ನಮ್ಮೊಳಗೆ ಇದ್ದಾನೆ ಎಂಬುದನ್ನು ಅರ್ಥ ಮಾಡಿಕೊಂಡರೆ ಮಾನವ ನೆಮ್ಮದಿಯಿಂದ ಇರಲು ಸಾಧ್ಯ. ಮಠಗಳು ಮತ್ತು ದೇವಸ್ಥಾನಗಳು ಮಾನಸಿಕ ನೆಮ್ಮದಿ ಮತ್ತು ಶಾಂತಿ ಪಡೆಯುವ ಸ್ಥಳಗಳಾಗಿವೆ. ಐತಿಹಾಸಿಕ ಪರಂಪರೆಯಿರುವ ಶ್ರೀಶೈಲ ಮಲ್ಲಿಕಾರ್ಜುನ ನೆಲೆಸಿರುವ ಸ್ಥಳವೇ ಪುಷ್ಪಗಿರಿ ಎಂದು ಹೇಳಿದರು.

ಪುಷ್ಪಗಿರಿಯ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ನಮ್ಮ ಗುರುಗಳ 21ನೇ ವರ್ಷದ ಪುಣ್ಯಸ್ಮರಣೆಯ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲೆಯ ಎಲ್ಲಾ ಮಠಾಧೀಶರು ಭಾಗವಹಿಸಿರುವುದು ಸಂತೋಷದ ಸಂಗತಿ. ಈ ಧಾರ್ಮಿಕ ಸಭೆಯು ಬಸವಣ್ಣನವರ ಮಹಾಮನೆಯಂತೆ ಭಾಸವಾಗುತ್ತಿದೆ. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ಹೇಳಿದರು.

ಹಾಸನದ ಶ್ರೀ ಆದಿಚುಂಚನಗಿರಿ ಶಾಖಾಮಠದ ಶ್ರೀ ಶಂಭುನಾಥ ಸ್ವಾಮಿಗಳು, ಶ್ರೀ ಕೋಡಿಮಠದ ಶ್ರೀ ಚೇತನ್ ದೇವರು, ಅರಕಲಗೂಡು ದೊಡ್ಡಮಠ ಮತ್ತು ಚಿಲುಮೆಮಠ, ಅರೇಮಾದನಹಳ್ಳಿ ವಿಶ್ವಕರ್ಮ ಜಗದ್ಗುರು ಪೀಠ, ಕೋಳಗುಂದ,

ಯಸಳೂರು, ನುಗ್ಗೇಹಳ್ಳಿ, ಮಾಡಾಳು, ತೇಜೂರು, ಕಾರ್ಜುವಳ್ಳಿ, ಜವೇನಹಳ್ಳಿ, ಚಂಗಡಹಳ್ಳಿ, ತಣ್ಣೀರುಹಳ್ಳ ಮಠ, ಮಲ್ಲೇದೇವನಪುರ, ಮಡಬಲು, ಮಾರಗೌಡನಹಳ್ಳಿ ಮತ್ತು ಕೆಸವತ್ತೂರು ಮಠಗಳ ಶ್ರೀಗಳು, ಶಾಸಕರಾದ ಶ್ರೀ ಹೆಚ್.ಕೆ. ಸುರೇಶ್, ಶ್ರೀ ಎಸ್.ಎಚ್. ರಾಜಶೇಖರ್, ಶ್ರೀ ಸಿ.ಜಿ. ಕುಮಾರಸ್ವಾಮಿ, ಶ್ರೀ ಎಂ.ಎನ್. ಕುಮಾರಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು.

**ಧರ್ಮೋ ರಕ್ಷತಿ ರಕ್ಷಿತಃ**

ಧರ್ಮೋ ರಕ್ಷತಿ ರಕ್ಷಿತಃ ಎಂಬುದು ಭಾರತೀಯ ಸಂಸ್ಕೃತಿಯ ಮೂಲಮಂತ್ರ ಎಂದು ಪರಮಪೂಜ್ಯ ಜಗದ್ಗುರುಗಳವರು ಬೆಂಗಳೂರು ಕೋಣನಕುಂಟೆಯ ಪಿಸಿಪಿಎ ರಂಗಮಂದಿರದಲ್ಲಿ ಜೂನ್ 16ರಂದು ಭಾರತೀಯ ಸಂತ ಮಹಾಪರಿಷತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ದೇಶ-ವಿದೇಶಗಳಿಂದ ಆಗಮಿಸಿದ್ದ ಪೂಜ್ಯರುಗಳನ್ನು ಸ್ವಾಗತಿಸುತ್ತಾ ತಿಳಿಸಿದರು.

ಭಾರತೀಯ ಸಂತ ಮಹಾ ಪರಿಷತ್ತಿನ ಉದ್ಘಾಟನೆಯು ಐತಿಹಾಸಿಕ ಹಾಗೂ ಅವಿಸ್ಮರಣೀಯ ಸಂದರ್ಭ. ಭಾರತೀಯ ಸಂಸ್ಕೃತಿಯು ಅತ್ಯಂತ ಪ್ರಾಚೀನವಾದುದು ಹಾಗೂ ಸನಾತನವಾದುದು. ಜಗತ್ತು ಇಂದು ನೋಡುತ್ತಿರುವ ಅನೇಕ ವೈಜ್ಞಾನಿಕ ಸಂಶೋಧನೆಗಳು ಹಾಗೂ ಆವಿಷ್ಕಾರಗಳನ್ನು ಪ್ರಾಚೀನ ಋಷಿಮುನಿಗಳು, ತಪಸ್ವಿಗಳು ಹಾಗೂ ಸಂತಮಹಂತರು ಸಾವಿರಾರು ವರ್ಷಗಳ ಹಿಂದೆಯೇ ಜಗತ್ತಿಗೆ ಪರಿಚಯಿಸಿಕೊಟ್ಟರು ಎಂಬುದು ಭಾರತೀಯರಿಗೆ ಹೆಮ್ಮೆಯ ಸಂಗತಿ.

ಇಡೀ ಜಗತ್ತಿನ ಸಮಸ್ತರಿಗೂ ಸುಖ, ಶಾಂತಿ, ನೆಮ್ಮದಿಗಳು ದೊರಕಲೆಂದು ಸದಾಕಾಲವೂ ಬಯಸುವುದು ಭಾರತೀಯ ಸಂಸ್ಕೃತಿಯ ಧ್ಯೇಯ. ತ್ಯಾಗ, ಕರುಣೆ, ಅಹಿಂಸೆ, ನಡೆ-ನುಡಿಗಳಲ್ಲಿ ಸಾಮರಸ್ಯ, ಸಮಾನತೆ ಇವು ಭಾರತೀಯ ಧರ್ಮ ಪ್ರತಿಪಾದಿಸುವ ಜೀವನಮೌಲ್ಯಗಳಾಗಿದ್ದು, ನಮ್ಮ ಸನಾತನ ಸಂಸ್ಕೃತಿ ಇದರ ಬುನಾದಿಯ ಮೇಲೆಯೇ ನಿಂತಿದೆ. A country as diverse as India is symblolised by the plurality of its culture. ವಿಶ್ವಭ್ರಾತೃತ್ವವೇ ನಮ್ಮ ಸಂಸ್ಕೃತಿಯ ಸಾರ. ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ಎಂಬಂತೆ ಆತ್ಮಸಾಕ್ಷಾತ್ಕಾರ ಮತ್ತು ಲೋಕಹಿತ ಇವು ದೇಶದ ಎರಡು ಪ್ರಮುಖ ಆದರ್ಶಗಳು. Unity in Diversity ವೈವಿಧ್ಯತೆಯಲ್ಲಿ ಏಕತೆ ಎಂಬ ಮೌಲ್ಯ ನಮ್ಮ ಉಸಿರಾಗಿದೆ. "ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು" ಈ ನೆಲದ ಗುಣ. ಇಂತಹ ಅಪೂರ್ವ ಸಂಸ್ಕೃತಿ ಹಾಗೂ ಪರಂಪರೆಯನ್ನು ಸಂರಕ್ಷಿಸಿ, ಬೆಳೆಸಿ ಜನಮಾನಸಕ್ಕೆ ತಲುಪಿಸಿ ತನ್ಮೂಲಕ ಜಗತ್ತಿನ ಕಲ್ಯಾಣಕ್ಕೆ ಶ್ರಮಿಸಬೇಕಾದ ಅಗತ್ಯವಿದೆ.

ಆಧುನಿಕ ಜಗತ್ತಿನ ನಾಗರಿಕತೆಯ ತಲ್ಲಣಗಳು, ಯುದ್ಧೋನ್ಮಾದಗಳು ಇವುಗಳಿಗೆ ಪರಿಹಾರಗಳನ್ನು ಕಂಡುಕೊಂಡು, ಜಗತ್ತು ಶಾಂತಿ, ನೆಮ್ಮದಿ, ಸಮಾಧಾನ,

ಸೌಹಾರ್ದತೆಗಳಿಂದ ಬದುಕಬೇಕಾದುದು ಇಂದಿನ ಅಗತ್ಯವಾಗಿದೆ. ಇದಕ್ಕೆ ಪೂರಕವಾಗಿ ಭಾರತೀಯ ಸಂತ ಮಹಾ ಪರಿಷತ್ತು ಪ್ರಾರಂಭವಾಗುತ್ತಿದೆ. ಇದರ ಧ್ಯೇಯೋದ್ದೇಶಗಳು ಅದಕ್ಕೆ ಪೂರಕವಾಗಿವೆ.

ಈ ಸುಸಂದರ್ಭಕ್ಕೆ ದೇಶದ ಎಲ್ಲ ಭಾಗಗಳಿಂದ ಮತ್ತು ಜಗತ್ತಿನ ಬೇರೆ ಬೇರೆ ದೇಶಗಳಿಂದ ಆಗಮಿಸಿರುವ ಧರ್ಮಗುರುಗಳನ್ನು ನೋಡಿ ಸರ್ವರಿಗೂ ಅತೀವ ಸಂತೋಷವಾಗಿದೆ. ಇಷ್ಟೊಂದು ಜನ ಪೂಜ್ಯರು ಒಟ್ಟಿಗೆ ಸೇರಿರುವುದೇ ಒಂದು ಅಭೂತಪೂರ್ವ ಸಂಗತಿ. ತಮ್ಮ ಎಲ್ಲ ಕಾರ್ಯಗೌರವಗಳನ್ನು ಬದಿಗೊತ್ತಿ ಸನಾತನ ಸಂಸ್ಕೃತಿಯ ಸಂರಕ್ಷಣೆಗೆ ಮುಂದಾಗಿ ಬಂದಿರುವುದು ತಮ್ಮ ಕಳಕಳಿಗೆ, ಹೃದಯವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ಸಭೆಗೆ ಆಗಮಿಸಿರುವ ಪ್ರತಿಯೊಬ್ಬ ಪೂಜ್ಯರ ಪರಂಪರೆ, ಸಾಧನೆ, ಕೊಡುಗೆಗಳು ವಿಶಿಷ್ಟವಾದುವು. ಈ ಪರಿಷತ್ತು ಭಗವದನುಗ್ರಹದಿಂದ ಮತ್ತು ತಮ್ಮೆಲ್ಲರ ಸಲಹೆ, ಸಹಕಾರ, ಮಾರ್ಗದರ್ಶನ ಹಾಗೂ ಸಕ್ರಿಯ ಸಹಭಾಗಿತ್ವದಿಂದ ನಿರಂತರವಾಗಿ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲೆಂದು ಪ್ರಾರ್ಥಿಸುತ್ತೇವೆ ಎಂದು ಹೇಳಿದರು.

ಹರಿಹರಪುರದ ಜಗದ್ಗುರು ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳವರು ಮಾನವ ಕಲ್ಯಾಣಕ್ಕಾಗಿ ಮುಕ್ತ ಚಿಂತನೆಗಳೊಂದಿಗೆ ವಿಕಾಸವಾದದ್ದು ಭಾರತೀಯ ಸಂಸ್ಕೃತಿ. ಶ್ರೀರಾಮ, ಶ್ರೀಕೃಷ್ಣ, ಭಗವಾನ್ ಬುದ್ಧ, ಭಗವಾನ್ ಮಹಾವೀರ, ಗುರುನಾನಕರು, ವ್ಯಾಸ ಮಹರ್ಷಿಗಳು, ಪಂಚಾಚಾರ್ಯರು, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಪತಂಜಲಿ, ಅಗಸ್ತ್ಯರು, ಬಸವಣ್ಣನವರು ಹೀಗೆ ನೂರಾರು ಮಹಾತ್ಮರು ಭಾರತೀಯ ಸಂಸ್ಕೃತಿಯನ್ನು ಶಾಶ್ವತವಾಗಿ ಬೆಳಗುವಂತೆ ಮಾಡಿದರು. ನಮ್ಮ ಸಂಸ್ಕೃತಿ ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತದೆ. ಸತ್ಯ ಒಂದೇ ಮಾರ್ಗಗಳು ಅನೇಕ ಎಂಬಂತೆ ಭಾರತೀಯ ಸಂಸ್ಕೃತಿ ವೈವಿಧ್ಯತೆಯನ್ನು ಹಾಗೂ ಅತ್ಯಂತ ವಿಶಾಲವಾದ ದೃಷ್ಟಿಕೋನವನ್ನು ಹೊಂದಿದೆ ಎಂದು ತಿಳಿಸಿದರು.

ರಾಜರಾಜೇಶ್ವರಿ ಆಶ್ರಮದ ಶ್ರೀ ಜಯೇಂದ್ರ ಪುರಿ ಮಹಾಸ್ವಾಮಿಗಳು ಭಾರತೀಯ ಸಂಸ್ಕೃತಿ ಶಾಂತಿ, ಸಹಬಾಳ್ವೆ ಮತ್ತು ಮಾನವೀಯತೆಗಳಿಂದ ಕೂಡಿದೆ. ಇದೊಂದು ಐತಿಹಾಸಿಕ ದಿನ. ಜಗತ್ತಿನ ಎಲ್ಲ ಭಾರತೀಯ ಸಂತರ ಗುರಿ ಒಂದೇ ಅದು ಲೋಕಕಲ್ಯಾಣ. ಭ್ರಾತೃತ್ವ, ಪ್ರೀತಿ, ಸೌಹಾರ್ದಗಳನ್ನು ಮೂಡಿಸುವುದು ಸಂತರ ಕರ್ತವ್ಯ. ಭಾರತೀಯ ಸಂಸ್ಕೃತಿಯಲ್ಲಿ ಸಂತರಿಗೆ ಮಹತ್ವದ ಸ್ಥಾನವಿದೆ. ಜಗತ್ತಿನ ಉದ್ಧಾರಕ್ಕಾಗಿ ಸಂತರು ಬಹಳ ದೊಡ್ಡ ತ್ಯಾಗವನ್ನು ಮಾಡಿರುತ್ತಾರೆ ಎಂದು ಹೇಳಿದರು.

ಚಿತ್ರಕೂಟ ಶ್ರೀ ತುಳಸಿ ಪೀಠದ ಜಗದ್ಗುರು ಶ್ರೀ ಸ್ವಾಮಿ ರಾಮಭದ್ರಾಚಾರ್ಯರು, ಕಂಚಿ ಕಾಮಕೋಟಿ ಪೀಠದ ಶ್ರೀ ವಿಜಯೇಂದ್ರ ಸರಸ್ವತಿ ಮಹಾಸ್ವಾಮಿಗಳು, ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ತರಳುಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು,

ಕನ್ನೇರಿ ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು, ಪೇಜಾವರ ಮಠದ ಶ್ರೀ ವಿಶ್ವಪಸನ್ನತೀರ್ಥ ಶ್ರೀಪಾದಂಗಳು, ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದಂಗಳು, ಅಮೆರಿಕದ ಹವಾಯಿ ಶ್ರೀ ಬೋಧಿನಾಥ ವೆಯಲನ್ ಸ್ವಾಮಿಗಳು ಸೇರಿದಂತೆ ದೇಶ–ವಿದೇಶದ ಸಾವಿರಾರು ಜನ ಸಂತರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಹೆಚ್.ಡಿ. ದೇವೇಗೌಡರು ರಾಜಕೀಯ ರಂಗದಲ್ಲಿ ಸದಾ ಮಿನುಗುವ ನಕ್ಷತ್ರ**

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ರಾಜಕೀಯ ಕ್ಷೇತ್ರದಲ್ಲಿ ಸದಾ ಮಿನುಗುವ ನಕ್ಷತ್ರ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 22ರಂದು ಶ್ರೀ ಹೆಚ್.ಡಿ. ದೇವೇಗೌಡ ಅಭಿನಂದನಾ ಸಮಿತಿಯವರು ಬೆಂಗಳೂರಿನಲ್ಲಿ ಆಯೋಜಿಸಿದ್ದ 'ಶ್ರೀ ಗಂಗ ಸಾಮ್ರಾಟ ಶ್ರೀಪುರುಷ' ಪ್ರಶಸ್ತಿ ಪ್ರದಾನ ಹಾಗೂ ಕೃತಿ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮುಖ್ಯಮಂತ್ರಿಗಳು ಮತ್ತು ಪ್ರಧಾನಮಂತ್ರಿಗಳಾಗಿ ಮುಂದುವರಿಯಲು ದೇವೇಗೌಡರಿಗೆ ಎಲ್ಲ ಅವಕಾಶಗಳಿದ್ದವು. ಕಡಿಮೆ ಅವಧಿಯಲ್ಲಿ ಪ್ರಧಾನಿಮಂತ್ರಿಗಳಾಗಿದ್ದರೂ ಶಾಶ್ವತವಾಗಿ ಉಳಿಯುವ ಕೆಲಸಗಳನ್ನು ಮಾಡಿದ್ದಾರೆ. ಅವರು ಬದುಕಿನಲ್ಲಿ ಅತ್ಯುತ್ತಮ ಸಂಸ್ಕಾರವನ್ನು ಬೆಳೆಸಿಕೊಂಡಿದ್ದಾರೆ. ಭಕ್ತಿ, ಶ್ರದ್ಧೆ ಮತ್ತು ನಿಷ್ಠೆ ಅಳವಡಿಸಿಕೊಂಡು ಬಂದ ಅಪರೂಪದ ರಾಜಕಾರಣಿಗಳು. ಅವರಿಗೆ ಗಟ್ಟಿ ನೆಲೆಯನ್ನು ಒದಗಿಸಿಕೊಟ್ಟಿದ್ದು ವಿರೋಧಪಕ್ಷದ ನಾಯಕ ಸ್ಥಾನ. ನೀರಾವರಿ ಯೋಜನೆಗಳು ಸೇರಿದಂತೆ ದೇಶದ ಎಲ್ಲ ಸಮಸ್ಯೆಗಳ ಬಗ್ಗೆ ತಿಳಿದುಕೊಂಡಿದ್ದಾರೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದ ನಾಥ ಮಹಾಸ್ವಾಮಿಗಳು ಶ್ರೀ ಹೆಚ್.ಡಿ. ದೇವೇಗೌಡರು ರಾಜಕಾರಣಿಗಳಾಗಿ ದೊಡ್ಡ ಎತ್ತರಕ್ಕೆ ಬೆಳೆದವರು. ದೈವಭಕ್ತರು, ದೇಶಕ್ಕೆ ವಿಶೇಷ ಕೊಡುಗೆ ಕೊಟ್ಟವರು. ಮುಖ್ಯಮಂತ್ರಿಗಳಾಗಿ, ಪ್ರಧಾನ ಮಂತ್ರಿಗಳಾಗಿ ಅದ್ಭುತವಾದ ಕೆಲಸಗಳನ್ನು ಮಾಡಿದ್ದಾರೆ. ಅವರು ನೂರು ವರ್ಷ ಪೂರೈಸಲಿ ಎಂಬುದು ನಮ್ಮ ಆಶಯ ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಕನ್ನಡಿಗರ ಹೃದಯದಲ್ಲಿ ಅಚ್ಚಳಿಯದೆ ಶಾಶ್ವತವಾಗಿ ಉಳಿದಿರುವ ಏಕೈಕ ರಾಜಕಾರಣಿ ಶ್ರೀ ದೇವೇಗೌಡರು. ಅವರು ದೇಶದ ಪ್ರಧಾನ ಮಂತ್ರಿಗಳಾಗಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ. ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲಿ ಪಾಲಕರ ಪಾತ್ರ ಮುಖ್ಯವಾದದ್ದು. ಅದರಂತೆ, ಅವರು ಇಷ್ಟು ಎತ್ತರಕ್ಕೆ ಬೆಳೆಯಲು ಪಾಲಕರು ಅವರು ಧರ್ಮಪತ್ನಿಯೇ. ಅವರ ರಾಜಕೀಯ ಜೀವನ ಆಶ್ಚರ್ಯಪಡುವಂತಹ ರೀತಿಯಲ್ಲಿದೆ. ಇಡೀ ಜೀವನವನ್ನು ಸಮಾಜದ ಉದ್ಧಾರಕ್ಕೆ ಅರ್ಪಣೆ ಮಾಡಿದ್ದಾರೆ. ರೈತರ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡಿದ್ದಾರೆ ಎಂದರು.

ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ನಂಜಾವಧೂತ ಸ್ವಾಮಿಗಳು ದೇವೇಗೌಡರು ಸಮಾಜದ ಅಭ್ಯುದಯಕ್ಕಾಗಿ ಪ್ರಾಮಾಣಿಕವಾಗಿ ದುಡಿದರು. ಅಲ್ಪ ಅಧಿಕಾರಾವಧಿಯಲ್ಲಿ ಕೆಳ ಮತ್ತು ಹಿಂದುಳಿದ ಪಂಗಡಗಳಿಗೆ ಮೀಸಲಾತಿ ಕಲ್ಪಿಸಿದರು. ದೇಶದ ಪ್ರಧಾನಿಗಳಾಗಿ ಹನ್ನೊಂದು ತಿಂಗಳಿನ ಅವಧಿಯಲ್ಲಿಯೆ ಇಡೀ ಜಗತ್ತು ತಿರುಗಿ ನೋಡುವ ರೀತಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು ನಾಡು ಕಂಡ ಅಪರೂಪದ ಮುತ್ಸದ್ಧಿ ದೇವೇಗೌಡರು. ಅವರು ಜೀವಂತ ದಂತಕಥೆಯಾಗಿದ್ದಾರೆ. ಜೀವನಪರ್ಯಂತ ರೈತರ, ಶ್ರಮಿಕರಿಗಾಗಿ ರಾಜಕಾರಣ ಮಾಡಿದ್ದಾರೆ. ಅವರು ಆದರ್ಶ ರಾಜಕಾರಣಿ. ರಾಜಕೀಯ ಕ್ಷೇತ್ರದಲ್ಲಿ ಅತಿ ಹಿಂದುಳಿದ ವರ್ಗದ ನಾಯಕರನ್ನು ಬೆಳೆಸಿದವರು ಎಂದರು.

ತುಮಕೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಗಳು ಸಾಮಾನ್ಯ ವ್ಯಕ್ತಿ ಅಸಾಮಾನ್ಯ ವ್ಯಕ್ತಿಯಾಗಿ ಬೆಳೆಯಬಹುದು ಎಂಬುದನ್ನು ತೋರಿಸಿದವರು ದೇವೇಗೌಡರು. ಸಮಾಜದ ನೂರಾರು ಕಷ್ಟಗಳನ್ನು ಬಗೆಹರಿಸಿದವರು ಎಂದು ತಿಳಿಸಿದರು.

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರು ಅರವತ್ತೈದು ವರ್ಷಗಳ ರಾಜಕಾರಣದಲ್ಲಿ ಎಲ್ಲ ಸಮುದಾಯದವರು ನನ್ನನ್ನು ಬೆಳೆಸಿದರು. ಹಾಗಾಗಿಯೇ ಒಬ್ಬ ಹಳ್ಳಿಯ ರೈತನ ಮಗ ದೇಶದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಈ ನಾಡಿನ ಎಲ್ಲ ಜನರು ನನಗೆ ಆಶೀರ್ವಾದ ಮಾಡಿದ್ದಾರೆ. ಅವರಿಗೆ ನಾನು ಸದಾ ಋಣಿಯಾಗಿರುತ್ತೇನೆ. ಸುತ್ತೂರು ಶ್ರೀಮಠದೊಂದಿಗೆ ನನಗೆ ಆಳವಾದ ಸಂಬಂಧವಿದೆ. ರಾಜೇಂದ್ರ ಶ್ರೀಗಳೊಂದಿಗಿನ ನನ್ನ ಬಾಂಧವ್ಯವನ್ನು ಪದಗಳಲ್ಲಿ ಹೇಳಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

'ಶ್ರೀ ಗಂಗ ಸಾಮ್ರಾಟ ಶ್ರೀಪುರುಷ ಪ್ರಶಸ್ತಿ'ಯನ್ನು ಶ್ರೀ ಎಚ್.ಡಿ. ದೇವೇಗೌಡ ಅವರಿಗೆ ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 93 ಸಾಧಕರಿಗೆ ಎಚ್.ಡಿ. ದೇವೇಗೌಡರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. 'ದೇವೇಗೌಡರ ಬದುಕು ಮತ್ತು ಸಾಧನೆ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಡಾ. ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು, ಆದಿಚುಂಚನಗಿರಿ ಶಾಖಾಮಠದ ಶ್ರೀ ಸೌಮ್ಯನಾಥ ಸ್ವಾಮಿಗಳು, ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ, ಪತ್ರಕರ್ತರಾದ ಶ್ರೀ ಸುಗತ ಶ್ರೀನಿವಾಸ್‌ರಾಜು, ಸಂಸದರಾದ ಡಾ. ಸಿ.ಎನ್. ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು. ಸನ್ಮಾನಿತರಾದ ಶ್ರೀ ಚಿರಂಜೀವಿ ಸಿಂಗ್

ಮಾತನಾಡಿದರು. ಶ್ರೀ ಅ. ದೇವೇಗೌಡ ಸ್ವಾಗತಿಸಿದರು. ಶ್ರೀ ಲಿಂಗಯ್ಯ ವಂದಿಸಿದರು. ಶ್ರೀಮತಿ ದಿವ್ಯಾ ಆಲೂರು ಕಾರ್ಯಕ್ರಮ ನಿರೂಪಿಸಿದರು.

**ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪುನರ್ ಮನನದ ಅಗತ್ಯವಿದೆ**

ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪುನರ್ ಮನನದ ಅಗತ್ಯವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 26ರಂದು ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಕವಿರಾಜಮಾರ್ಗ – ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಎಂಬ ವಿಷಯದ ಕುರಿತು ಆಯೋಜಿಸಿದ್ದ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಇಂತಹ ವಿಚಾರಸಂಕಿರಣಗಳು ನಾಡಿನ ವಿದ್ಯಾರ್ಥಿ ಸಮುದಾಯ ಮತ್ತು ಆಸಕ್ತರಿಗೆ ತುಂಬಾ ಉಪಯುಕ್ತವಾದವು. ಕನ್ನಡ ಸಾಹಿತ್ಯ ಎಲ್ಲ ರೀತಿಯ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ಅಭೂತಪೂರ್ವ ಸಾಧನೆಯನ್ನು ಮಾಡಿದೆ. ಜಗತ್ತಿನ ಪ್ರಮುಖ ಭಾಷೆಗಳ ಸಾಲಿನಲ್ಲಿ ಕನ್ನಡವು ಒಂದಾಗಿದೆ. ಕವಿರಾಜಮಾರ್ಗದ ಅಧ್ಯಯನ ಮತ್ತು ಓದಿನಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಶಾಲತೆಯನ್ನು ಅರಿಯಬಹುದು. ಕಾಲೇಜುಗಳಲ್ಲಿ ಹಳಗನ್ನಡ ಸಾಹಿತ್ಯ ಕುರಿತು ವಿಚಾರಸಂಕಿರಣಗಳನ್ನು ನಡೆಸುತ್ತಿರುವುದು ಪ್ರಶಂಸನೀಯವಾದುದು. ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ನಾಡೋಜ ಡಾ. ಚಂದ್ರಶೇಖರ ಕಂಬಾರರವರು ಜನಪದ ಕತೆಗಳಲ್ಲಿ ಕನ್ನಡ ನಾಡಿನ ಹಿರಿಮೆ ಗರಿಮೆ ಹಾಗೂ ಹಿಂದೆ ಐತಿಹಾಸಿಕ ಸತ್ಯಗಳು ಇವೆ. ಕನ್ನಡದ ಪೂರ್ವಾಚಾರ್ಯರು, ಪಂಡಿತರು, ವಿದ್ವಾಂಸರು ನಾಡಿನ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಯ ಶ್ರೀಮಂತಿಕೆಯನ್ನು ಹಾಡಿ ಹೊಗಳಿದ್ದಾರೆ. ಇದು ಕನ್ನಡ ನಾಡಿಗೆ ಶ್ರೀಮಂತವಾದ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಹಿನ್ನೆಲೆ ಇರುವುದನ್ನು ಸಾಕ್ಷೀಕರಿಸುತ್ತದೆ. ಕನ್ನಡ ನೆಲ ಪ್ರಾಚೀನ ಕಾಲದಿಂದಲೂ ಇತರ ಭಾಷಾ ಸಾಹಿತ್ಯದೊಂದಿಗೆ ಸರ್ವಸಮಾನತೆಯನ್ನು ಸಾರಿದ ಪುಣ್ಯಭೂಮಿ. ಕನ್ನಡ ಭಾಷೆಗೆ ಆಧಾರ ಸಹಿತವಾದ ಪ್ರಾಚೀನತೆ ಬಹಳ ಹಿಂದಿನಿಂದಲೂ ಇದೆ. ಕನ್ನಡೇತರ ಭಾಷೆಗಳ ಕೃತಿಗಳಿಂದಲೂ ನಾಡಿನ ಇತಿಹಾಸದ ಕುರುಹುಗಳು ದೊರೆತಿರುವುದು ಕನ್ನಡ ಭಾಷೆಯ ಚರಿತ್ರೆಯನ್ನು ಬಲ್ಲವರಿಗೆ ತಿಳಿದಿದೆ. ನಮ್ಮ ನಾಡಿನ ಶ್ರೀಮಂತ ಪರಂಪರೆಯನ್ನು ನಮ್ಮ ಜನಪದ ಪುರಾಣ ಕಾವ್ಯಗಳು ಪ್ರಸ್ತಾಪಿಸಿರುವುದು ಇದಕ್ಕೆ ಸಾಕ್ಷಿ. ಮಹಾಭಾರತ, ಗ್ರೀಕ್ ಸಾಹಿತ್ಯ ಕೃತಿಗಳಲ್ಲಿಯೂ ದೊರೆಯುವ ಕುರುಹುಗಳು ಕನ್ನಡ ಭಾಷೆಯ ಬಗೆಗೆ ನಾವು ಹೆಮ್ಮೆ ಪಡುವಂತೆ ಮಾಡಿವೆ ಎಂದು ತಿಳಿಸಿದರು.

ಡಾ. ಪ್ರಧಾನ್ ಗುರುದತ್ತರವರು ಮಾತನಾಡಿ ಇಂತಹ ವಿಚಾರ ಸಂಕಿರಣಗಳು ಒಂದು ಅರ್ಥದಲ್ಲಿ ಉದಾತ್ತ ಅಧ್ಯಯನಗಳು. ಕವಿರಾಜಮಾರ್ಗವು ನಾಡಿನ ಪ್ರಾಚೀನ ಇತಿಹಾಸವನ್ನು ಕನ್ನಡಿಗರ ಹಾಗೂ ಕನ್ನಡ ನಾಡಿನ ವೈಶಿಷ್ಟ್ಯವನ್ನು ಬಿಂಬಿಸುವ ಮೌಲಿಕ ಕೃತಿಯಾಗಿದೆ. ಇದನ್ನು ಕೇವಲ ಅಲಂಕಾರ ಗ್ರಂಥವೆಂದಾಗಲೀ, ಶಾಸ್ತ್ರಕೃತಿ ಎಂದಾಗಲಿ ಗಣಿಸಲು ಸಾಧ್ಯವಿಲ್ಲ. ಇದು ಧರ್ಮ ಸಮನ್ವಯತೆ, ಪರಧರ್ಮ ಸಹಿಷ್ಣುತೆ, ಪರರ ವಿಚಾರಗಳಿಗೆ ಸ್ಪಂದಿಸುವ ಸೌಜನ್ಯಶೀಲತೆಯನ್ನು ಕೂಡ ತಿಳಿಸುತ್ತದೆ. ಈ ಕೃತಿಯಲ್ಲಿ ಭಾಷಾವಿಜ್ಞಾನದ ಕುರುಹುಗಳು, ತಿರುಳ್ಗನ್ನಡ ಸೀಮೆಯ ಕುರಿತ ಪ್ರಸ್ತಾಪಗಳು, ಶಬ್ದ ಅರ್ಥಗಳ ಗ್ರಹಿಕೆ ಎಲ್ಲವೂ ಪ್ರಸ್ತಾಪವಾಗಿದೆ. ಗ್ರಂಥವನ್ನು ಅಧ್ಯಯನ ಮಾಡಿದರೆ ಸೂಕ್ಷ್ಮವಾಗಿ ಅಲಂಕಾರ ಮತ್ತು ಶಾಸ್ತ್ರ ವಿಚಾರಗಳ ಜೊತೆ ಸಾಹಿತ್ಯದ ವಿಚಾರಗಳ ಸಮನ್ವಯವು ಅರಿವಿಗೆ ಬರುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿಗಳಾದ ಡಾ. ಪಿ. ಶಿವರಾಜುರವರು ಸಾಹಿತ್ಯದ ಮೂಲ ಪ್ರೇರಣೆಯನ್ನು ನಾಡಿನ ಸಾಹಿತ್ಯದ ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಅರಿಯಬೇಕಾದ ಅನಿವಾರ್ಯತೆ ಇರುವುದರಿಂದ ಪ್ರಸ್ತುತ ಕಾಲಮಾನದಲ್ಲಿ ಇಂತಹ ವಿಚಾರ ಸಂಕಿರಣಗಳು ಅರ್ಥಪೂರ್ಣವೆನಿಸುತ್ತವೆ. ಕವಿರಾಜಮಾರ್ಗಕಾರ ಒಂದು ಅರ್ಥದಲ್ಲಿ ಕನ್ನಡ ಸಾಹಿತ್ಯದ ಇತಿಹಾಸವನ್ನು ಆರಂಭಿಕವಾಗಿ ಗುರುತಿಸಿದ ಶಾಸ್ತ್ರಕಾರ. ಆತನ ದೇಶೀಯತೆ, ಕನ್ನಡಿಗರ ಸಹೃದಯತೆ ಕುರಿತ ಅವನ ದೃಷ್ಟಿಕೋನಗಳು, ಕನ್ನಡನಾಡಿನ ಭೌಗೋಳಿಕ ವ್ಯಾಪ್ತಿ ಬಗೆಗಿನ ಅವನ ನಿಲುವು ಎಲ್ಲವೂ ಅವನ ಕೃತಿಯನ್ನು ನಾವು ಹೆಮ್ಮೆಯ ಪ್ರತೀಕವೆಂದು ನೋಡುವಂತೆ ಮಾಡಿವೆ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ವಂದಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿಗಳು ಮತ್ತು ಕನ್ನಡ ಸ್ನಾತಕೋತ್ತರ ವಿಭಾಗದ ಅಧ್ಯಾಪಕರಾದ ಡಾ. ಬಿ. ಪ್ರಭುಸ್ವಾಮಿಯವರು ಕಾರ್ಯಕ್ರಮ ನಿರೂಪಿಸಿದರು. ಕು. ಸುಶ್ಮಿತಾ ಮತ್ತು ತಂಡದವರು ಪ್ರಾರ್ಥಿಸಿದರು. ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್‌ರವರು ಉಪಸ್ಥಿತರಿದ್ದರು.

**ಡಾ. ಎಸ್.ಆರ್. ಗುಂಜಾಳರವರಿಗೆ ಬಸವ ರಾಷ್ಟ್ರೀಯ ಪ್ರಶಸ್ತಿ**

ಬಾಗಲಕೋಟೆಯಲ್ಲಿ ಏಪ್ರಿಲ್ 30ರಂದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2024ನೇ ಸಾಲಿನ "ಬಸವ ರಾಷ್ಟ್ರೀಯ ಪ್ರಶಸ್ತಿ"ಯನ್ನು ಶರಣ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಗ್ರಂಥಾಲಯ ತಜ್ಞರಾದ ಡಾ. ಎಸ್.ಆರ್. ಗುಂಜಾಳರವರಿಗೆ ಪ್ರದಾನ ಮಾಡಲಾಗಿದೆ. ಶ್ರೀಯುತರು

1968ರಿಂದ 2022ರವರೆಗೆ ಪ್ರಸಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ವರ್ಗೀಕೃತ ಲೇಖನಸೂಚಿಯನ್ನು ಸಿದ್ಧಪಡಿಸಿಕೊಟ್ಟಿದ್ದು ಅದು ಪ್ರಕಟವಾಗಿರುವುದನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಿದೆ.

**ಕೆಂಪೇಗೌಡರ ವಿಶ್ವಮಾನವ ಪ್ರಜ್ಞೆ ಎಲ್ಲರಲ್ಲೂ ಬೆಳೆಯಬೇಕು**

ಕೆಂಪೇಗೌಡರ ವಿಶ್ವಮಾನವ ಪ್ರಜ್ಞೆ ಎಲ್ಲರಲ್ಲೂ ಬೆಳೆಯಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 27ರಂದು ಬೆಂಗಳೂರಿನಲ್ಲಿ ನಡೆದ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕೆಂಪೇಗೌಡರು ಹಾಕಿಕೊಟ್ಟ ಸಂಪ್ರದಾಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳಸಬೇಕಿದೆ. ಅವರು ಐದನೂರು ವರ್ಷಗಳ ಹಿಂದೆಯೇ ಬೆಂಗಳೂರು ನಗರಕ್ಕೆ ಭದ್ರಬುನಾದಿ ಹಾಕಿದ್ದರು. ಅವರ ದೂರದೃಷ್ಟಿಯ ಚಿಂತನೆಯಿಂದಲೇ ಬೆಂಗಳೂರು ಸಿಲಿಕಾನ್ ಸಿಟಿಯಾಗಿ ಹೊರಹೊಮ್ಮಿದೆ. ಒಂದು ಸಮೃದ್ಧವಾದ ನಗರವನ್ನು ಹೇಗೆ ನಿರ್ಮಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಕೆಂಪೇಗೌಡರ ಆಡಳಿತದ ವೈಖರಿ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ. ಬೆಂಗಳೂರು ನಗರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಲು ಕೆಂಪೇಗೌಡರೆ ಮೂಲ ಕಾರಣ. ಅವರು ಐದನೂರು ವರ್ಷಗಳ ಹಿಂದೆಯೇ ಎಲ್ಲರನ್ನೊಳಗೊಂಡ ಸಮಾಜ ನಿರ್ಮಿಸುವ ದೂರದೃಷ್ಟಿ ಹೊಂದಿದ್ದರು. ವೃತ್ತಿಯಾಧಾರಿತ ಪೇಟೆಗಳನ್ನು ನಿರ್ಮಿಸಿ ಬೆಂಗಳೂರನ್ನು ವಾಣಿಜ್ಯ ಕೇಂದ್ರವಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಗಿದೆ. ಇದರ ಅಭಿವೃದ್ಧಿ ಸರಳವಾದ ಕೆಲಸವಲ್ಲ. ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿಗೆ ಹೊಸರೂಪ ನೀಡಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಶ್ರೀ ಆದಿಚುಂಚನಗಿರಿ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಪಟ್ಟನಾಯಕನಹಳ್ಳಿ ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಂಜಾವಧೂತ ಮಹಾಸ್ವಾಮಿಗಳು, ಬೆಂಗಳೂರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು, ಸಚಿವರುಗಳಾದ ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಕೆ.ಜೆ. ಜಾರ್ಜ್, ಶ್ರೀ ಕೃಷ್ಣ ಭೈರೇಗೌಡ, ಶ್ರೀ ಶಿವರಾಜ ಎಸ್. ತಂಗಡಗಿ, ಶ್ರೀ ಕೆ. ಹೆಚ್. ಮುನಿಯಪ್ಪ, ಶಾಸಕರುಗಳಾದ ಶ್ರೀ ಹೆಚ್.ಡಿ. ರೇವಣ್ಣ, ಶ್ರೀ ಹೆಚ್.ಸಿ. ಬಾಲಕೃಷ್ಣ, ಶ್ರೀ ಎನ್.ಎ. ಹ್ಯಾರಿಸ್, ಶ್ರೀ ಮುನಿರತ್ನ, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಎ.ಸಿ.

ಶ್ರೀನಿವಾಸ್, ಶ್ರೀ ಪುಟ್ಟಣ್ಣ, ಶ್ರೀ ನಾಗರಾಜ್ ಯಾದವ್, ಶ್ರೀ ರಾಜುಗೌಡ, ಮಾಜಿ ಸಂಸದರಾದ ಶ್ರೀ ಡಿ.ಕೆ. ಸುರೇಶ್, ಒಕ್ಕಲಿಗರ ಸಂಘದ ಅಧ್ಯಕ್ಷರಾದ ಶ್ರೀ ಕೆಂಚಪ್ಪಗೌಡ ಮೊದಲಾದವರುಗಳು ಉಪಸ್ಥಿತರಿದ್ದರು.

**ಆರೋಗ್ಯ ಉತ್ತಮವಾಗಿದ್ದರೆ ಮನುಷ್ಯ ಎಲ್ಲವನ್ನೂ ಸಾಧಿಸಬಹದು**

ಆರೋಗ್ಯ ಉತ್ತಮವಾಗಿದ್ದರೆ ಮನುಷ್ಯ ಎಲ್ಲವನ್ನೂ ಸಾಧಿಸಬಹದು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 29ರಂದು ಬೆಂಗಳೂರಿನಲ್ಲಿ ಶ್ವಾಸಯೋಗ ಸಂಸ್ಥೆ ಹಾಗೂ ಸಂತೋಷ್ ಲಾಡ್ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ 2025ರ ಯೋಗರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಉತ್ತಮ ಆರೋಗ್ಯಕ್ಕೆ ಯೋಗ ಅಗತ್ಯ. ಯೋಗ ಮತ್ತು ಪ್ರಾಣಾಯಾಮ ಮನಸ್ಸನ್ನು ಭಗವಂತನಲ್ಲಿ ಲೀನಗೊಳಿಸುತ್ತವೆ. ವಚನಾನಂದ ಶ್ರೀಗಳು ಯೋಗಾಭ್ಯಾಸ ಮಾಡಿ ಸಮಾಜದ ಎಲ್ಲರಿಗೂ ತಿಳಿಸುವುದರಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ಸ್ವಾಮಿ ರಾಮಾರವರು ಮಾದರಿಯಾಗಿದ್ದಾರೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಶಿವ ಎಲ್ಲರಿಗಿಂತ ದೊಡ್ಡ ಯೋಗಿ. ಯೋಗದ ಒಟ್ಟು ಭಾವಾರ್ಥ ಬದುಕನ್ನು ಸರಳವಾಗಿ ಅರ್ಥ ಮಾಡಿಕೊಳ್ಳುವುದಾಗಿದೆ. ಶ್ವಾಸಗುರು ವಚನಾನಂದರು ಕರ್ನಾಟಕದಲ್ಲಿ ಯೋಗದ ವಿಷಯದಲ್ಲಿ ದೊಡ್ಡ ಕ್ರಾಂತಿಯನ್ನು ಮಾಡಿದ್ದಾರೆ. ಕಷ್ಟಪಡುವುದು ಯೋಗವಲ್ಲ, ಸಹಜವಾಗಿ ಮಾಡುವುದೇ ಯೋಗ ಎಂದು ಹೇಳಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್‌ರವರು ಯೋಗ ಎಂಬುದು ಭಾರತೀಯ ಆಧ್ಯಾತ್ಮದ ಭಾಗವಾಗಿದೆ. ಅದೊಂದು ಜೀವನ ಪದ್ಧತಿಯೇ ಹೊರತು ಕಸರತ್ತು ಅಥವಾ ವ್ಯಾಯಾಮವಲ್ಲ ಎಂದು ತಿಳಿಸಿದರು.

ಉಕ್ರೇನ್‌ನ ಸತಿ ಮಾತಾ ಒಲ್ಯೆನಾ ತಾರಾಸೋವಾ, ಉತ್ತರಪ್ರದೇಶದ ಡಾ. ಯೋಗರಿಷಿ ವಿಶ್ವಕೇತು, ಗೋವಾದ ಶ್ರೀ ಬ್ರಹ್ಮೇಶ್ವರಾನಂದ ಸ್ವಾಮಿಗಳು ಹಾಗೂ ಲಡಾಕ್‌ನ ಬಿಕ್ಕು ಸಂಘಸೇನಾರವರಿಗೆ ಯೋಗರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಸಿದ್ಧಗಂಗಾ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು, ಡಾ. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿಗಳು, ಭೋವಿ ಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು, ಕುಂಚಟಿಗ ಪೀಠದ ಶ್ರೀ ಶಾಂತವೀರ ಮಹಾಸ್ವಾಮಿಗಳು, ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು, ಶ್ರೀ ವಿನಯ್ ಗುರೂಜಿ ಸೇರಿದಂತೆ ನೂರಾರು ಮಠಾಧೀಶರುಗಳು, ಸಚಿವರಾದ ಶ್ರೀ ಸಂತೋಷ್ ಲಾಡ್ ಉಪಸ್ಥಿತರಿದ್ದರು.

**ಸಮಾನತೆ ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು**

ಸಾಮಾಜಿಕವಾಗಿ ಕ್ರಾಂತಿಯ ಕಹಳೆಯನ್ನು ಮೊಳಗಿಸುವ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು ಎಂದು ಪರಮಪೂಜ್ಯ ಜಗದ್ಗುರುಗಳವರು ಜೂನ್ 23ರಂದು ಸರಗೂರು ತಾಲ್ಲೂಕು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಶ್ರೀ ಬಸವೇಶ್ವರ ಜಯಂತಿ ಮಹೋತ್ಸವ ಹಾಗೂ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಾನವ ಬದುಕಿನಲ್ಲಿ ಯಶಸ್ಸು ಗಳಿಸಲು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು. ಮಹಾತ್ಮರನ್ನು ಸ್ಮರಿಸಿಕೊಂಡು ಜೀವನದಲ್ಲಿ ಸಾರ್ಥಕತೆ ಕಾಣಬೇಕು. ಇಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸದ್ಗುಣಗಳನ್ನು ಮೈಗೂಡಿಸಿಕೊಂಡರೆ ಕಾರ್ಯಕ್ರಮಗಳು ಸಾರ್ಥಕವಾಗುತ್ತವೆ ಎಂದು ಹೇಳಿದರು.

ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಸಮಾಜದಲ್ಲಿ ಬಸವಣ್ಣನವರ ಬೋಧನೆಗಳನ್ನು ಅಳವಡಿಸಿಕೊಳ್ಳಬೇಕು. ಬಸವಾದಿ ಶರಣರು ನಮ್ಮ ರಾಜ್ಯದಲ್ಲಿ ಹುಟ್ಟಿ ಸಮಾಜವನ್ನು ಪರಿವರ್ತನೆ ಮಾಡಿದ್ದಾರೆ. ಸರಗೂರು ತಾಲೂಕಿನಲ್ಲಿ ಉತ್ತಮ ಪರಿಸರವಿದೆ ಅದನ್ನು ಉಳಿಸಿ ರಕ್ಷಣೆ ಮಾಡಬೇಕಾಗಿದೆ ಎಂದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷರಾದ ಶ್ರೀ ಶಂಕರ ಮಹಾದೇವ ಬಿದರಿಯವರು ಬಸವಣ್ಣನವರು 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯನ್ನು ಮಾಡಿದವರು. ಸಮಾನತೆ, ಅಂತರ್ಜಾತಿ ವಿವಾಹ, ಅನುಭವ ಮಂಟಪದಂತಹ ವ್ಯವಸ್ಥೆಗಳ ಮೂಲಕ ಎಲ್ಲರನ್ನೂ ಒಂದುಗೂಡಿಸಿದರು. ಶರಣರ ಯೋಚನೆಯಂತೆ ಸಮಾನತೆ ಮಾನವೀಯ ದೃಷ್ಟಿಕೋನ ಸಮಾಜದಲ್ಲಿರಬೇಕು. ಸಮುದಾಯವನ್ನು ಒಗ್ಗೂಡಿಸಿ ಸರಗೂರಿನಲ್ಲಿ ಬಸವ ಭವನ ನಿರ್ಮಾಣಕ್ಕೆ ನಿವೇಶನ ಖರೀದಿಸಿರುವುದು ಸಂತಸ ತಂದಿದೆ. ಕಟ್ಟಡ ನಿರ್ಮಾಣಕ್ಕೆ ಸಂಪೂರ್ಣ ಸಹಕಾರವನ್ನು ನೀಡಲಾಗುವುದು ಎಂದು ತಿಳಿಸಿದರು.

ಸೋಮಹಳ್ಳಿ, ಗಾವಡಗೆರೆ, ಹಂಚಿಪುರ, ದಡದಹಳ್ಳಿ, ಬಿಡುಗಲು ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಜಿ.ಟಿ. ದೇವೇಗೌಡ, ಮಾಜಿ ಸಚಿವರಾದ ಶ್ರೀ ಎಂ. ಶಿವಣ್ಣ, ಮಹಾಸಭಾ ತಾಲ್ಲೂಕಾಧ್ಯಕ್ಷರಾದ ಶ್ರೀ ಕೆ.ಎಸ್. ವೀರಭದ್ರಪ್ಪ, ಶ್ರೀ ಎಸ್.ಎಸ್. ಪ್ರಭುಸ್ವಾಮಿ, ಶ್ರೀ ಸುಧಾ ಮೃತ್ಯುಂಜಯಪ್ಪ, ಶ್ರೀ ಯು.ಎಸ್. ಶೇಖರ್ ಮೊದಲಾದವರು ಉಪಸ್ಥಿತರಿದ್ದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ಗೋಪಾಲಗೌಡ ಶಾಂತವೇರಿ**
**ಅಂತರಂಗ–ಬಹಿರಂಗ**
ಡಾ. ಎಚ್.ಸಿ. ವಿಷ್ಣುಮೂರ್ತಿ
ಪ್ರ: ಅನನ್ಯ ಪ್ರಕಾಶನ
ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ
ಪು : 684, ಬೆಲೆ : 800/–

**ಬಸವಗೀತೆ**
**(ಬಸವಣ್ಣನವರ ವಚನಾಧಾರಿತ ಗೀತ ಸಂಕಲನ)**
ಶ್ರೀ ಮಾರೇನಹಳ್ಳಿ ಲೋಕೇಶ್
ಪ್ರ: ಶರಣಸ್ಥಲ
ಎಪಿಎಂಸಿ ಹಿಂಭಾಗ, ಕೃಷ್ಣರಾಜಪೇಟೆ
ಪು : 72, ಬೆಲೆ : 70/–

**ನಿಜಗುರುವಿನೆಡೆಗೆ**
ಶ್ರೀ ಮಾರೇನಹಳ್ಳಿ ಲೋಕೇಶ್
ಪ್ರ: ಅತ್ತಿಗುಪ್ಪೆ ಸಾಹಿತ್ಯ ಬಳಗ
ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ
ಪು : 112, ಬೆಲೆ : 150/–

**ಕೃಷ್ಣರಾಜಪೇಟೆ ತಾಲ್ಲೂಕು**
**ಸಾಹಿತಿ–ಮಾಹಿತಿ**
ಶ್ರೀ ಎಸ್. ಶಿವಕುಮಾರ್
ಪ್ರ: ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು
ಪು : 88, ಬೆಲೆ : 100/–

**ಶ್ರೀ ಶಿವಕುಮಾರ ವಾಣಿ – 1**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಗಳವರ ಅಮರ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 172, ಬೆಲೆ : 200/–

**ಶ್ರೀ ಶಿವಕುಮಾರ ವಾಣಿ – 2**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಯವರ ದಿವ್ಯ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 164, ಬೆಲೆ : 200/–

**ಶ್ರೀ ಶಿವಕುಮಾರ ದರ್ಶನ**
**(ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ**
**ಯವರ ಜೀವನ ಮತ್ತು ಸಾಧನೆ)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 628, ಬೆಲೆ : 750/–

**ಶ್ರೀ ಶಿವಕುಮಾರ ವಾಣಿ – 3**
**(ನುಡಿ ಸಂದೇಶಗಳು)**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 132, ಬೆಲೆ : 150/–

**Sri Shivakumara Vani**
ಶ್ರೀ ಬಾಲಚಂದ್ರ ಎಂ.
ಪ್ರ: ಪವಾಡಶ್ರೀ ಪ್ರಕಾಶನ
ನೆಲಮಂಗಲ, ಬೆಂಗಳೂರು
ಪು : 148, ಬೆಲೆ : 150/–

**ಎನ್ನೊಳಗಣ ಬಸವಪ್ರಭು**
ಪುಷ್ಪ ಬಸವರಾಜ ಬಣಕಾರ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಜೆ.ಪಿ.ನಗರ ಅಂಚೆ
ಬೆಂಗಳೂರು
ಪು : 124, ಬೆಲೆ : 100/–

**ವಚನವಲ್ಲರಿ (ಆಧುನಿಕ ವಚನಗಳು)**
ಪುಷ್ಪ ಬಸವರಾಜ ಬಣಕಾರ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಜೆ.ಪಿ.ನಗರ ಅಂಚೆ
ಬೆಂಗಳೂರು
ಪು : 102, ಬೆಲೆ : 100/–

# ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 98809 96196

**ಎಚ್.ಎಸ್. ಸಿದ್ಧಗಂಗಪ್ಪ**
ಟಿಎ. 1617, ಮಾತೃಶ್ರೀ,
ಸರ್ ಎಂ.ವಿ. ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560 091
ಮೊ: 98455 65871

**ಶ್ರೀ ರಂಗನಾಥ್ ಮೈಸೂರು**
ನಂ.75,ಇ ಬ್ಲಾಕ್, 15ನೇ ಕ್ರಾಸ್
11ನೇ ಮುಖ್ಯರಸ್ತೆ
ಜೆ.ಪಿ.ನಗರ
ಮೈಸೂರು 570 008
ಮೊಬೈಲ್: 9845791252

ಹಿಂಬದಿ ಪುಟದ ಚಿತ್ರ

ಬೆಂಗಳೂರಿನಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರಿಗೆ ಶ್ರೀ ಗಂಗ ಸಾಮ್ರಾಟ ಶ್ರೀಪುರುಷ ಪ್ರಶಸ್ತಿಯನ್ನು ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಆದಿಚುಂಚನಗಿರಿ ಮತ್ತು ಸುತ್ತೂರು ಜಗದ್ಗುರುಗಳವರು, ಶ್ರೀ ಶಂಭುನಾಥ ಸ್ವಾಮಿಗಳು, ಶ್ರೀ ನಂಜಾವಧೂತ ಸ್ವಾಮಿಗಳು, ಶ್ರೀ ನಿಶ್ಚಲಾನಂದನಾಥ ಸ್ವಾಮಿಗಳು, ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಗಳು ಹಾಗೂ ಡಾ. ಸಿ.ಎನ್. ಮಂಜುನಾಥ್‌ರವರುಗಳಿದ್ದಾರೆ (22 ಜೂನ್ 2025)




ಸಂಗಮದಲ್ಲಿ ಶ್ರೀ ಮಹಾದೇವ ತಾತ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ. ಹರ್ಷವರ್ಧನ್, ಹಂಪಸಾಗರ ಶ್ರೀಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಹುಲ್ಲಹಳ್ಳಿ, ಮಾದಹಳ್ಳಿ, ಸಾಲೂರು ಮಠ ಹಾಗೂ ಪಡವಲು ಮಠದ ಶ್ರೀಗಳಿದ್ದಾರೆ (9 ಜೂನ್ 2025)




ವಿಜಯ ಕರ್ನಾಟಕ ದಿನಪತ್ರಿಕೆ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಕಾಯಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಐತಿಚಂಡ ರಮೇಶ್ ಉತ್ತಪ್ಪ, ಪ್ರೊ. ಎನ್.ಕೆ. ಲೋಲಾಕ್ಷಿ, ಶ್ರೀ ಟಿ.ಎಸ್. ಶ್ರೀವತ್ಸ ಹಾಗೂ ಪ್ರೊ. ಶರಣಪ್ಪ ವಿ. ಹಲಸೆಯವರುಗಳಿದ್ದಾರೆ (3 ಜೂನ್ 2025)




ನೆಲಮಂಗಲ ತಾಲ್ಲೂಕು ಟಿ. ಬೇಗೂರಿನಲ್ಲಿ ಬಡರೋಗಿಗಳಿಗೆ ಚಿಕಿತ್ಸೆ ನೀಡಲೆಂದೇ 26 ವರ್ಷಗಳಿಂದ ನಡೆಸಿಕೊಂಡು ಬಂದಿರುವ ವಿಲೇಜ್ ಕ್ಲಿನಿಕ್‌ಗೆ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಪದ್ಮಶ್ರೀ ಡಾ. ಬಿ. ರಮಣ ರಾವ್‌ರವರು ರೋಗಿಗಳನ್ನು ಪರಿಶೀಲಿಸುತ್ತಿರುವುದು. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಮೊದಲಾದವರಿದ್ದಾರೆ (8 ಜೂನ್ 2025)



ರಾಯಚೂರಿನಲ್ಲಿ ಮುನ್ನೂರು ಕಾಪು ಸಮಾಜದ ವತಿಯಿಂದ ಆಯೋಜಿಸಿದ್ದ ಮುಂಗಾರು ಸಾಂಸ್ಕೃತಿಕ ಬೆಳ್ಳಿಹಬ್ಬವನ್ನು ಸುತ್ತೂರು ಹಾಗೂ ಕಾಶಿಯ ಕಿರಿಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಇಂಗಳೇಶ್ವರದ ಶ್ರೀಗಳು, ಶ್ರೀ ಎ. ಪಾಪಾರೆಡ್ಡಿ, ಸೋಮವಾರಪೇಟೆ ಹಿರೇಮಠ, ಸುಲ್ತಾನಪುರ, ಎಲೆಬಿಚ್ಚಾಲಿ ಮಠದ ಶ್ರೀಗಳು ಮೊದಲಾದವರುಗಳಿದ್ದಾರೆ (11 ಜೂನ್ 2025)



ನೆಲಮಂಗಲ ತಾಲ್ಲೂಕು ಟಿ. ಬೇಗೂರಿನಲ್ಲಿ ಬಡರೋಗಿಗಳಿಗೆ ಚಿಕಿತ್ಸೆ ನೀಡಲೆಂದೇ 26 ವರ್ಷಗಳಿಂದ ನಡೆಸಿಕೊಂಡು ಬಂದಿರುವ ವಿಲೇಜ್ ಕ್ಲಿನಿಕ್‌ಗೆ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿದ ಸಂದರ್ಭದಲ್ಲಿ ಪೂಜ್ಯರೊಂದಿಗೆ ಶ್ರೀಮತಿ ಜಾಹ್ನವಿ ಭೋಗ್‌ರಾಜ್, ಡಾ. ಬಿ. ರಮಣ ರಾವ್, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಡಾ. ಅಭಿಜಿತ್ ಭೋಗ್‌ರಾಜ್, ಡಾ. ಅಂಕಿತಾ, ಆಸ್ಪತ್ರೆಯ ವೈದ್ಯರುಗಳು ಹಾಗೂ ಸಿಬ್ಬಂದಿವರ್ಗದವರುಗಳಿದ್ದಾರೆ (8 ಜೂನ್ 2025)



ಶ್ರೀ ಪುಷ್ಪಗಿರಿ ಮಹಾಸಂಸ್ಥಾನ ಮಠದ ಶ್ರೀ ಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ 21ನೇ ವರ್ಷದ ಪುಣ್ಯಸಂಸ್ಮರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ನುಗ್ಗೇಹಳ್ಳಿ, ಕೋಳಗುಂದ, ಹಾಸನ ಶ್ರೀ ಆದಿಚುಂಚನಗಿರಿ ಶಾಖಾಮಠ, ಪುಷ್ಪಗಿರಿ, ದೊಡ್ಡಮಠ, ಅರೆಮಾದನಹಳ್ಳಿ, ಯಸಳೂರು, ಮಾಡಾಳು, ಶಿರದನಹಳ್ಳಿ, ಮಲ್ಲೇದೇವನಪುರ ಮಠಗಳ ಶ್ರೀಗಳು, ಶ್ರೀ ಹೆಚ್.ಕೆ. ಸುರೇಶ್ ಹಾಗೂ ಶ್ರೀ ಎಸ್.ಹೆಚ್. ರಾಜಶೇಖರ್‌ರವರುಗಳಿದ್ದಾರೆ (14 ಜೂನ್ 2025)



ಬೆಂಗಳೂರು ಬಿಹೆಚ್‌ಇಲ್ ಬಸವ ಕಲ್ಯಾಣ ಸಮಿತಿಯಿಂದ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪ್ರಕಾಶ್ ಭೂಮರಡ್ಡಿ, ಶ್ರೀ ಆದಪ್ಪ ಎಸ್. ನಾಗೂರ, ಶ್ರೀ ಮಹಾಂತೇಶ್ ಬಿರಾದಾರ, ಶ್ರೀ ಶಂಕರ ಮಹಾದೇವ ಬಿದರಿ ಹಾಗೂ ಶ್ರೀ ಎಂ. ಕೃಷ್ಣಪ್ಪನವರುಗಳಿದ್ದಾರೆ (15 ಜೂನ್ 2025)




ಬೆಂಗಳೂರಿನಲ್ಲಿ ಶ್ವಾಸಯೋಗ ಸಂಸ್ಥೆ ಹಾಗೂ ಸಂತೋಷ್ ಲಾಡ್ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಗೋವಾದ ಶ್ರೀ ಬ್ರಹ್ಮೇಶ್ವರಾನಂದ ಸ್ವಾಮಿಗಳು, ಉತ್ತರಪ್ರದೇಶದ ಡಾ. ಯೋಗರಿಷಿ ವಿಶ್ವಕೇತು, ಲಡಾಕ್‌ನ ಬಿಕ್ಕು ಸಂಘಸೇನಾ ಹಾಗೂ ಉಕ್ರೇನ್‌ನ ಸತಿ ಮಾತಾ ಒಲೈನಾ ತಾರಾಸೋವಾರವರುಗಳಿಗೆ ಯೋಗರತ್ನ ಪ್ರಶಸ್ತಿಯನ್ನು ಸುತ್ತೂರು, ನಿಡಸೋಸಿ, ಸಿದ್ಧಗಂಗೆ, ಮಾದಾರ ಚನ್ನಯ್ಯ ಗುರುಪೀಠ, ಭೋವಿ ಪೀಠ, ಕುಂಚಟಿಗ ಪೀಠ, ವಾಲ್ಮೀಕಿ ಪೀಠ, ಉಪ್ಪಾರ ಪೀಠದ ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀ ವಿನಯ್ ಗುರೂಜಿ, ಶ್ರೀ ಸಂತೋಷ್ ಲಾಡ್ ಮೊದಲಾದವರುಗಳಿದ್ದಾರೆ (29 ಜೂನ್ 2025)



ಸರಗೂರು ತಾಲ್ಲೂಕು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಶಂಕರ ಮಹದೇವ ಬಿದರಿ, ಗಾವಡಗೆರೆ ಶ್ರೀಗಳು, ಪಡುವಲು ಮಠದ ಶ್ರೀಗಳು, ಸೋಮಹಳ್ಳಿ, ಹಂಚಿಪುರ ಮತ್ತು ದಡದಹಳ್ಳಿ ಮಠಗಳ ಶ್ರೀಗಳು ಮೊದಲಾದವರುಗಳಿದ್ದಾರೆ (23 ಜೂನ್ 2025)



ಮೈಸೂರು ವಕೀಲರ ಸಂಘದಿಂದ ಆಯೋಜಿಸಿದ್ದ ಬಸವ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್. ಲೋಕೇಶ್, ಶ್ರೀ ಎಸ್.ಎಸ್. ಮಿತ್ತಲಕೋಡ್, ನ್ಯಾಯಾಧೀಶರಾದ ಶ್ರೀಮತಿ ಉಷಾರಾಣಿ, ಗೌ.ನ್ಯಾ. ಡಾ. ಶಿವರಾಜ್ ವಿ. ಪಾಟೀಲ್, ಶ್ರೀ ಕೆ.ಎಸ್. ಮಹದೇವಪ್ರಸಾದ್, ಶ್ರೀ ಬಿ.ಆರ್. ಚಂದ್ರಮೌಳಿ ಶ್ರೀ ಎ.ಜಿ. ಸುಧೀರ್‌ರವರುಗಳಿದ್ದಾರೆ (13 ಜೂನ್ 2025)



ಹುಣಸೂರು ತಾಲ್ಲೂಕು ಗೆಜ್ಜಯ್ಯನವಡ್ಡರಗುಡಿಯಲ್ಲಿ ಶ್ರೀ ಕೈಲಾಸೇಶ್ವರಸ್ವಾಮಿ ದೇವಾಲಯದ 15ನೇ ವರ್ಷದ ಕುಂಭಾಭೀಷೇಕ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಶ್ರೀ ಭಾಗ್ಯಕುಮಾರ್, ಶ್ರೀ ಮಾದಪ್ಪ, ಶ್ರೀ ನಂಜುಂಡಪ್ಪ, ಗಾವಡಗೆರೆ ಶ್ರೀಗಳು, ಶ್ರೀ ಬಸವರಾಜಪ್ಪ, ಮಾದಾಪುರ, ಚಿಕ್ಕತುಪ್ಪೂರು ಶ್ರೀಗಳು, ಶ್ರೀ ಮಂಜು, ಶ್ರೀ ಚಿಕ್ಕಣ್ಣ, ಮಾದಹಳ್ಳಿ ಶ್ರೀಗಳು, ಶ್ರೀ ಮಹದೇವಪ್ಪ, ಶ್ರೀ ಮಂಜುನಾಥ್, ಶ್ರೀ ಕೆಂಡಗಣ್ಣ, ಶ್ರೀ ಶಿವಣ್ಣ ಮೊದಲಾದವರುಗಳಿದ್ದಾರೆ (18 ಜೂನ್ 2025)




ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಶ್ರೀ ಜಗದೀಶ್ ಶರ್ಮಾ ಸಂಪ, ಶ್ರೀ ಶಿವಸಿದ್ದೇಶ್ವರ ಮಹಾಸ್ವಾಮಿಗಳು, ಶ್ರೀ ಸಿ.ಟಿ. ರವಿ, ಹಾಗೂ ಡಾ. ಸಿ. ಸೋಮಶೇಖರ್‌ರವರುಗಳಿದ್ದಾರೆ (2 ಜೂನ್ 2025)



ಮೈಸೂರು ಕಲಾ ಸಂವಹನ ಟ್ರಸ್ಟ್ ವತಿಯಿಂದ ರಮಾಗೋವಿಂದ ರಂಗಮಂದಿರದಲ್ಲಿ ಆಯೋಜಿಸಿದ್ದ ಸಿತಾರ್ ಮಾಧುರ್ಯ ಸಮೂಹ ಸಿತಾರ್ ವಾದನ, ರಾಗ್ ಚಿಕಿತ್ಸಾ ಪುಸ್ತಕ ಲೋಕಾರ್ಪಣೆ, ಸಿತಾರ್ ತರಗತಿಗಳ ಪ್ರಾರಂಭೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಸವರಾಜ ಹಡಪದ, ಶ್ರೀಮತಿ ರಾಜೇಶ್ವರಿ ವಸ್ತ್ರದ, ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ ಹಾಗೂ ಉಸ್ತಾದ್ ಮೊಹಸಿನ್ ಖಾನ್‌ರವರುಗಳಿದ್ದಾರೆ (31 ಮೇ 2025)



ಬೆಂಗಳೂರು ಡಾ. ಬಾಬು ಜಗಜೀವನರಾಂ ಭವನದಲ್ಲಿ ನಡೆದ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತಿ ಮಹೋತ್ಸವವನ್ನು ಸುತ್ತೂರು, ಆದಿಚುಂಚನಗಿರಿ, ಸ್ಫಟಿಕಪುರಿ ಮತ್ತು ವಿಶ್ವ ಒಕ್ಕಲಿಗರ ಮಠಗಳ ಪೂಜ್ಯರುಗಳ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ನಾಗರಾಜ್ ಯಾದವ್, ಶ್ರೀ ಎನ್.ಎ. ಹ್ಯಾರಿಸ್, ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಮುನಿರತ್ನ, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಕೃಷ್ಣಭೈರೇಗೌಡ ಮೊದಲಾದವರುಗಳಿದ್ದಾರೆ (27 ಜೂನ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 6, June 2025



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org